ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 3 ಗುರುವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 168 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com


₹4

ಮೈಸೂರು ದಸರಾ ಇಂದು ಆರಂಭ



ಬೆಳಗ್ಗೆ 9.15ರಿಂದ 9.45 ಗಂಟೆಯೊಳಗೆ ಶುಭ ವೃಶ್ಚಿಕ ಲಗ್ನದಲ್ಲಿ ಹಿರಿಯ ಸಾಹಿತಿ, ನಾಡೋಜ ಡಾ.ಹಂಪ ನಾಗರಾಜಯ್ಯ ಅವರಿಂದ ನಾಡದೇವತೆ ಶ್ರೀ ಚಾಮುಂಡೇಶ್ವರಿ ದೇವಿಗೆ ಅಗ್ರಪೂಜೆ ಸಲ್ಲಿಕೆ ಮೂಲಕ ಈ ಸಾಲಿನ ನವರಾತ್ರಿ ಉತ್ಸವಕ್ಕೆ ಚಾಲನೆ

ಇದೇ ವೇಳೆ ದಸರಾಗೆ ಮೆರೆಗು ನೀಡುವ ಕಾರ್ಯಕ್ರಮಗಳೂ ಉದ್ಘಾಟನೆ



ಡಾ.ಹಂಪ ನಾಗರಾಜಯ್ಯ



ಐತಿಹಾಸಿಕ ದಸರಾ ಉದ್ಘಾಟನೆಗೆ ಸಜ್ಜಾಗಿರುವ ಸಾಂಸ್ಕೃತಿಕ ನಗರಿ ಮೈಸೂರು ವಿದ್ಯುತ್ ದೀಪಗಳ ಬೆಳಕಿನಲ್ಲಿ ಮಿಂದೇಳುತ್ತಿದೆ...

ಮೈಸೂರು, ಅ.2(ಆರ್‌ಕೆ)–ವಿಶ್ವ ಪ್ರಸಿದ್ಧ ಮೈಸೂರು ದಸರಾ ಮಹೋತ್ಸವಕ್ಕೆ ನಾಳೆ (ಅ.3) ಚಾಲನೆ ದೊರೆಯಲಿದೆ. ಚಾಮುಂಡಿ ಬೆಟ್ಟದ ತಾಯಿ, ನಾಡದೇವತೆ ಶ್ರೀ ಚಾಮುಂಡೇಶ್ವರಿಗೆ ಅಗ್ರಪೂಜೆ ನೆರವೇರಿಸಿದ ಬಳಿಕ ಬೆಳ್ಳಿ ರಥದಲ್ಲಿ ಪ್ರತಿಷ್ಠಾಪಿಸಿದ ಅಧಿದೇವತೆಯ ಉತ್ಸವಮೂರ್ತಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಹಿರಿಯ ಸಾಹಿತಿ, ನಾಡೋಜ ಹಂಪ ನಾಗರಾಜಯ್ಯ ಗುರುವಾರ ಬೆಳಗ್ಗೆ 9.15ರಿಂದ 9.45 ಗಂಟೆಯೊಳಗೆ ಸಲ್ಲುವ ಶುಭ ವೃಶ್ಚಿಕ ಲಗ್ನದಲ್ಲಿ ನವರಾತ್ರಿ ಉತ್ಸವವನ್ನು ವಿಧ್ಯುಕ್ತವಾಗಿ ಉದ್ಘಾಟಿಸುವರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಉಪಸ್ಥಿತಿಯಲ್ಲಿ ನಡೆಯಲಿರುವ ದಸರಾ ಉದ್ಘಾಟನಾ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್, ಹೆಚ್.ಡಿ.ಕುಮಾರಸ್ವಾಮಿ, ಪ್ರಹ್ಲಾದ್ ಜೋಷಿ, ವಿ.ಸೋಮಣ್ಣ, ಶೋಭಾ ಕರಂದ್ಲಾಜೆ ಮುಖ್ಯ ಅತಿಥಿಗಳಾಗಿ ಭಾಗ ವಹಿಸುವರು. ಶಾಸಕ ಜಿ.ಟಿ.ದೇವೇಗೌಡರು ಅಧ್ಯಕ್ಷತೆ ವಹಿಸಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಚಿವರಾದ ಕೆ.ವೆಂಕಟೇಶ್, ಶಿವರಾಜ ತಂಗಡಗಿ, ಹೆಚ್.ಕೆ.ಪಾಟೀಲ್, ರಾಮಲಿಂಗಾರೆಡ್ಡಿ, ಕೆ.ಜೆ.ಜಾರ್ಜ್, ಈಶ್ವರಖಂಡ್ರೆ, ಬಿ.ಎಸ್.ಸುರೇಶ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಚಾಮುಂಡಿ ಸನ್ನಿಧಿಯಲ್ಲಿ ತಾಯಿಗೆ ವಿಶೇಷ ಪೂಜೆಯೊಂದಿಗೆ ಅಕ್ಟೋಬರ್ 12ರವರೆಗೆ ನಡೆಯುವ 9 ದಿನಗಳ ನವರಾತ್ರಿ ಉತ್ಸವದ ಎಲ್ಲಾ ಕಾರ್ಯಕ್ರಮಗಳಿಗೂ ಚಾಲನೆ ದೊರೆಯಲಿದೆ. ಗುರುವಾರ ಬೆಳಗ್ಗೆ 11.30 ಗಂಟೆಗೆ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಚಲನ ಚಿತ್ರೋತ್ಸವ ಉದ್ಘಾಟಿಸುವರು. ಬೆಳಗ್ಗೆ 11.30ಕ್ಕೆ ಮಹಾರಾಜ ಕಾಲೇಜು ಮೈದಾನದಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಹೆಚ್.ಮುನಿಯಪ್ಪ, ಆಹಾರ ಮೇಳ ಉದ್ಘಾಟಿಸಲಿದ್ದು, ಮಧ್ಯಾಹ್ನ 12.30 ಗಂಟೆಗೆ ಕುಪ್ಪಣ್ಣ ಪಾರ್ಕ್‌ನಲ್ಲಿ ಸಿದ್ದರಾಮಯ್ಯ ಫಲಪುಷ್ಪ ಪ್ರದರ್ಶನಕ್ಕೆ ಚಾಲನೆ ನೀಡುವರು. ಸಂಜೆ 4 ಗಂಟೆಗೆ ಶ್ರೀ ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ದಸರಾ ಕುಸ್ತಿ ಪಂದ್ಯಾವಳಿ, ಸಂಜೆ 4 ಗಂಟೆಗೆ ಸಿದ್ಧಾರ್ಥ ನಗರದ ಕಾವಾದಲ್ಲಿ ರಾಜ್ಯ ಮಟ್ಟದ ಶಿಲ್ಪಕಲೆ, ಚಿತ್ರ ಕಲಾಕೃತಿ, ಕರಕುಶಲ ಕಲೆಗಳ ಪ್ರದರ್ಶನ, ಸಂಜೆ 4.30 ಗಂಟೆಗೆ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ರಾಜ್ಯ ದಸರಾ ಸಿಎಂ ಕಪ್ ಕ್ರೀಡಾಕೂಟ, ಸಂಜೆ 5 ಗಂಟೆಗೆ ಭಾರತ ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನದಲ್ಲಿ ಪುಸ್ತಕ ಮೇಳ ಉದ್ಘಾಟನೆ ಗೊಳ್ಳಲಿದೆ. ಸಂಜೆ 5.30 ಗಂಟೆಗೆ ರಂಗಾಯಣದ ಭೂಮಿಗೀತ ರಂಗಮಂದಿರದಲ್ಲಿ ನವರಾತ್ರಿ ಜಾನಪದ ರಂಗ ಉತ್ಸವ, ಸಂಜೆ 6.30 ಗಂಟೆಗೆ ಕೆಆರ್ ಆಸ್ಪತ್ರೆ ಎದುರು ಸಯ್ಯಾಜಿ ರಾವ್ ರಸ್ತೆಯಲ್ಲಿ ವಿದ್ಯುತ್ ದೀಪಾಲಂಕಾರ ಹಾಗೂ ರಾತ್ರಿ 7.30 ಗಂಟೆಗೆ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ದಸರಾ ವಸ್ತುಪ್ರದರ್ಶನಕ್ಕೂ ಗುರುವಾರ ಚಾಲನೆ ದೊರೆಯಲಿದೆ. ಸಂಜೆ 6 ಗಂಟೆಗೆ ಅರಮನೆ ಆವರಣದಲ್ಲಿ ಆಯೋಜಿಸಿರುವ ದಸರಾ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಲಿರುವ ಮುಖ್ಯಮಂತ್ರಿಗಳು, ಖ್ಯಾತ ಶಹನಾಯ್ ■ 9ನೇ ಪುಟಕ್ಕೆ

ಇಂದು ಸಿಎಂ ಪತ್ನಿ ಪಾರ್ವತಿ ಹೆಸರಿನ 14 ನಿವೇಶನಗಳ ಕ್ರಯಪತ್ರ ನೋಂದಣಿ ರದ್ದು!

ಮೈಸೂರು, ಅ. 2(ಆರ್‌ಕೆ)–ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಬಿ.ಎಂ. ಪಾರ್ವತಿ ಅವರಿಗೆ ಹಂಚಿಕೆಯಾಗಿರುವ ವಿವಾದಾತ್ಮಕ 14 ನಿವೇಶನಗಳ ಕ್ರಯಪತ್ರ ನೋಂದಣಿಯನ್ನು ನಾಳೆ (ಅ.3) ಮುಡಾ ಕಚೇರಿಯಲ್ಲಿರುವ ಜಿಲ್ಲಾ ಹೆಚ್ಚುವರಿ ಉಪನೋಂದಣಾಧಿಕಾರಿಗಳು ರದ್ದುಪಡಿಸುವ ಸಂಭವವಿದೆ.



ನಿನ್ನೆ (ಅ.1)ಯಷ್ಟೇ ಮುಖ್ಯಮಂತ್ರಿ ಸಿದ್ದರಾಮಯ್ಯ ಪುತ್ರ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಮುಡಾ ಕಚೇರಿಗೆ ಖುದ್ದು ಭೇಟಿ ನೀಡಿ, ಆಯುಕ್ತರಿಗೆ ತಮ್ಮ ತಾಯಿ ಪಾರ್ವತಿ ಅವರು 14 ನಿವೇಶನಗಳನ್ನು ವಾಪಸ್ ನೀಡುವುದಾಗಿ ಬರೆದಿರುವ ಪತ್ರವನ್ನು ತಲುಪಿಸಿದ್ದರು. ಈ ಹಿನ್ನೆಲೆಯಲ್ಲಿ ಆಯುಕ್ತ ಎ.ಎನ್. ರಘುನಂದನ್ ಸಂಜೆ ವೇಳೆಗೆ ಪಾರ್ವತಿ ಹೆಸರಿಗೆ ನೋಂದಣಿಯಾಗಿರುವ 14 ನಿವೇಶನಗಳ ಕ್ರಯಪತ್ರಗಳನ್ನು ರದ್ದುಪಡಿಸಿ ಸದರಿ ಆಸ್ತಿಗಳನ್ನು ವಾಪಸ್ ಪ್ರಾಧಿಕಾರದ ಹೆಸರಿಗೆ ನಮೂದು ಮಾಡುವಂತೆ ಆದೇಶ ಪ್ರತಿಯನ್ನು ಉಪ ನೋಂದಣಾಧಿಕಾರಿಗಳಿಗೆ ತಲುಪಿಸಿದ್ದರು. ಆದೇಶ ಕೈಸೇರುವಷ್ಟರಲ್ಲಿ ಉಪನೋಂದಣಾಧಿಕಾರಿ ಕಚೇರಿಯ ಕಾವೇರಿ–2 ಸಾಫ್ಟ್‌ವೇರ್ ಕಾರ್ಯ ಸ್ಥಗಿತಗೊಂಡಿದ್ದರಿಂದ ಉಪನೋಂದಣಾಧಿಕಾರಿಗಳು ಈ ಸಂಬಂಧ ಯಾವುದೇ ಪ್ರಕ್ರಿಯೆ ನಡೆಸಲಾಗಲಿಲ್ಲ. ಇಂದು (ಅ. 2) ರಜಾ ದಿನವಾಗಿದ್ದು, ■ 9ನೇ ಪುಟಕ್ಕೆ

ಕೊಡಗಲ್ಲಿ ಅಂತಾರಾಷ್ಟ್ರೀಯ ಡ್ರಗ್ಸ್ ಮಾರಾಟ ಜಾಲ ಪತ್ತೆ

- ಥೈಲ್ಯಾಂಡ್‌ನಿಂದ ಗೋಣಿಕೊಪ್ಪಕ್ಕೆ; ಇಲ್ಲಿಂದ ದುಬೈಗೆ ಹೈಡ್ರೊ ಗಾಂಜಾ ಸಾಗಿಸಲು ಯತ್ನ
- 7 ಆರೋಪಿಗಳ ಬಂಧನ; 3 ಕೋಟಿ ರೂ. ಮೌಲ್ಯದ ಮಾದಕ ದ್ರವ್ಯ ವಶ



ಸುದ್ದಿಗೋಷ್ಠಿಯಲ್ಲಿ ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಅಂತಾರಾಷ್ಟ್ರೀಯ ಡ್ರಗ್ಸ್ ಜಾಲ ಪ್ರಕರಣದ ಮಾಹಿತಿ ನೀಡಿದರು.



ಮೆಹರೂಫ್ | ರವೂಫ್ | ನಾಸಿರುದ್ದೀನ್ | ಯಾಹ್ಯಾ | ವಾಜಿದ್ | ರಿಯಾಜ್ | ಅಕಿನಾಸ್

ಮಡಿಕೇರಿ, ಅ.2–ಥೈಲ್ಯಾಂಡ್‌ನಿಂದ ಗೋಣಿಕೊಪ್ಪ ಹಾಗೂ ಇಲ್ಲಿಂದ ದುಬೈಗೆ 'ಹೈಡ್ರೊ ಗಾಂಜಾ' ಸಾಗಿಸಲು ಹೊಂಚು ಹಾಕಿದ್ದ ಅಂತಾರಾಷ್ಟ್ರೀಯ ಡ್ರಗ್ಸ್ ಮಾರಾಟ ಜಾಲವನ್ನು ಪತ್ತೆ ಹಚ್ಚಿರುವ ಕೊಡಗು ಜಿಲ್ಲಾ ಪೊಲೀಸರು, ಕೊಡಗು ಹಾಗೂ ಕೇರಳದ ಒಟ್ಟು 7 ಆರೋಪಿಗಳನ್ನು ಬಂಧಿಸಿದ್ದಾರೆ. ಆರೋಪಿಗಳಿಂದ 3 ಕೋಟಿ ರೂ. ಮೌಲ್ಯದ 3 ಕೆಜಿ 31 ಗ್ರಾಂ ಹೈಡ್ರೋ ಗಾಂಜಾ ವಶಕ್ಕೆ ಪಡೆಯಲಾಗಿದೆ.

ವಿರಾಜಪೇಟೆ ಹೆಗ್ಗಳ ಗ್ರಾಮದ ಎಂ.ಯು.ನಾಸಿರುದ್ದೀನ್ (26), ಎಡಪಾಲದ ಸಿ.ಹೆಚ್.ಯಾಹ್ಯ(28), ಕುಂಜಿಲ ಗ್ರಾಮದ ಅಕಿನಾಸ್(26), ಬೇಟೋಳಿ ಗ್ರಾಮದ ವಾಜಿದ್ (26) ಹಾಗೂ ಕೇರಳ ಕಣ್ಣೂರಿನ ರಿಯಾಝ್(44), ಮೂಲತಃ ಆರ್ಜಿ ಗ್ರಾಮದ ಬೆಂಗಳೂರಿನ ಸಂಜಯ್ ನಗರದಲ್ಲಿ ವಾಸವಿದ್ದ ರವೂಫ್(28) ಮತ್ತು ಪ್ರಮುಖ ಆರೋಪಿಯಾದ ಕಾಸರಗೋಡು ■ 5ನೇ ಪುಟಕ್ಕೆ

ಮೈಸೂರು ಮಿತ್ರ ಗುರುವಾರ 3 ಅಕ್ಟೋಬರ್ 2024

ಪ್ರಜಾತಂತ್ರ ವ್ಯವಸ್ಥೆ ಉಳಿಸಿ, ಸರ್ವಾಧಿಕಾರಿ ದಬ್ಬಾಳಿಕೆ ನಿಲ್ಲಿಸಿ

ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್ ವಿನೂತನ ಪ್ರತಿಭಟನೆ



ಮೈಸೂರಿನ ಹಾರ್ಡಿಂಜ್ ವೃತ್ತದ ಬಳಿ ಕನ್ನಡ ಪರ ಹೋರಾಟಗಾರ ವಾಟಾಳ್ ನಾಗರಾಜ್ ಸತ್ಯಾಗ್ರಹ ನಡೆಸಿದರು.

ಮೈಸೂರು, ಅ.2(ಜಿಎ)–ಪ್ರಜಾತಂತ್ರ ವ್ಯವಸ್ಥೆಯನ್ನು ಉಳಿಸುವಂತೆ, ಸರ್ವಾಧಿಕಾರಿ ದಬ್ಬಾಳಿಕೆ ನಿಲ್ಲಿಸುವಂತೆ ಆಗ್ರಹಿಸಿ ಕನ್ನಡ ಪರ ಹೋರಾಟಗಾರ ವಾಟಾಳ್ ನಾಗರಾಜ್ ಮೈಸೂರಿನ ಹಾರ್ಡಿಂಜ್ ವೃತ್ತದ ಬಳಿ ಸತ್ಯಾಗ್ರಹ ನಡೆಸಿದರು.

ಸತ್ಯಾಗ್ರಹಕ್ಕೂ ಮುನ್ನ ಗಾಂಧಿ ಜಯಂತಿ ಅಂಗವಾಗಿ ಗಾಂಧೀಜಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳ ಮೇಲೆ ನಡೆಸುತ್ತಿರುವ ದಬ್ಬಾಳಿಕೆ ಖಂಡನೀಯ. ರಾಜಭವನವು ರಾಜಕೀಯ ಭವನ ಆಗಬಾರದು. ರಾಜಭವನದ ಹೆಸರು ಬದಲಾವಣೆ ಮಾಡಿ ಪ್ರಜಾಭವನ ಎಂದು ಕರೆಯಬೇಕು ಎಂದು ಒತ್ತಾಯಿಸಿದರು.

ರಾಜ್ಯಪಾಲರ ಪ್ರಜಾ ವಿರೋಧಿ ನೀತಿ ಬದಲಾಗಬೇಕು. ಕೇಂದ್ರದ ಅಧೀನದಲ್ಲಿರುವ ಸಂಸ್ಥೆಗಳನ್ನು ದುರ್ಬಳಕೆ ಮಾಡಬಾರದು. ನರೇಂದ್ರ ಮೋದಿ ಸರ್ಕಾರ ಬಂದ ನಂತರ ಮುಖ್ಯಮಂತ್ರಿಗಳನ್ನು ಜೈಲಿನಲ್ಲಿಡುವ ಸಂಸ್ಕೃತಿ ಆರಂಭವಾಗಿದೆ. ಅನೇಕ ರಾಜ್ಯಗಳಲ್ಲಿ ರಾಜ್ಯಪಾಲರ ದಬ್ಬಾಳಿಕೆ ನಡೆಯುತ್ತಿದೆ. ಆದ್ದರಿಂದ ಪ್ರಜಾತಂತ್ರ ವ್ಯವಸ್ಥೆಯನ್ನು ಉಳಿಸಿ ಸರ್ವಾಧಿಕಾರಿ ದಬ್ಬಾಳಿಕೆ ನಿಲ್ಲಿಸುವಂತೆ ಆಗ್ರಹಿಸಿದರು.


ಮುಖ್ಯಮಂತ್ರಿ ಸಿದ್ದರಾಮಯ್ಯ ಯಾವುದೇ ಕಾರಣಕ್ಕೂ ರಾಜೀನಾಮೆ ನೀಡಬಾರದು. ಈ ವಿಚಾರದಲ್ಲಿ ರಾಜ್ಯಪಾಲರ ವಿರುದ್ಧ ಹೋರಾಟ ನಡೆಸುತ್ತೇನೆ ಎಂದ ಅವರು, ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರು ಮುಡಾಗೆ ನಿವೇಶನ ಹಿಂದಿರುಗಿಸುವ ನಿರ್ಧಾರದಲ್ಲಿ ಯಾವುದೇ ತಪ್ಪಿಲ್ಲ ಎಂದರು.

ಮಹಾತ್ಮ ಗಾಂಧೀಜಿ ಜಯಂತಿ; ಮೈಸೂರಲ್ಲಿ ಪ್ರಾರ್ಥನಾ ಸಭೆ

ಮೈಸೂರು, ಅ.2(ಎಂಟಿವೈ)– ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರ ಜನ್ಮ ದಿನದ ಹಿನ್ನೆಲೆಯಲ್ಲಿ ಜಿಲ್ಲಾಡಳಿತದ ವತಿಯಿಂದ ಸರ್ವಧರ್ಮ ಪ್ರಾರ್ಥನಾ ಸಭೆಯೊಂದಿಗೆ ಗಾಂಧೀಜಿ ಸ್ಮರಣ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಮೈಸೂರಿನ ಮಹಾತ್ಮ ಗಾಂಧಿ ವೃತ್ತದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಗಾಂಧೀಜಿ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಪುಷ್ಪ ನಮನ ಸಲ್ಲಿಸಿದರು. ಬಳಿಕ ಜಿಲ್ಲಾಡಳಿತ, ಮೈಸೂರು ಮಹಾನಗರ ಪಾಲಿಕೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಯೋಗದಲ್ಲಿ ಪುರಭವನದಲ್ಲಿ ಆಯೋಜಿಸಿದ್ದ ಗಾಂಧೀಜಿ ಸ್ಮರಣಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಹಾತ್ಮರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಸರ್ವಧರ್ಮ ಪ್ರಾರ್ಥನೆಯಲ್ಲಿ ಭಾಗಿಯಾದರು.





ಮಹಾತ್ಮ ಗಾಂಧೀಜಿ ಜಯಂತಿ ಹಿನ್ನೆಲೆಯಲ್ಲಿ ಜಿಲ್ಲಾಡಳಿತದ ವತಿಯಿಂದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಹಾತ್ಮ ಗಾಂಧಿ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿದರು. ಚಿತ್ರದಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಜಿ.ಪಂ. ಸಿಇಓ ಕೆ.ಎಂ.ಗಾಯತ್ರಿ, ಡಿಸಿಪಿ ಎಂ.ಮುತ್ತುರಾಜ್, ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಅವರನ್ನು ಕಾಣಬಹುದು. (ಬಲಚಿತ್ರ) ಮೈಸೂರಿನ ಪುರಭವನದಲ್ಲಿ ಗಾಂಧಿ ಜಯಂತಿ ಅಂಗವಾಗಿ ಆಯೋಜಿಸಿದ್ದ ಸರ್ವಧರ್ಮಗಳ ಪಾರ್ಥನಾ ಸಭೆಯಲ್ಲಿ ವಿವಿಧ ಧರ್ಮಗಳ ಗುರುಗಳು ಮಹಾತ್ಮ ಗಾಂಧಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

ಪ್ರಾರ್ಥನಾ ಸಭೆಯಲ್ಲಿ ರಾಮಕೃಷ್ಣ ಆಶ್ರಮದ ಅಗರಾನಂದ ಸ್ವಾಮೀಜಿ ಅವರಿಂದ ಹಿಂದೂ ಧರ್ಮ ಪ್ರಾರ್ಥನೆ, ಸೆಂಟ್ ಫಿಲೋಮಿನಾ ಚರ್ಚ್‌ನ ಫಾದರ್ ಪೀಟರ್ ಅವರಿಂದ ಕ್ರೈಸ್ತ ಧರ್ಮ ಪ್ರಾರ್ಥನೆ, ಅಬ್ದುಲ್ ಸಲಾಂ ಅವರಿಂದ ಇಸ್ಲಾಂ ಧರ್ಮದ ಪ್ರಾರ್ಥನೆ, ಜೈನ ಗುರು ಸುರೇಶ್‌ಕುಮಾರ್ ಜೈನ್ ಅವರಿಂದ ಜೈನ ಧರ್ಮದ ಪ್ರಾರ್ಥನೆ, ಡಾ.ಕಲ್ಯಾಣ್ ಶ್ರೀ ಬಂತೇಜಿ ಅವರಿಂದ ಬೌದ್ಧ ಧರ್ಮದ ಪ್ರಾರ್ಥನೆ, ಸುಕ್ವಿಂದರ್ ಸಿಂಗ್ ಅವರಿಂದ ಸಿಖ್ ಧರ್ಮದ ಪ್ರಾರ್ಥನೆ ಜರುಗಿತು. ನಂತರ ಸ್ವಚ್ಛತಾ ಪ್ರತಿಜ್ಞಾ ವಿಧಿ ಸ್ವೀಕಾರ ಮಾಡಲಾಯಿತು.

ಇದೇ ವೇಳೆ ಮಹಾತ್ಮ ಗಾಂಧೀಜಿ ಅವರ ಜನ್ಮದಿನದ ಹಿನ್ನೆಲೆಯಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಡೆಸಿದ ಜಿಲ್ಲಾ ಮಟ್ಟದ ಬಾಪೂಜಿ ಪ್ರಬಂಧ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಪಂಚ ಗ್ಯಾರಂಟಿ ಯೋಜನೆಗಳ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್, ಶಾಸಕ ತನ್ವೀರ್ ಸೇಠ್, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಜಿ.ಪಂ. ಸಿಇಓ ಕೆ.ಎಂ. ಗಾಯತ್ರಿ, ಎಸ್ಪಿ ಡಾ.ವಿಷ್ಣುವರ್ಧನ್, ಪಾಲಿಕೆ ಆಯುಕ್ತ ಆಶಾದ್ ಉರ್ ರೆಹಮಾನ್ ಷರೀಫ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಉಪನಿರ್ದೇಶಕ ಡಿ.ಅಶೋಕ್‌ಕುಮಾರ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಮಹಾತ್ಮ ಗಾಂಧೀಜಿ, ಲಾಲ್ ಬಹದ್ದೂರ್ ಶಾಸ್ತ್ರಿಯವರ ಆದರ್ಶಗಳನ್ನು ಮೈಗೂಡಿಸಿಕೊಳ್ಳೋಣ



ಮೈಸೂರು ವಿಜಯನಗರದ 2ನೇ ಹಂತದಲ್ಲಿರುವ ಚೆಸ್ಕಾಂ ನಿಗಮದ ಕಚೇರಿಯಲ್ಲಿ ಮಹನೀಯರ ಭಾವಚಿತ್ರಕ್ಕೆ ಸೆಸ್ಕ್ ತಾಂತ್ರಿಕ ವಿಭಾಗದ ನಿರ್ದೇಶಕ ಮುನಿಗೋಪಾಲ್ ರಾಜು ನಮಿಸಿದರು.

ಮೈಸೂರು, ಅ.2–ಪ್ರಸ್ತುತ ಸಂದರ್ಭದಲ್ಲಿ ವಿಜ್ಞಾನ, ತಂತ್ರಜ್ಞಾನ ಕ್ಷೇತ್ರ ಸಾಕಷ್ಟು ಪ್ರಗತಿ ಹೊಂದಿದ್ದರೂ, ನಮ್ಮಲ್ಲಿ ಮಾನವೀಯತೆ ಮೌಲ್ಯಗಳು ಕುಸಿಯುತ್ತಿವೆ ಎಂದು ಸೆಸ್ಕ್ ತಾಂತ್ರಿಕ ವಿಭಾಗದ ನಿರ್ದೇಶಕ ಮುನಿಗೋಪಾಲ್‌ರಾಜು ಕಳವಳ ವ್ಯಕ್ತಪಡಿಸಿದ್ದಾರೆ.

ವಿಜಯನಗರದ 2ನೇ ಹಂತದಲ್ಲಿರುವ ನಿಗಮದ ಕಚೇರಿಯಲ್ಲಿ ಬುಧವಾರ ನಡೆದ ಗಾಂಧಿ ಜಯಂತಿ ಕಾರ್ಯಕ್ರಮದಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಮಾನವೀಯ ಮೌಲ್ಯಗಳು ಕುಸಿಯುತ್ತಿರುವುದು ಕಳವಳಕಾರಿ. ಕೆಲವೊಮ್ಮೆ ನಮ್ಮ ಸುತ್ತಲಿನ ಬೆಳವಣಿಗೆ ಗಮನಿಸಿದರೆ, ಮುಂದೇನು ಎಂಬ ಆತಂಕ ಮೂಡುತ್ತದೆ ಎಂದರು.

ಈ ನಿಟ್ಟಿನಲ್ಲಿ ಗಾಂಧೀಜಿ ಅವರ ಆದರ್ಶಗಳನ್ನು ಮೈಗೂಡಿಸಿಕೊಂಡು ಕೆಲಸ ಮಾಡಿದ್ದೇ ಆದಲ್ಲಿ ನಮ್ಮ ಹಾಗೂ ರಾಷ್ಟ್ರದ ಪ್ರಗತಿ ಸಾಧ್ಯವಾಗಲಿದೆ.

ಅಂತೆಯೇ ಜೈ ಜವಾನ್ ಜೈ ಕಿಸಾನ್ ಎಂಬ ನಾಣ್ಣುಡಿಯೊಂದಿಗೆ ಕರ್ತವ್ಯ ಪ್ರಜ್ಞೆ ಸೇವೆಯಿಂದ ಕೆಲಸ ಮಾಡಿದ ಲಾಲ್ ಬಹದ್ದೂರ್ ಶಾಸ್ತ್ರಿ ಅವರು ಸಹ ನಮಗೆ ಆದರ್ಶವಾಗಿದ್ದು, ಅವರ ಆದರ್ಶಗಳನ್ನು ಸಹ ನಾವೆಲ್ಲರೂ ಮೈಗೂಡಿಸಿಕೊಳ್ಳಬೇಕು. ನಮ್ಮ ಮಕ್ಕಳಿಗೂ ಈ ಬಗ್ಗೆ ತಿಳುವಳಿಕೆ ಮೂಡಿಸಬೇಕು ಎಂದು ಹೇಳಿದರು.

ನಾಡಹಬ್ಬ ದಸರಾ ಮಹೋತ್ಸವದ ಅಂಗವಾಗಿ ನಡೆಯುವ ದೀಪಾಲಂಕಾರಕ್ಕೆ ಎಲ್ಲ ರೀತಿಯ ತಯಾರಿ ಮಾಡಿಕೊಳ್ಳಲಾಗಿದೆ. ಈ ಬಾರಿಯ ದಸರಾ ದೀಪಾಲಂಕಾರವನ್ನು ಅತ್ಯಂತ ಉತ್ತಮವಾಗಿ ಮಾಡಲಾಗಿದ್ದು, ಕೆಲವು ರಸ್ತೆಗಳಲ್ಲಿ ಮಾಡಿರುವ ದೀಪಾಲಂಕಾರ ಎಲ್ಲರನ್ನೂ ನಿಬ್ಬೆರಗಾಗುವಂತೆ ಮಾಡುತ್ತಿದೆ. ಕೆಲವು ವೃತ್ತಗಳ ದೀಪಾಲಂಕಾರ ಕಲಾತ್ಮಕತೆಯನ್ನು ಎತ್ತಿಹಿಡಿಯುವಂತಿದೆ ಎಂದರು.

ಈ ಸಂದರ್ಭದಲ್ಲಿ ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕಿ ಜಿ.ಶೀಲಾ ಸೇರಿದಂತೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಹಾಜರಿದ್ದರು.

ಮೈಸೂರಿನ ವಿದ್ಯಾರ್ಥಿನಿಗೆ ರಾಜ್ಯ ಪುರಸ್ಕಾರ



2024ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ 2ನೇ ಸ್ಥಾನ ಪಡೆದ (625/624) ಮೈಸೂರಿನ ವಿದ್ಯಾರ್ಥಿನಿ ಕು. ಎಂ.ಡಿ.ಸುಧೀಕ್ಷ ಅವರನ್ನು ಬ್ರಾಹ್ಮಣ ಅಭಿವೃದ್ಧಿ ಮಂಡಳಿ ವತಿಯಿಂದ ಬೆಂಗಳೂರಿನಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಪುರಸ್ಕರಿಸಿದರು. ಶಾಸಕ ವಿಶ್ವಾಸ್ ವಸಂತ್ ವೈದ್ಯ, ಮಂಡಳಿಯ ಅಧ್ಯಕ್ಷ ಅಸಗೋಡು ಜಯಸಿಂಹ ಉಪಸ್ಥಿತರಿದ್ದರು.

ರಿಯಲ್ ಎಸ್ಟೇಟ್‌ಗೆ ಬಳಸಲಾಗುತ್ತಿರುವ ಭೂಮಿಯಲ್ಲಿ ಕೃಷಿಗೆ ನಿರ್ಧಾರ

ಕೋಚನಹಳ್ಳಿ ರೈತ ಹೋರಾಟ ಸಮಿತಿ ಘೋಷಣೆ

ಮೈಸೂರು,ಅ.2(ಜಿಎ)–ಕೋಚನಹಳ್ಳಿ ರೈತರ ಹೋರಾಟಕ್ಕೆ ಇತ್ತ ಜಿಲ್ಲಾಡಳಿತ, ಅತ್ತ ರಾಜ್ಯ ಸರ್ಕಾರ ಸ್ಪಂದಿಸದ ಹಿನ್ನೆಲೆಯಲ್ಲಿ ರೈತರು ತಾವು ಕಳೆದುಕೊಂಡ ಜಮೀನುಗಳ ಬೇಲಿ ಕಿತ್ತು, ಕೃಷಿ ಚಟುವಟಿಕೆ ಆರಂಭಿಸಲಿದ್ದಾರೆ ಎಂದು ಕೋಚನಹಳ್ಳಿ ರೈತರ ಹೋರಾಟ ಸಮಿತಿ ತಿಳಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕಾರ್ಮಿಕ ಮುಖಂಡ ಚಂದ್ರಶೇಖರ ಮೇಟಿ ಮಾತನಾಡಿ, ಕೋಚನಹಳ್ಳಿ ರೈತರ ನೂರಾರು ಎಕರೆ ಭೂಮಿಯನ್ನು ಖರೀದಿಸಿ, ಆರಂಭಿಸುವ ಮುನ್ನವೇ ಅದನ್ನು ಬಂದ್ ಮಾಡಿದ್ದಲ್ಲದೆ, 50ರಿಂದ ಒಂದು ಕೋಟಿ ರೂ.ಗೆ ಕೆಐಎಡಿಬಿಗೆ ಮಾರಾಟ ಮಾಡಲಾಗಿದೆ. ಭೂಮಿ ಕಳೆದುಕೊಂಡ ರೈತರಿಗೆ ಸೂಕ್ತ ಪರಿಹಾರ ನೀಡಬೇಕೆಂಬ ಮನವಿಯನ್ನು ನಿರ್ಲಕ್ಷಿಸಲಾಗಿದೆ. ಹೀಗಾಗಿ ಇಂತಹ ಎಲ್ಲ ರೈತರು ಶೀಘ್ರದಲ್ಲೇ ಆ ಜಮೀನುಗಳ ಬೇಲಿ ಕಿತ್ತು, ಹಿಂಗಾರು ಬೆಳೆ ಬಿತ್ತಲು ನಿರ್ಧರಿಸಿದ್ದಾರೆ ಎಂದರು.

ತಾವು ಆರಂಭಿಸುವ ಕಂಪನಿಯಲ್ಲಿ ಖಾಯಂ ಕೆಲಸ ನೀಡುವುದಾಗಿ ಭರವಸೆ ನೀಡಿ ಎಕರೆಗೆ ಒಂದೂವರೆ ಲಕ್ಷದಿಂದ 5 ಲಕ್ಷ ರೂ. ನೀಡಿ ಹೆರಿಟೇಜ್ ಗಾಲ್ಫ್ ಕ್ಲಬ್ ಹೆಸರಿನಲ್ಲಿ ಖರೀದಿಸಲಾಗಿತ್ತು. ಆದರೆ, ಕಂಪನಿ ಆರಂಭಿಸಲಿಲ್ಲ. ಕೆಲಸ ಕೇಳಿದವರಿಗೆ ಪೊದೆ ತೆರವು, ಕಚ್ಚಾ ರಸ್ತೆ ನಿರ್ಮಾಣದಂತಹ ಕೆಲಸ ನೀಡಿ ಜೀತದಾಳಿನಂತೆ ನಡೆಸಿಕೊಳ್ಳಲಾಗಿತ್ತು. ಈ ನಡುವೆ ಕೆಐಎಡಿಬಿಗೆ ಒಂದು ಹಂತದಲ್ಲಿ ಎಕರೆಗೆ 50 ಲಕ್ಷದಂತೆ, ಎರಡನೇ ಹಂತದಲ್ಲಿ ಎಕರೆಗೆ ಕೋಟಿ ರೂ.ಗೆ ಮಾರಾಟ ಪ್ರಕ್ರಿಯೆ ನಡೆದಿತ್ತು. ಇದರ ವಿರುದ್ಧವೂ ಸೇರಿ ತಮಗೆ ಸೂಕ್ತ ಪರಿಹಾರ ನೀಡಬೇಕೆಂದು ಆಗ್ರಹಿಸಿ ಕಳೆದ ಮೂರೂವರೆ ವರ್ಷದಿಂದ ಹೋರಾಟ ನಡೆದಿದ್ದರೂ ಜಿಲ್ಲಾಡಳಿತವಾಗಲೀ, ಸರ್ಕಾರವಾಗಲೀ ಕ್ರಮ ಕೈಗೊಂಡಿಲ್ಲ. ಹೀಗಾಗಿ ಅನಿವಾರ್ಯವಾಗಿ ರೈತರು ತಾವು ಕಳೆದುಕೊಂಡ ಜಮೀನುಗಳ ಬೇಲಿ ಕಿತ್ತು, ಕೃಷಿ ಚಟುವಟಿಕೆ ಆರಂಭಿಸಲು ಮುಂದಾಗಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಉಗ್ರನರಸಿಂಹೇಗೌಡ, ಬೊಕ್ಕಳ್ಳಿ ನಂಜುಂಡಸ್ವಾಮಿ, ನಾಗನಹಳ್ಳಿ ವಿಜಯೇಂದ್ರ, ಮಣಕಪ್ಪ, ಚಿಕ್ಕನಹಳ್ಳಿ ರಾಘವೇಂದ್ರ, ಮಹೇಶ್ ಉಪಸ್ಥಿತರಿದ್ದರು.

ನಾಳೆ, ನಾಳಿದ್ದು ಮೈಸೂರು ಧ್ಯಾನ ದಸರಾ

ಮೈಸೂರು, ಅ.2(ಜಿಎ)–ಮೈಸೂರಿನ ಪಿರಮಿಡ್ ಸ್ಪಿರಚ್ಯುಯಲ್ ಸೊಸೈಟಿ ಮೂವ್‌ಮೆಂಟ್, ಕಾವೇರಿ ಪಿರಮಿಡ್ ಧ್ಯಾನ ಕೇಂದ್ರಗಳ ಸಂಯುಕ್ತಾಶ್ರಯದಲ್ಲಿ ಶ್ರೀ ಹೊಸಮಠದ ನಟರಾಜ ಪ್ರತಿಷ್ಠಾನದಲ್ಲಿ ಅ.4, 5ರಂದು ಬೆಳಗ್ಗೆ 8.30 ರಿಂದ ರಾತ್ರಿ 7ರವರೆಗೆ ಮೈಸೂರು ಧ್ಯಾನ ದಸರಾ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸೊಸೈಟಿ ಅಧ್ಯಕ್ಷ ಚನ್ನಬಸವ ಈ ವಿಷಯ ತಿಳಿಸಿ, ದಸರಾ ಅಂಗವಾಗಿ ಈ ಕಾರ್ಯಕ್ರಮ ನಡೆಯಲಿದ್ದು, ಸಾಮೂಹಿಕ ಸಂಗೀತ ನಾದ ಧ್ಯಾನ, ದಸರಾ ಹಬ್ಬದ ಮಹತ್ವ, ಮುಖ್ಯ ಅತಿಥಿಗಳ ಸಂದೇಶ, ಸಾಂಸ್ಕೃತಿಕ ಕಾರ್ಯಕ್ರಮಗಳು ಇರಲಿವೆ. ಎಲ್ಲರಿಗೂ ಉಚಿತ ಪ್ರವೇಶವಿದೆ ಎಂದರು. ಗೋಷ್ಠಿಯಲ್ಲಿ ಸಂಸ್ಥೆಯ ಹರಿಣಿ, ನಟರಾಜ್, ಅನಿತಾ, ಕೃಷ್ಣವೇಣಿ ಉಪಸ್ಥಿತರಿದ್ದರು.

ಗಾಂಧಿ, ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ



ಮೈಸೂರು ನಗರ ಬಿಜೆಪಿ ಕಾರ್ಯಾಲಯದಲ್ಲಿ ಮಹಾತ್ಮ ಗಾಂಧಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ ಆಚರಿಸಲಾಯಿತು. ಮೈಸೂರು ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ ಗ್ರಾಮಾಂತರ ಅಧ್ಯಕ್ಷ ಎಲ್.ಆರ್.ಮಹದೇವ ಸ್ವಾಮಿ, ರಾಜ್ಯ ವಕ್ತಾರ ಎಂ.ಜಿ.ಮಹೇಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು, ಕೇಬಲ್ ಮಹೇಶ್, ಮುಖಂಡರಾದ ಹೇಮಾ, ಮೈ.ಪು.ರಾಜೇಶ್, ಶೈಲೇಂದ್ರ, ರಾಕೇಶ್ ಭಟ್, ರಶ್ಮಿ, ಪ್ರತಾಪ್, ದಯಾನಂದ, ಶಶಿಕಾಂತ್, ಚಂದ್ರಶೇಖರಸ್ವಾಮಿ, ಮಧು, ಚಂದನ್, ಪುಟ್ಟಮಣಿ, ಸೂರ್ಯ, ರಾಘವೇಂದ್ರ ಇದ್ದರು.



ಮೈಸೂರಿನ ಜೆಡಿಎಸ್ ಕಚೇರಿಯಲ್ಲಿ ಗಾಂಧಿ ಜಯಂತಿ ಆಚರಿಸಲಾಯಿತು. ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಗಾಂಧೀಜಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಈ ವೇಳೆ ಮಾಜಿ ಮೇಯರ್ ಆರ್.ಲಿಂಗಪ್ಪ, ಹೆಚ್.ಕೆ.ರಾಮು, ಕೃಷ್ಣಪ್ಪ ಗಂಗಾಧರಗೌಡ, ಭಾಗ್ಯವತಿ, ಎಸ್‌ಬಿಎಂ ಮಂಜು, ಫಾಲ್ಕನ್ ಬೋರೇಗೌಡ, ಮಂಜುನಾಥ್, ರಾಮು, ರಮಣಿ (ರಮೇಶ್), ಶಿವಣ್ಣ, ರಮೇಶ್, ದಾಕ್ಷಾಯಿಣಿ, ಸುಮಿತ್ರ ಕುಮಾರ್, ಲಕ್ಷ್ಮಿ, ಗೌರಿ ಯಾದವ್ ಇನ್ನಿತರರಿದ್ದರು.

ಇಂದು ಇಡಿ ವಿಚಾರಣೆಗೆ ಸ್ನೇಹಮಯಿ ಕೃಷ್ಣ ಹಾಜರು

ಮತ್ತಷ್ಟು ದಾಖಲಾತಿ, ಮಾಹಿತಿ ನೀಡಲು ನಿರ್ಧಾರ

ಮೈಸೂರು, ಅ.2(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ಒಳಗೊಂಡ ಮುಡಾ ಹಗರಣ ಸಂಬಂಧ ದೂರುದಾರ ಸ್ನೇಹಮಯಿ ಕೃಷ್ಣ ನಾಳೆ (ಅ.3) ಜಾರಿ ನಿರ್ದೇಶನಾಲಯದ (ಇಡಿ) ಮುಂದೆ ಹಾಜರಾಗಲಿದ್ದಾರೆ.



ಸ್ನೇಹಮಯಿ ಕೃಷ್ಣ

ಈ ಕುರಿತು ಮಾಹಿತಿ ನೀಡಿರುವ ಸ್ನೇಹಮಯಿ ಕೃಷ್ಣ, ಇಡಿ ಸಮನ್ಸ್ ನೀಡಿದ್ದು, ನಾಳೆ ವಿಚಾರಣೆಯಲ್ಲಿ ಭಾಗಿಯಾಗುತ್ತೇನೆ ಎಂದರು.

ಮುಡಾದಲ್ಲಿ ಸಾವಿರಾರು ಕೋಟಿ ರೂಪಾಯಿ ಹಗರಣ ಆಗಿದೆ ಎಂದು 500 ಪುಟಗಳ ದಾಖಲೆ ನೀಡಿದ್ದೇನೆ. ನಾಳೆ ಬೆಂಗಳೂರಿನ ಇಡಿ ಕಚೇರಿಗೆ ಭೇಟಿ ನೀಡಿ ವಿಚಾರಣೆ ವೇಳೆ ದಾಖಲಾತಿ ಸಮೇತ ಮತ್ತಷ್ಟು ಮಾಹಿತಿ ನೀಡುತ್ತೇನೆ ಎಂದು ತಿಳಿಸಿದರು.

ನಾಳೆ ಇಡಿ ವಿಚಾರಣೆಯಲ್ಲಿ ಭಾಗಿಯಾಗುತ್ತಿರುವ ಬಗ್ಗೆ ಮೈಸೂರು ಲೋಕಾಯುಕ್ತ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದೇನೆ. ಈ ಹಿನ್ನೆಲೆಯಲ್ಲಿ ಪಾರ್ವತಿ ಅವರಿಗೆ ಮೈಸೂರಿನ ವಿಜಯನಗರದಲ್ಲಿ ಮಂಜೂರಾಗಿದ್ದ ನಿವೇಶನದ ಮಹಜರು ಪ್ರಕ್ರಿಯೆಯಲ್ಲಿ ಭಾಗಿಯಾಗುವುದಿಲ್ಲ ಎಂದು ಹೇಳಿದರು.

ಆದರೆ ಅಕ್ಟೋಬರ್ 4ರಂದು ವಿಜಯನಗರದ ನಿವೇಶನದ ಬಳಿ ನಡೆಯುವ ಮಹಜರ್ ಪ್ರಕ್ರಿಯೆಯಲ್ಲಿ ಭಾಗಿಯಾಗುತ್ತೇನೆ. ಈ ಕುರಿತಂತೆ ಲೋಕಾಯುಕ್ತ ಪೊಲೀಸರಿಗೆ ಮಾಹಿತಿ ನೀಡಿದ್ದೇನೆ ಎಂದು ಸ್ನೇಹಮಯಿ ಕೃಷ್ಣ ತಿಳಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

03.10.2024 ಗುರುವಾರ, ಮಳೆ ನಕ್ಷತ್ರ: ಹಸ್ತ, 27.09.2024 ರಿಂದ 09.10.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಶುಕ್ಲ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಹಸ್ತ, ರಾಹುಕಾಲ : ಮಧ್ಯಾಹ್ನ 1.30 ರಿಂದ 3 ಗಂಟೆಯುವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 9 ರಿಂದ ಶರದ್ ವಿರೇಚನ–ಪಂಚಕರ್ಮ ಚಿಕಿತ್ಸಾ ಶಿಬಿರ, ಕಾಮಾಲೆ ಮತ್ತು ಯಕೃತ್ತಿನ ಸಮಸ್ಯೆಗೆ ಚಿಕಿತ್ಸಾ ಶಿಬಿರ, ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ರಾವ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್, ಬೆಳಗ್ಗೆ 10ರಿಂದ ಸಂಜೆ 7 ರವರೆಗೆ.

■ **ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ :** ದಸರಾ ಮಹೋತ್ಸವ–2024 ಅಂಗವಾಗಿ ಪತ್ರಿಕಾ ಛಾಯಾಗ್ರಾಹಕರ ಛಾಯಾಚಿತ್ರ ಪ್ರದರ್ಶನ, ಸ್ಥಳ: ಸುಚಿತ್ರ ಕಲಾ ಗ್ಯಾಲರಿ, ಕಲಾಮಂದಿರ, ಬೆಳಗ್ಗೆ 10 ರಿಂದ.

■ **ಸರ್ಕಾರಿ ಶುಶ್ರೂಷಾ ಮಹಾವಿದ್ಯಾಲಯ, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ:** ವಾರ್ಷಿಕೋತ್ಸವ ಸಮಾರಂಭ, ಅಧ್ಯಕ್ಷತೆ: ಮೈಸೂರು ಮೆಡಿಕಲ್ ಕಾಲೇಜು ನಿರ್ದೇಶಕರು ಹಾಗೂ ಡೀನ್ ಕೆ.ಆರ್.ಡಾ.ದಾಕ್ಷಾಯಿಣಿ, ಪ್ರಾಸ್ತಾವಿಕ ಭಾಷಣ: ಸರ್ಕಾರಿ ಶುಶ್ರೂಷಾ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಎ.ಬಿ.ಪುಷ್ಪಲತ, ಮುಖ್ಯ ಅತಿಥಿಗಳು: ಎಂ.ಎಂ.ಸಿ&ಆರ್.ಐನ ಮುಖ್ಯ ಆಡಳಿತಾಧಿಕಾರಿ ಸಿ.ಆರ್ ಕಲ್ಪಶ್ರೀ, ಆರ್ಥಿಕ ಸಲಹೆಗಾರರಾದ ವಿದ್ಯಾ, ಕೆ.ಆರ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ.ಶೋಭಾ, ಚೆಲುವಾಂಬ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ರಾಜೇಂದ್ರಕುಮಾರ್, ಪಿ.ಕೆ.ಟಿ.ಬಿ ಮತ್ತು ಸಿ.ಡಿಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಪ್ರಶಾಂತ್‌ಕುಮಾರ್, ಸರ್ಕಾರಿ ಶುಶ್ರೂಷಾ ಶಾಲೆಯ ಪ್ರಾಂಶುಪಾಲ ರುದ್ರಪ್ಪ.ಪಿ, ಕೃಷ್ಣರಾಜೇಂದ್ರ ಆಸ್ಪತ್ರೆಯ ಶುಶ್ರುಷ ಅಧೀಕ್ಷಕರಾದ ಶರ್ಲಿ, ಚೆಲುವಾಂಬ ಆಸ್ಪತ್ರೆಯ ಶುಶ್ರೂಷ ಅಧೀಕ್ಷಕರಾದ ಸುಲಲಿತಾಂಗಿ ಮತ್ತು ಪಿ.ಕೆ.ಟಿ.ಬಿ ಮತ್ತು ಸಿ.ಡಿ ಆಸ್ಪತ್ರೆಯ ಶುಶ್ರೂಷ ಅಧೀಕ್ಷಕಿ ಚಂದ್ರಕಲಾ ವಿ.ಶೇಷಾದ್ರಿ, ಸ್ಥಳ: ಜೆ.ಕೆ ಮೈದಾನದ ಅಮೃತೋತ್ಸವ ಭವನ, ಬೆಳಗ್ಗೆ 10ಕ್ಕೆ.

■ **ಮೈಸೂರು ಸೈನ್ಸ್ ಫೌಂಡೇಷನ್, ಬಿಎಸ್‌ಎಸ್ ವಿದ್ಯೋದಯ:** ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ದೂರದರ್ಶಕ ತಯಾರಿಕೆ ಕಾರ್ಯಾಗಾರ ಕಾಸ್ಮೋಸ್–2024, ಸ್ಥಳ: ಬಿಎಸ್‌ಎಸ್ ವಿದ್ಯೋದಯ ಶಾಲೆ ಆವರಣ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10 ರಿಂದ.

■ **ಮೈಸೂರು ಮೃಗಾಲಯ:** 70ನೇ ವನ್ಯಜೀವಿ ಸಪ್ತಾಹ–2024 ರ ಅಂಗವಾಗಿ ವನ್ಯಜೀವಿಗಳ ಪ್ರಾಮುಖ್ಯತೆ ಮತ್ತು ಅವುಗಳ ಸಂರಕ್ಷಣೆಯ ಬಗ್ಗೆ ಜನಸಾಮಾನ್ಯರಲ್ಲಿ ಶಿಕ್ಷಣ ಮತ್ತು ಜಾಗೃತಿ ಕಾರ್ಯಕ್ರಮ, ತ್ಯಾಜ್ಯದಿಂದ ಸಂಪತ್ತು (ಎರಡು ಭಾಗವಾಗಿ ವಿಂಗಡಿಸುವುದು ಹಸಿ ತ್ಯಾಜ್ಯ ಹಾಗೂ ಒಣ ತ್ಯಾಜ್ಯ) ಕಾರ್ಯಕ್ರಮ, ಸ್ಥಳ: ಮೃಗಾಲಯದ ಆವರಣ, ಬೆಳಗ್ಗೆ 10ಕ್ಕೆ.

■ **ಕೆ.ಎಸ್.ರಾಘವೇಂದ್ರ :** ಪೇಪರ್ ಪಲ್ಪ್ ಉಪಯೋಗಿಸಿ ಕೈಯಿಂದ ಮಾಡಿದ ಬೊಂಬೆಗಳ ಮೂಲಕ ದಶಾವತಾರ ಒಳಗೊಂಡ ಶ್ರೀ ಬಾಲಕೃಷ್ಣ ಲೀಲೆ ಪ್ರಸಂಗಗಳ ಪ್ರದರ್ಶನ, ಉಪಸ್ಥಿತರು : ಜಯದೇವ ಹೃದ್ರೋಗ ಆಸ್ಪತ್ರೆಯ ಡಾ. ಕೆ.ಎಸ್. ಸದಾನಂದ, ಹಿರಿಯ ಪತ್ರಕರ್ತ ಕೆ. ನರಸಿಂಹಮೂರ್ತಿ, ಸ್ಥಳ: ಇಂಚರ ಕಲಾಕ್ಷೇತ್ರ, ವಿಜಯನಗರ 2ನೇ ಹಂತ, ಬೆಳಗ್ಗೆ 10 ರಿಂದ.

■ **ಸ್ವರ್ಣ ನೃಸಿಂಹ ದತ್ತಸಾಯಿ ಪೀಠಿಕ ಸೇವಾ ಟ್ರಸ್ಟ್ :** ಶ್ರೀ ಪ್ರತ್ಯಂಗಿರಾದೇವಿ ಹೋಮ ಮತ್ತು ಶರನ್ನವರಾತ್ರಿ ವೈಭವ, ಗಣಪತಿ ಸಹಿತ ವನದುರ್ಗಾ ಹೋಮ, ಸ್ಥಳ: ಶ್ರೀ ವೇಂಕಟಾರ್ಜುನ ಧ್ಯಾನ ಮಂದಿರ, ಹಾರೋಹಳ್ಳಿ ಗ್ರಾಮ, ಬೆಳಗ್ಗೆ 10ರಿಂದ.

■ **ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯ:** ಎಐ ಕ್ರಾಂತಿ: ತಾಂತ್ರಿಕ ಪ್ರಗತಿಗಳ ಮೂಲಕ ಭವಿಷ್ಯವನ್ನು ರೂಪಿಸುವುದು ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ, ಉದ್ಘಾಟನೆ: ಮೈಸೂರು ವಿವಿ ಕಂಪ್ಯೂಟರ್ ಸೈನ್ಸ್ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಡಾ.ಡಿ.ಎಸ್.ಗುರು, ಪ್ರಾಸ್ತಾವಿಕ ಭಾಷಣ: ಪ್ರಾಧ್ಯಾಪಕ ಡಾ.ಹೆಚ್.ಎಲ್.ಶಶಿರೇಖಾ, ಅಧ್ಯಕ್ಷತೆ: ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯ ಪ್ರಿನ್ಸಿಪಾಲ್ ಪ್ರೊ.ಎನ್.ಭಾರತಿ, ಗೌರವ ಅತಿಥಿಗಳು: ಪಿಯು ಕಾಲೇಜು ಪ್ರಿನ್ಸಿಪಾಲ್ ಪ್ರೊ.ನಯನಕುಮಾರಿ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಶ್ರೀ ಮುಕ್ಕಣ್ಣೇಶ್ವರ ಸ್ವಾಮಿ ದೇವಸ್ಥಾನ:** ನವರಾತ್ರಿ ಪೂಜಾ ಕಾರ್ಯಕ್ರಮ, ಸಂಜೆ 5.30ಕ್ಕೆ ಕಳಸ ಸ್ಥಾಪನೆ, ಭಜನೆ, ನಂತರ ಮಹಾಮಂಗಳಾರತಿ, ಶ್ರೀ ರವಿಕಾಂತಾನಂದ ಸ್ವಾಮಿಯವರಿಂದ ಪ್ರವಚನ, ಸ್ಥಳ: ಶ್ರೀ ಮುಕ್ಕಣ್ಣೇಶ್ವರ ಸ್ವಾಮಿ ದೇವಸ್ಥಾನ, ಅಶೋಕ ರಸ್ತೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ದಸರಾ ಗೀತಾರಾಧನ, 6.30 ದಸರಾದಲ್ಲಿ ಇಂದು, ಪ್ರಸ್ತುತಿ: ಜಾಂಪಣ್ಣ ಆಶೀಹಾಳ್, 6.35 ಸೀರೆಯ ಸೊಬಗು–ವೈವಿಧ್ಯಮಯ ಸೀರೆಗಳ ಪರಿಚಯ, ಪ್ರಸ್ತುತಿ : ಜಯಶ್ರೀ ಹೆಗಡೆ, 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ನಿತಿನ್ ರಾಜಾರಾಂ ಶಾಸ್ತ್ರಿ, ವ್ಯಾಖ್ಯಾನ–ಡಾ.ಜಿ.ಆರ್.ತಿಪ್ಪೇಸ್ವಾಮಿ, 6.50 ರೈತರಿಗೆ ಸಲಹೆ, 7.15 ಹಸಿರುಹೊನ್ನು–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಅರಣ್ಯ ಇಲಾಖೆ, ಕರ್ನಾಟಕ ಸರ್ಕಾರ, 8.30 ಚಿತ್ರಗೀತೆಗಳು, 9.05 ಚಾಮುಂಡಿ ಹಬ್ಬ–ದಸರಾ ಸಂಭ್ರಮ, ಜನಪದರ ನಾಲಿಗೆಯಲ್ಲಿ ಮೈಸೂರು ದೇವತೆ, ರಚನೆ: ಡಾ.ಪಿ.ಕೆ.ರಾಜಶೇಖರ್, ಪ್ರಸ್ತುತಿ: ಡಾ.ಮೈಸೂರು ಉಮೇಶ್, 9.35 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ದಸರಾ ಪ್ರಯುಕ್ತ ಶ್ರೀ ಮುತ್ತುಸ್ವಾಮಿ ದೀಕ್ಷಿತರ ನವಾವರಣ ಕೃತಿಗಳನ್ನೊಳಗೊಂಡ ವಿಶೇಷ ಸಂಗೀತ ಸರಣಿ–ನಮೋ ಜಗತ್ತಾರಿಣಿ, ನಿರ್ಮಾಣ–ಮೈಸೂರು. ಎಸ್.ರಾಜಲಕ್ಷ್ಮೀ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ–ಕಾಡಿನಲ್ಲಿನ ಕಥೆಗಳು. ಪ್ರಸ್ತುತಿ : ಜಿ.ಶಾಂತಕುಮಾರ್

ಮಧ್ಯಾಹ್ನ: 12.30ದೇವರನಾಮ–ಆರ್.ಗಿರೀಶ್, 12.45 ಚಿತ್ರಗೀತೆಗಳು, 1.20 ಭಾವಗೀತೆಗಳು–ಎ.ಎನ್.ಶೀಲಾ, 2.40 ಏಳುತಲೆ ನೆನೆದೇವು–ದಸರಾ ಸಂದರ್ಭದಲ್ಲಿ ಜನಪದ ಶಕ್ತಿ ದೇವತೆಯನ್ನು ಕುರಿತ ವಿಶೇಷ ರೂಪಕ ಮಾಲಿಕೆ, ಪ್ರಸ್ತುತಿ: ಡಾ.ಮೈಸೂರು ಉಮೇಶ್, 4.00 ಜನಪದ ಸಂಗೀತ, 4.30 ಸಂಧ್ಯಾರಾಗ, 6.10 'ಸೀರೆಯ ಸೊಬಗು–ವೈವಿಧ್ಯಮಯ ಸೀರೆಗಳ ಪರಿಚಯ', ಪ್ರಸ್ತುತಿ: ಜಯಶ್ರೀ ಹೆಗಡೆ, 6.50 ಕೃಷಿರಂಗ–ಕಿಸಾನ್‌ವಾಣಿ, ಪ್ರಾಯೋಜಕರು: ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ 'ನಂ ಕಂಪನಿ' ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ ಕುರಿತ ಬಾನುಲಿ ಸರಣಿ ಕಂಪನಿ ಕಾಯ್ದೆಯಡಿ ರೈತ ಉತ್ಪಾದಕ ಸಂಸ್ಥೆಗಳ ನೋಂದಣಿ. ಈ ಕುರಿತು ಕಂಪನಿ ಕಾರ್ಯದರ್ಶಿ ಶ್ರೀಪಾದ್ ಸಾರಂಗ್ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್.ಕೇಶವಮೂರ್ತಿ, 7.45 ಕನ್ನಡದಲ್ಲಿ ಭಾಷಣ, 8.00 ಮೈಸೂರು ದಸರಾ ಮಹೋತ್ಸವದ ಉದ್ಘಾಟನಾ ಸಮಾರಂಭದ ಸಂಯೋಜಿತ ಬಾನುಲಿ ವರದಿ, 8.30 ಅರಮನೆ ಸಂಗೀತ ವೈಭವ–ಸಂಗೀತ ರೂಪಕ, 10.00 ಪ್ರಾದೇಶಿಕ ಜನಪದ ಹಾಗೂ ಲಘು ಸಂಗೀತದ ರಾಷ್ಟ್ರೀಯ ಕಾರ್ಯಕ್ರಮ, ಇಂದಿರಾಬಾಯಿ ಜಂಗ್ಡ–ಪಂಡ್ವಾನಿ, ವಿದುಷಿ. ತಾಪ್ಸಿ ನಾಗರಾಜ್, ಗೀತ್, ಭಜನ್

■ **ಚಿನ್ಮಯ ಮಿಷನ್ :** ಶರನ್ನವರಾತ್ರಿ ಕಾರ್ಯಕ್ರಮ, ಪ್ರತಿದಿನ ಬೆಳಗ್ಗೆ 11.30 ರಿಂದ ಸ್ವಾಮಿನಿ ಕಾಶಿಕನಂದ ಅವರಿಂದ ಲಲಿತ ಸಹಸ್ರನಾಮದಲ್ಲಿ ಬರುವ ದೇವಿಯ ಕೆಲವು ನಾಮಾವಳಿಗಳು ಕುರಿತು ವಿಶೇಷ ಪ್ರವಚನ, ಸ್ಥಳ: ಚಿನ್ಮಯ ಮಿಷನ್, ಶ್ರೀ ಧತ್ತ ಸನ್ನಿಧಿ, ಗೋಕುಲಂ 3ನೇ ಹಂತ.

■ **ಶಾರದಾ ವಿಲಾಸ ಕಾಲೇಜು :** ಫಾಕಲ್ಟಿ ಡೆವಲಪ್‌ಮೆಂಟ್ ಪ್ರೋಗ್ರಾಂ 'ಪ್ರೇರಣ', ಮುಖ್ಯ ಅತಿಥಿಗಳು : ಶಾರದಾ ವಿಲಾಸ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಬಿ.ಎಂ. ಸುಬ್ರಾಯ, ವಿಶೇಷ ಅತಿಥಿಗಳು : ಮೈಸೂರು ವಿವಿ ವಿಶ್ರಾಂತ ಕುಲಪತಿ ಡಾ. ಟಿ.ಕೆ. ಉಮೇಶ್, ಅಧ್ಯಕ್ಷತೆ : ಶಾರದಾ ವಿಲಾಸ ಕಾಲೇಜು ಪ್ರಿನ್ಸಿಪಾಲ್ ಡಾ. ಎಂ. ದೇವಿಕಾ, ಸ್ಥಳ: ಎ.ವಿ. ಹಾಲ್, ಎಸ್‌ವಿಸಿ, ಮಧ್ಯಾಹ್ನ 3ಕ್ಕೆ.

■ **ಶೃಂಗೇರಿ ಶ್ರೀ ಶಂಕರ ಮಠ, ಅಭಿನವ ಶಂಕರಾಲಯ :** ಶ್ರೀ ಶಾರದಾಶರನ್ನವರಾತ್ರೋತ್ಸವ–2024, ಮಹಾಪೂಜೆ, ವಿವಿಧ ಹೋಮಗಳು, ಪುರಾಣೋಕ್ತ, ಶ್ರೀ ಬ್ರಾಹ್ಮೀ (ಹಂಸವಾಹಿನಿ), ಶ್ರೀ ಸೂಕ್ತ ಹೋಮ, ಸ್ಥಳ: ಶೃಂಗೇರಿ ಶ್ರೀ ಶಂಕರ ಮಠ, ಅಭಿನವ ಶಂಕರಾಲಯ, ಫೋರ್ಟ್ ಮೊಹಲ್ಲಾ.

■ **ರಂಗಾಯಣ :** ಸಂಜೆ 5.30ಕ್ಕೆ ದಸರಾ ಮಹೋತ್ಸವದ ಅಂಗವಾಗಿ ನವರಾತ್ರಿ ಜನಪದ ರಂಗ ಉತ್ಸವ, ಉದ್ಘಾಟನೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ಎಸ್. ತಂಗಡಗಿ, ತೊಗಲು ಗೊಂಬೆ ಪ್ರದರ್ಶನ ಉದ್ಘಾಟನೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಡಾ. ಎಂ.ಎನ್. ಅಜಯ್ ನಾಗಭೂಷಣ್, ಮುಖ್ಯ ಅತಿಥಿಗಳು : ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರಾದ ಡಾ. ಧರಣಿದೇವಿ ಮಾಲಗತ್ತಿ, ಜಾನಪದ ವಿದ್ವಾಂಸ ಡಾ. ಪಿ.ಕೆ. ರಾಜಶೇಖರ್, ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ರಂಗ ಸಮಾಜದ ಸದಸ್ಯರಾದ ಡಾ. ರಾಜಪ್ಪ ದಳವಾಯಿ, ಶಶಿಧರ್ ಭಾರೀಘಾಟ್, ಹೆಚ್.ಎಸ್. ಸುರೇಶ್‌ಬಾಬು, ಶ್ರೀಮತಿ ಲಕ್ಷ್ಮೀ ಚಂದ್ರಶೇಖರ್, ಡಾ. ಕೆ. ರಾಮಕೃಷ್ಣಯ್ಯ, ಮಹಾಂತೇಶ ಎಂ. ಗಜೇಂದ್ರಗಡ, ಡಿಂಗ್ರಿ ನರೇಶ್, ಅಧ್ಯಕ್ಷತೆ : ಶಾಸಕ ಕೆ. ಹರೀಶ್‌ಗೌಡ; ಸಂಜೆ 6.30ಕ್ಕೆ ಮೈಸೂರು ಗುರುರಾಜ್ ಮತ್ತು ತಂಡದಿಂದ ಮಂಟೇಸ್ವಾಮಿ ಕಾವ್ಯ, ಸ್ಥಳ: ರಂಗಾಯಣದ ವನರಂಗ.

■ **ಶ್ರೀ ವಿವೇಕ ಬಾಲೋದ್ಯಾನ ಪಬ್ಲಿಕ್ ಸ್ಕೂಲ್ :** ದಸರಾ ಗೊಂಬೆಗಳ ಪ್ರದರ್ಶನ, ಸ್ಥಳ: ಶ್ರೀ ವಿವೇಕ ಬಾಲೋದ್ಯಾನ ಪಬ್ಲಿಕ್ ಸ್ಕೂಲ್, ಜಯನಗರ, ಸಂಜೆ 6.30 ರಿಂದ 8.30 ರವರೆಗೆ.

■ **ಶ್ರೀ ಶ್ರೀ ಸುಬ್ಬರಾಯದಾಸರ ಪ್ರಸನ್ನ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ :** ನವರಾತ್ರಿ ಬ್ರಹ್ಮೋತ್ಸವ, ಬೆಳಗ್ಗೆ ಪಂಚಾಮೃತ ಅಭಿಷೇಕ, ವೇದ ಪಾರಾಯಣ, ಮಂಗಳಾರತಿ, ಸಂಜೆ ಉತ್ಸವ, ಸ್ಥಳ: ದೇವಸ್ಥಾನ, ದೇವರಾಜ ಮೊಹಲ್ಲಾ.

■ **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್ :** ಶರನ್ನವರಾತ್ರಿ ಉತ್ಸವ, ಬೆಳಗ್ಗೆ 8ಕ್ಕೆ ಸ್ವಸ್ತಿವಾಚನ, ಯಾಗಶಾಲಾ ಪ್ರವೇಶ, ಗಣಪತಿ ಪೂಜೆ, ದೇವತಾನಾಂದಿ, ಕಲಶ ಸ್ಥಾಪನೆ, ಪ್ರಧಾನ ಕಲಶ, ಉಪ ಕಲಶ, ಶೈಲಪುತ್ರಿ ಅಲಂಕಾರ, ಸ್ಥಳ: ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನ.

■ **ಕಲಾನಿಧಿಕಾ ಕಲಾ ಅಕಾಡೆಮಿ :** ವಸುಂಧರಾ ಭವನ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ರಾಮಕೃಷ್ಣ ಆಶ್ರಮದ ಸ್ವಾಮಿ ಮುಕ್ತಿದಾನಂದ, ಗೌರವ ಅತಿಥಿಗಳು : ಡಾ. ವಸುಂಧರಾ ದೊರೆಸ್ವಾಮಿ, ಸ್ಥಳ: ಕಲಾನಿಧಿಕಾ ಕಲಾ ಅಕಾಡೆಮಿ, ಸರಸ್ವತಿಪುರಂ, ಸಂಜೆ 6ಕ್ಕೆ.


ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ 20 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ಧರ್ಮಪತ್ನಿ: ಶ್ರೀಮತಿ ಎಂ.ನಂಜಮ್ಮಣ್ಣಿ, ಮಗ: ಶ್ರೀ ಎಂ.ಎನ್.ಹರೀಶ್‌ಕುಮಾರ್ (ಪೊಲೀಸ್ ಇಲಾಖೆ)
ಮಗಳು: ಶ್ರೀಮತಿ ಎಂ.ಎನ್.ದಿವ್ಯಮಣಿ
ಅಳಿಯ: ಶ್ರೀ ಎನ್ ನಂಜುಂಡ (ಪಿಡಬ್ಲ್ಯೂಡಿ ಇಲಾಖೆ)
ಮೊಮ್ಮಗ: ಯೋಕ್ಷಿತ್
ಎಂ.ಎನ್.ಮೋಹನ್‌ಕುಮಾರಿ
ಎಂ.ಎನ್.ಯಶೋಧ
ವಿಜಯನಗರ, 3ನೇ ಹಂತ, ಮೈಸೂರು.

ಕೆ.ಮಹದೇವಣ್ಣ ಪಿ.ಎಸ್.ಐ

ಜನನ: 01.01.1950, ನಿಧನ: 03.10.2004





NAMMANE Constructions Pvt, Ltd
SITES FOR SALE
At Prime Locations in Mysore
20X30, 30X40, 30X50
Newly Built House For Sale
At Prime Locations In Mysore
30X40, 40X60
CONSTRUCTIONS | INTERIORS
9019923183
8095996669

ಮೈಸೂರಿನ ಕಂಪೆನಿಗೆ ಬೇಕಾಗಿದ್ದಾರೆ

- ಆಫೀಸ್ ಸೂಪರ್ವೈಸರ್
- ಟ್ರ್ಯಾಕ್ಟರ್ ಡ್ರೈವರ್
- ಕಾರ್ ಡ್ರೈವರ್ ಕನಿಷ್ಠ 5 ಐದು ವರ್ಷದ ಅನುಭವ
- ಮನೆ ಕೆಲಸಕ್ಕೆ ಒಂದು ಫ್ಯಾಮಿಲಿ

ಸಂಪರ್ಕಿಸಿ: 81234 50066

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಹುಲ್ಲಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯ

Government Of India

ಹುಲ್ಲಹಳ್ಳಿ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ-571314 ಇಮೇಲ್: hullahalligp11@gmail.com

ನಂ.ಹು.ಗ್ರಾ.ಪಂ: / / 2024-25 | ದಿನಾಂಕ: 01.10.2024

ಸಾರ್ವಜನಿಕ ಪ್ರಕಟಣೆ

ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕು ಹುಲ್ಲಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ದಿನಾಂಕ: 15/10/2024ರ ಮಂಗಳವಾರ ದಂದು ಬೆಳಗ್ಗೆ 11.00 ಗಂಟೆಗೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 209ನೇದ್ದಂತೆ ಈ ಕೆಳಕಂಡ ಗ್ರಾಮ ಪಂಚಾಯಿತಿಯ ಸ್ವತ್ತುಗಳ ಹರಾಜನ್ನು ಕಛೇರಿ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ಆಸಕ್ತರು ಭಾಗವಹಿಸಲು ಈ ಮೂಲಕ ತಿಳಿಸಿದೆ.

ಕ್ರ.ಸಂ	ಅಂಗಡಿಗಳ ಮಳಿಗೆಗಳ ಸ್ಥಳ	ಮಳಿಗೆ ಸಂಖ್ಯೆ	ಅವಧಿ	ಠೇವಣಿ
1.	ರಾಂಪುರ ರಸ್ತೆಯಲ್ಲಿರುವ ಗ್ರಾ.ಪಂ. ಅಂಗಡಿ ಮಳಿಗೆಗಳು	1,2,3,4,5,6,8,10	33 ತಿಂಗಳು	20,000/- (ಪ್ರತೀ ಅಂಗಡಿಗೆ)
2.	ಶ್ರೀಕಂಠ ಜೋಯಿಸ್ ವೃತ್ತದ ಹತ್ತಿರದ ಗ್ರಾ.ಪಂ. ಅಂಗಡಿ ಮಳಿಗೆಗಳು	11,12,13,14	33 ತಿಂಗಳು	20,000/- (ಪ್ರತೀ ಅಂಗಡಿಗೆ)
3.	ಅಂಗಡಿ ಬೀದಿ (ಹಾಲಿನ ಡೈರಿ ಹತ್ತಿರ) ಯಲ್ಲಿರುವ ಗ್ರಾ.ಪಂ. ಅಂಗಡಿ ಮಳಿಗೆಗಳು	16	33 ತಿಂಗಳು	20,000/- (ಪ್ರತೀ ಅಂಗಡಿಗೆ)
4.	ತಳ್ಳುವ ಗಾಡಿ ಸುಂಕ ವಸೂಲಿ ಹರಾಜು (ಗ್ರಾಮ ಪಂಚಾಯಿತಿಯು ಗುರುತುಪಡಿಸಿದ ಸ್ಥಳ)		11 ತಿಂಗಳು ಮಾತ್ರ	10,000/-
5.	ಸಂತೆ ಸುಂಕ ವಸೂಲಿ ಹರಾಜು		11 ತಿಂಗಳು ಮಾತ್ರ	10,000/-

- ಗ್ರಾ.ಪಂ. ವ್ಯಾಪ್ತಿಯ ಸಾರ್ವಜನಿಕರು ಮಾತ್ರ ಭಾಗವಹಿಸತಕ್ಕದ್ದು.
- ಮಳಿಗೆ ಸಂಖ್ಯೆ 11ನ್ನು ಪರಿಶಿಷ್ಟ ಪಂಗಡ ಜನಾಂಗಕ್ಕೆ ಹಾಗೂ ಮಳಿಗೆ ಸಂಖ್ಯೆ 03 ಮತ್ತು 14 ನ್ನು ಪರಿಶಿಷ್ಟ ಜಾತಿಯ ಜನಾಂಗದವರಿಗೆ ಮೀಸಲಿರಿಸಿದೆ.
- ಗ್ರಾ.ಪಂ. ತೀರ್ಮಾನವೇ ಅಂತಿಮ ತೀರ್ಮಾನ.
- ಷರತ್ತುಗಳು ಅನ್ವಯ, ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ಮೊ. 9164044741, 9845386223, 8095032546.

ಸಹಿ/-	ಸಹಿ/-	ಸಹಿ/-	ಸಹಿ/-	ಸಹಿ/-
ಶ್ರೀಮತಿ ದೇವಮ್ಮ, ಅಧ್ಯಕ್ಷರು, ಗ್ರಾ.ಪಂ.ಹುಲ್ಲಹಳ್ಳಿ	ಶ್ರೀ ಹೆಚ್.ಪಿ.ಲೋಕೇಶ್, ಉಪಾಧ್ಯಕ್ಷರು, ಗ್ರಾ.ಪಂ.ಹುಲ್ಲಹಳ್ಳಿ	ಶ್ರೀ ಶ್ರೀಧರ.ಹೆಚ್.ಬಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗ್ರಾ.ಪಂ.ಹುಲ್ಲಹಳ್ಳಿ	ಶ್ರೀ ಸೋಮಸುಂದರ್ ಕಾರ್ಯದರ್ಶಿ ಗ್ರೇಡ್ -1, ಗ್ರಾ.ಪಂ.ಹುಲ್ಲಹಳ್ಳಿ	ಶ್ರೀ ಬಸವಣ್ಣ ಕೆ ದ್ವಿ.ದ.ಲೆ.ಸಹಾಯಕರು, ಗ್ರಾ.ಪಂ. ಹುಲ್ಲಹಳ್ಳಿ





ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ... ಏನ್ ಮಾಡುತ್ತಾ ಇದ್ದೀರಾ?
ಗಂಡ : ನೊಣ ಹೊಡೀತಾ ಇದ್ದೀನಿ
ಹೆಂಡತಿ : ನೊಣಗಳು ಸಿಕ್ಕಿದವ
ಗಂಡ : ಹೂಂ.. 3 ಗಂಡು, 2 ಹೆಣ್ಣು ನೊಣಗಳನ್ನು ಸಾಯಿಸಿದ್ದೀನಿ.
ಹೆಂಡತಿ : ನೊಣಗಳನ್ನು 3 ಗಂಡು, 2 ಹೆಣ್ಣು ಅಂತ ಹೇಗೆ ಹೇಳ್ತೀರಾ?
ಗಂಡ : ತುಂಬಾ ಸುಲಭ, 3 ನೊಣ ಬೀಯರ್ ಬಾಟಲ್ ಮೇಲೆ ಕುಳಿತಿದ್ದವು! 2 ನೊಣ ಫೋನ್ ಮೇಲೆ ಕುಳಿತಿದ್ದವು!!

ಮೈಸೂರು ಮಿತ್ರ
ಗುರುವಾರ, 3 ಅಕ್ಟೋಬರ್ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಕಷ್ಟದಲ್ಲಿದ್ದಾಗ ಕಣ್ಣೆತ್ತಿ ನೋಡದ ಜನರು ಕಟ್ಟೆಗೆಯಲ್ಲಿಟ್ಟಾಗ ಕಣ್ಣೀರಿಟ್ಟರಂತೆ.
–ಎಂ.ಎನ್. ಕಿಶೋರ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ದಡ್ಡನಿಗೆ ಹಗಲು ಕಳೆಯುವುದಿಲ್ಲ, ಒಳ್ಳೆಯವನಿಗೆ ರಾತ್ರಿ ಸಾಲುವುದಿಲ್ಲ.

ನಿಮ್ಮ ಪತ್ರಗಳು

■ ಭಗವಾನರ ಹೇಳಿಕೆ ಹಾಸ್ಯಾಸ್ಪದ

ಮಾನ್ಯರೆ,

ಇತ್ತೀಚೆಗೆ ಮೈಸೂರಿನ ಖ್ಯಾತ(?)ವಿಚಾರವಾದಿ ಕೆ.ಎಸ್.ಭಗವಾನ್, ವಿವಿಧ ದೇವರು, ಆಚಾರ–ವಿಚಾರಗಳಲ್ಲಿ ನಂಬಿಕೆಗಳನ್ನಿಟ್ಟುಕೊಂಡು ತಮ್ಮ ಪಾಡಿಗೆ ತಾವು ಜೀವನ ಮಾಡಿಕೊಂಡು ಬದುಕುತ್ತಿರುವ ಲಕ್ಷಾಂತರ ಜನರಿಗೆ ಅಗೌರವ ಆಗುವ ರೀತಿಯಲ್ಲಿ ಮಾತನಾಡುತ್ತಿರುವುದಲ್ಲದೆ ಅವರ ಸ್ವಾಭಿಮಾನವನ್ನೂ ಕೆಣಕುತ್ತ ಇರುವುದು ಸರಿಯಷ್ಟೆ. ಎಲ್ಲರಿಗೂ ಅವರವರ ಧರ್ಮ, ನಂಬಿಕೆ, ಆಚಾರ–ವಿಚಾರಗಳನ್ವಯ ಬದುಕಲು ನಮ್ಮ ಸಂವಿಧಾನವೇ ಅವಕಾಶ ಮಾಡಿಕೊಟ್ಟಿದೆ. ಅಂದ ಮೇಲೆ ಇಂತಹ ವ್ಯಕ್ತಿಗಳು ಮಾತಾಡುವ ಅಗತ್ಯವಿಲ್ಲ. ಅಷ್ಟಕ್ಕೂ ಈ ವ್ಯಕ್ತಿ ಶೋಷಿತ ಸಮುದಾಯಗಳ ಪ್ರತಿನಿಧಿಯೂ ಅಲ್ಲ. ಶೋಷಣೆಯ ಅನುಭವವಿರುವ ವ್ಯಕ್ತಿಯೂ ಅಲ್ಲ. ಹಾಗಿದ್ದರೂ ಬಾಯಿಗೆ ಬಂದಂತೆ ಮಾತಾಡುವುದು ಅಯೋಗ್ಯರ ಲಕ್ಷಣ. ಇತ್ತೀಚೆಗೆ ಇದೇ ಭಗವಾನ್, ಮಾನಮರ್ಯಾದೆ ಇರುವ ಶೂದ್ರರು ಯಾರೂ ದೇವಸ್ಥಾನಗಳಿಗೆ ಹೋಗಬಾರದು ಎಂದು ಅಪ್ಪಣೆ ಕೊಡಿಸಿರುವುದು ಪತ್ರಿಕೆಗಳಲ್ಲಿ ವರದಿಯಾಗಿದೆ. ಯಾರು ಎಲ್ಲಿಗೆ ಬೇಕಾದರೂ ಹೋಗಲಿ, ಅದಕ್ಕೆ ಯಾವ ದೊಣ್ಣೆ ನಾಯಕನ ಅಪ್ಪಣೆಯೂ ಬೇಕಿಲ್ಲ. ಅದನ್ನು ಕೇಳಲು–ಹೇಳಲು ಅವರವರ ಮನೆಯವರಿದ್ದಾರೆ. ಇದು ಹಾಗಿರಲಿ, ಬೇರೆ ಧರ್ಮಗಳ ಅನುಯಾಯಿಗಳ ಬಗ್ಗೆ ಇದೇ ಭಗವಾನ್ ಮಾತಾಡಲಿ, ಆಗ ಗೊತ್ತಾಗುತ್ತದೆ.

ಹಾಗೆ ನೋಡಿದರೆ ನಾವು ಬೆಳೆಯುತ್ತಾ ಗಮನಿಸುತ್ತಿರುವಂತೆ ಕುವೆಂಪು ಅವರ ನಂತರ ಪಿ.ಲಂಕೇಶ್, ಪ್ರೊ.ನಂಜುಂಡಸ್ವಾಮಿ, ಕೆ.ರಾಮದಾಸ್, ಚಂದ್ರಶೇಖರ ಪಾಟೀಲ್ (ಚಂಪಾ), ಪೂರ್ಣಚಂದ್ರ ತೇಜಸ್ವಿ ಅವರಂತಹ ಇನ್ನೂ ಮೂರ್ನಾಲ್ಕು ಮಂದಿಯ ರೀತಿಯಲ್ಲಿ (ಈ ನಡುವೆ ಕೆಲವರು ಸರ್ಕಾರದ ಮುಖವಾಣಿಗಳ ರೀತಿಯಿದ್ದವರೂ ಬಂದು ಹೋಗಿದ್ದಾರೆ, ಅವರು ಯಾರು ಎಂದು ಎಲ್ಲರಿಗೂ ಗೊತ್ತು) ನಿಜವಾದ ವೈಚಾರಿಕ ಪ್ರಜ್ಞೆ ಮತ್ತು ಮಾನವೀಯ ಕಳಕಳಿಯುಳ್ಳ ವಿಚಾರವಂತರು ಅಂತ ಈಗ ಇದ್ದರೆ ದೇವನೂರು ಮಹಾದೇವ ಅವರೊಬ್ಬರು ಮಾತ್ರ; ಬೇರೆ ಯಾರೂ ಈಗಿಲ್ಲ. ಏಕೆಂದರೆ ಇವರ ನಡೆ– ನುಡಿ, ಮಾತು–ಬರಹ ಎಲ್ಲದರಲ್ಲೂ ವಿವೇಕ, ಸ್ವಾಭಿಮಾನ, ಮಾನವೀಯ ಕಳಕಳಿ ಇದೆ. ತಮ್ಮ ವಿಚಾರಗಳಲ್ಲಿ ಖಚಿತತೆಯಿದೆ. ಬೇರೆ ಸಮುದಾಯಗಳ ಬಗ್ಗೆ ದ್ವೇಷವಿಲ್ಲ; ಬದಲಾಗಿ ಅವರನ್ನು ಬದಲಾಯಿಸುವ ಅಭಿಲಾಷೆಯಿದೆ! ಅವರ ಮಾತುಗಳಲ್ಲಿ ತಾಯಿಯ ಮಮತೆಯಿದೆ; ದ್ವೇಷದ ಕಿಚ್ಚಿಲ್ಲ!! ಎಲ್ಲಕ್ಕಿಂತ ಮುಖ್ಯವಾಗಿ ಇವರಿಗೆ ಶೋಷಣೆಯ ಅನುಭವವಿದೆ. ಹಾಗಾಗಿ ಇವರಿಗೆ ಶೋಷಣೆಯ ಬಗ್ಗೆ ಮಾತಾಡಲು ಅರ್ಹತೆ, ಯೋಗ್ಯತೆ ಎರಡೂ ಇವೆ. ಇದಲ್ಲದೆ ಸರ್ಕಾರಿ ಸವಲತ್ತುಗಳಿಗಾಗಿ ಅಥವಾ ಅಗ್ಗದ ಪ್ರಚಾರಕ್ಕಾಗಿ ಇವರು ಮಾತನಾಡಿರುವ ಉದಾಹರಣೆಯೇ ಇಲ್ಲ. ವಿಚಾರವಂತಿಕೆ ಎಂದರೆ ಬಾಯಿಚಪಲಕ್ಕಾಗಿ ಅಥವಾ ಅಗ್ಗದ ಪ್ರಚಾರಕ್ಕಾಗಿ ಮಾತಾಡುವುದಲ್ಲ; ಬದಲಾಗಿ ವಿವೇಕದ ಮಾತುಗಳ ಮೂಲಕ ಸಾಮಾಜಿಕ ಬದಲಾವಣೆ ತರುವ ಪ್ರಯತ್ನ.

ಕೊನೆಯದಾಗಿ, ಯಾವನೋ ಒಬ್ಬ ಇನ್ನೊಬ್ಬನನ್ನು ಶೂದ್ರ ಎಂದರೆ ಅವನು ಒಪ್ಪಿಕೊಳ್ಳಬೇಕೇ? ಅಷ್ಟಕ್ಕೂ ಶೂದ್ರತ್ವ ಎಂಬುದು ಒಂದು ಸ್ಥಿತಿಯೇ ಹೊರತು ಜಾತಿಯಲ್ಲ. ವೇದಗಳಲ್ಲಿ ಹೇಳಿರುವ ಹಾಗೆ ಯಾರು ಬೇಕಾದರೂ ಮೇಲ್ಜಾತಿಗೆ (ಜಾತಿ ಎಂಬುದು ನಿಜವೇ ಆಗಿದ್ದರೆ) ಏರಬಹುದು.

–ರಾಜಶೇಖರ ಮೂರ್ತಿ, ಬೆಳಗನಹಳ್ಳಿ, ಹೆಚ್ ಡಿ ಕೋಟೆ ತಾ.

■ ಮಾದಕ ವಸ್ತುಗಳ ದಂಧೆಗೆ ಕಡಿವಾಣ ಹಾಕಲು ಮುಂದಾದ ಸರ್ಕಾರದ ನಿರ್ಧಾರ ಸ್ವಾಗತಾರ್ಹ

ಮಾನ್ಯರೆ,

ಎಲ್ಲ ರೀತಿಯ ಮಾದಕ ವಸ್ತುಗಳ ದಂಧೆಗೆ ಕಡಿವಾಣ ಹಾಕಲು ಮುಂದಾಗಿರುವ ಸರ್ಕಾರದ ನಿರ್ಧಾರ ಸ್ವಾಗತಾರ್ಹ. ರಾಜ್ಯ ಸರ್ಕಾರ ನುಡಿದಂತೆ ನಡೆದಿದೆ. ಮುಂದಿನ ಯುವ ಪೀಳಿಗೆಯು ದೇಶದ ಭವಿಷ್ಯ ರೂಪಿಸಲು ಇಂತಹ ನಿರ್ಧಾರ ಅನುಕೂಲವಾಗುತ್ತದೆ. ರಾಜ್ಯದಲ್ಲಿ ಮಾದಕ ವಸ್ತುಗಳು ಯುವಕರ ಕೈಗೆ ಎಲ್ಲೆಂದರಲ್ಲಿ ಸುಲಭವಾಗಿ ಸಿಗುತ್ತಿವೆ. ಆದ್ದರಿಂದ ರಾಜ್ಯ ಸರ್ಕಾರ ಡ್ರಗ್ಸ್ ಮತ್ತು ಮಾದಕ ವಸ್ತುಗಳ ದಂಧೆಯನ್ನು ಬೇರು ಸಮೇತ ಕಿತ್ತು ಹಾಕಬೇಕು. ಒಂದು ಮನೆಯಲ್ಲಿ ಯುವಕರು ಮಾದಕ ವಸ್ತುವಿನ ವ್ಯಸನಕ್ಕೆ ಬಲಿಯಾದರೆ ಅದರಿಂದ ಮನೆ ವ್ಯವಸ್ಥೆ ಹಾಳಾಗುತ್ತದೆ. ಆದ್ದರಿಂದ ದೇಶ ಅಭಿವೃದ್ಧಿ ಹೊಂದುವುದು ಕಷ್ಟವಾಗುತ್ತದೆ. ಈಗಿನ ಮಕ್ಕಳೇ ಮುಂದಿನ ಪ್ರಜೆಗಳು. ಆದ್ದರಿಂದ ಸರ್ಕಾರ ಮಾದಕ ವಸ್ತುಗಳ ದಂಧೆಗೆ ಕಡಿವಾಣ ಹಾಕಲೇಬೇಕಿದೆ.

–ಸಾಯಿ ಸತೀಶ್, ಅಖಿಲ ಭಾರತ ಹಿಂದೂ ಮಹಾಸಭಾ ಜಿಲ್ಲಾಧ್ಯಕ್ಷ, ಮೈಸೂರು.

■ ಕಾನೂನುಬಾಹಿರ ಚಟುವಟಿಕೆಗಳಿಗೆ ಕ್ರಮ ಅಗತ್ಯ

ಮಾನ್ಯರೆ,

ರೇವ್ ಪಾರ್ಟಿಯಂಥ ಕಾನೂನುಬಾಹಿರ ಚಟುವಟಿಕೆಗಳು ಇತ್ತೀಚೆಗೆ ಯಥೇಚ್ಛವಾಗಿ ನಡೆಯುತ್ತಿವೆ. ಕೆಲ ಸ್ಟಾರ್ ಹೋಟೆಲ್‌ಗಳಲ್ಲಿ, ಫಾರ್ಮ್ ಹೌಸ್‌ಗಳಲ್ಲಿ ನಡೆಯುತ್ತಿದ್ದ ಇಂತಹ ಪಾರ್ಟಿಗಳು ಇದೀಗ ಮೈಸೂರು ತಾಲೂಕಿನ ರಾಮೇನಹಳ್ಳಿ ಬಳಿ ಕೆಆರ್‌ಎಸ್ ಜಲಾಶಯದ ಹಿನ್ನೀರಿನ ಬಯಲಿಗೂ ವ್ಯಾಪಿಸಿರುವುದು ಕಳವಳಕಾರಿ ಸಂಗತಿ.

ಇತ್ತೀಚಿನ ದಿನಗಳಲ್ಲಿ ನಮ್ಮ ಯುವಜನತೆಯಲ್ಲಿ ಪಾರ್ಟಿಸಂಸ್ಕೃತಿ ಅಗಾಧವಾಗಿ ಬೆಳೆಯುತ್ತಿದೆ. ಸಂದರ್ಭ ಏನೇ ಇರಲಿ, ಯುವಜನತೆ ಅದನ್ನು ವಿಜೃಂಭಣೆಯಿಂದ ಆಚರಿಸಲು ಆಸಕ್ತಿ ತೋರಿಸುತ್ತಿದ್ದಾರೆ. ಇದರಿಂದ ನಮ್ಮ ಯುವಜನತೆ ಹಾದಿ ತಪ್ಪುತ್ತಿದ್ದಾರೆ. ಕ್ಷಣಿಕ ಸುಖ ಹಾಗೂ ಮತ್ತಿನಾಸೆಗೆ ಜೋತುಬಿದ್ದಿರುವ ಕೆಲ ಯುವಸಮೂಹ ತಮ್ಮ ಭವಿಷ್ಯವನ್ನು ಹಾಳು ಮಾಡಿಕೊಳ್ಳುತ್ತಿರುವುದು ತರವಲ್ಲ. ಅದರಲ್ಲಿಯೂ ಕೆಆರ್‌ಎಸ್ ಜಲಾಶಯದ ಹಿನ್ನೀರಿನ ಪ್ರದೇಶ ನಿರ್ಬಂಧಿತ ಪ್ರದೇಶವಾದರೂ ಇಲ್ಲಿ ಮೋಜು–ಮಸ್ತಿ ಮಾಡುತ್ತಿರುವುದು ಅಧಿಕಾರಿಗಳ ನಿರ್ಲಕ್ಷ್ಯವನ್ನು ಎತ್ತಿ ತೋರಿಸುತ್ತಿದೆ. ಜೊತೆಗೆ ಜಲಾಶಯದ ಹಿನ್ನೀರಿನಲ್ಲಿ ಪ್ರವಾಸಿಗರು ಮೋಜು–ಮಸ್ತಿ ಮಾಡುತ್ತಿರುವುದು ಕೂಡ ಕಾನೂನುಬಾಹಿರ. ಈ ಹಿಂದೆ ಈ ಹಿನ್ನೀರಿನ ಪ್ರದೇಶದಲ್ಲಿ ಹಲವು ಅವಘಡ ಸಂಭವಿಸಿ ಸಾವು–ನೋವುಗಳು ಆಗಿವೆ. ಅಧಿಕಾರಿಗಳು ಕಣ್ಣು ಮುಚ್ಚಿ ಕುಳಿತಿರುವುದರಿಂದಲೇ ಈ ರೀತಿಯ ಪ್ರಕರಣಗಳು ಆಗಾಗ ನಡೆಯುತ್ತಲೇ ಇವೆ. ಹೀಗಾಗಿ ಸ್ಥಳೀಯ ಆಡಳಿತ ಹಾಗೂ ಸರ್ಕಾರ ಎಚ್ಚರವಹಿಸಿ ಕಟ್ಟುನಿಟ್ಟಿನ ಕ್ರಮ ವಹಿಸುವುದು ಅಗತ್ಯ. **–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.**

■ ಮೊಬೈಲ್‌ನಲ್ಲಿ ಮಾತನಾಡುತ್ತಾ ವಾಹನ ಚಾಲನೆಗೆ ತಕ್ಕ ಶಾಸ್ತಿ ಆಗಲಿ



ಮಾನ್ಯರೆ,

ಎಲ್ಲಾ ವಾಹನ ಚಾಲನೆ ವೇಳೆ ಮೊಬೈಲ್ ಬಳಕೆ ವ್ಯಾಪಕವಾಗಿದೆ. ಇದಕ್ಕೆ ಕಡಿವಾಣ ಹಾಕದೇ ಇದ್ದಲ್ಲಿ ಮಾಡದೇ ಇರುವ ತಪ್ಪಿಗೆ ಅಮಾಯಕರು ಬಲಿಯಾಗಬೇಕಾಗುತ್ತದೆ. ಪೊಲೀಸರು ಕೂಡಲೇ ಎಚ್ಚೆತ್ತು ಕ್ರಮ ಕೈಗೊಳ್ಳಲು ಮನವಿ. **–ಚಂದ್ರಶೇಖರ್, ಗೋಕುಲಂ, ಮೈಸೂರು.**



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ನಾಡಹಬ್ಬ ದಸರಾ ಉದ್ಘಾಟಿಸಲಿರುವ ನಾಡೋಜ ಹಂಪ ನಾಗರಾಜಯ್ಯ



ಕನ್ನಡ ನಾಡಿಗೆ, ಮೈಸೂರಿಗೆ, ಅತ್ಯಂತ ಮುಖ್ಯವಾದ ಹಬ್ಬ ದಸರಾ. ನಾಡಿನ ತಾಯಿ ಚಾಮುಂಡೇಶ್ವರಿಯ ಪವಿತ್ರ ಸನ್ನಿಧಿಯಲ್ಲಿ ಇದನ್ನು ಉದ್ಘಾಟಿಸಿ ಮಂಗಳವನ್ನು ಕೋರುವ ಭಾಗ್ಯ ಅನೇಕ ಜನ್ಮಗಳಲ್ಲಿ ಮಾಡಿದ ಪುಣ್ಯಗಳ ಪರಿಪಾಕದಿಂದ, ಈ ಜನ್ಮದಲ್ಲಿ ಮಾಡಿದ ತಪಸ್ಸಿನ ಪ್ರಭಾವದಿಂದ ವಿಶಿಷ್ಟರಲ್ಲಿ ವಿಶಿಷ್ಟರಿಗೆ ದೊರಕುತ್ತದೆ. ಈ ವರ್ಷ ಆ ಭಾಗ್ಯವನ್ನು ಪಡೆದ ಮಾನ್ಯರು ನಾಡೋಜ ಹಂಪನಾ. ಸಾಹಿತ್ಯ ರಚನೆಯಲ್ಲಿ, ಸಂಶೋಧನೆಯಲ್ಲಿ, ಸೌಹಾರ್ದದಲ್ಲಿ, ಸೌಜನ್ಯದಲ್ಲಿ ಅವರಿಗೆ ಅವರೇ ಸಾಟಿ ಎನಿಸಿರುವ ಈ ಹಿರಿಯ ವಿದ್ವಾಂಸರನ್ನು ಈ ಶುಭ ಕಾರ್ಯಕ್ಕೆ ಆರಿಸಿರುವ ಸರ್ಕಾರಕ್ಕೂ ನಾವು ಅಭಿನಂದನೆಯನ್ನು ಸಲ್ಲಿಸಬೇಕು.

ಹಂಪನಾ ಎಂದರೆ ಹಂಪಸಂದ್ರ ಪದ್ಮನಾಭಯ್ಯ ನಾಗರಾಜಯ್ಯ ಎಂಬುದರ ಸಂಕ್ಷಿಪ್ತ ರೂಪ. ಹಂಪಸಂದ್ರ ಹಿಂದಿನ ಕೋಲಾರ ಜಿಲ್ಲೆಯ (ಇಂದಿನ ಚಿಕ್ಕಬಳ್ಳಾಪುರ ಜಿಲ್ಲೆಯ) ಗೌರಿಬಿದನೂರು ತಾಲೂಕಿನ ಒಂದು ಹಳ್ಳಿ. ಪ್ರಾಯಶಃ ಪಂಪಾ ಸಮುದ್ರ ಎಂಬ ಶಬ್ದದ ತದ್ಭವ ರೂಪ ಹಂಪಸಂದ್ರ. ಈ ಹೆಸರಿನ ಸಾಕಷ್ಟು ಸಂಖ್ಯೆಯ ಹಳ್ಳಿಗಳು ಕನ್ನಡ ನಾಡಿನಲ್ಲಿವೆಯಂತೆ (ಪ್ರಸ್ತುತ ಲೇಖನವನ್ನು ಬರೆದಿರುವವನು ಗುಡಿಬಂಡೆ ತಾಲೂಕಿನ ಹಂಪಸಂದ್ರದವನು). ಹಂಪನಾ ಅವರಲ್ಲಿ ಕನ್ನಡದ ಚೆಲುವನ್ನು ಬಿಂಬಿಸಿ ಒಲವನ್ನು ಬಿತ್ತಿ ಬೆಳೆಸಿದವರು ಆಚಾರ್ಯವರ್ಯ ತೀನಂಶ್ರೀ, ವಿಶ್ವಕವಿ ಕುವೆಂಪು ಮುಂತಾದ ಮಹಾನುಭಾವರು. ಕನ್ನಡದ ಅಧ್ಯಯನ, ಅಧ್ಯಾಪನ, ಸಂಶೋಧನಾ, ಲೇಖನ ಇವು ಹಂಪನಾ ಅವರ ನಿತ್ಯಕರ್ತವ್ಯಗಳಾಗಿವೆ. ಕನ್ನಡದ ವೃದ್ಧಿಗಾಗಿ ಅವರು ಸಂಸ್ಕೃತ, ಪ್ರಾಕೃತ, ಇಂಗ್ಲೀಷ್ ಮುಂತಾದ ಭಾಷೆಗಳಲ್ಲೂ ಪ್ರಭುತ್ವವನ್ನು ಸಾಧಿಸಿದ್ದಾರೆ.

ತೊಂಬತ್ತರ ವಯಸ್ಸಿನಲ್ಲೂ ಹತ್ತೊಂಬತ್ತು ವರ್ಷದವರಂತೆ ಚಟುವಟಿಕೆಯಿಂದ ಕನ್ನಡಕ್ಕಾಗಿ ಅಹರ್ನಿಶಿ ದುಡಿಯುವ ಈ ವ್ಯಕ್ತಿ ಶಕ್ತಿಯ ಕಣಜ, ಅನುರಕ್ತಿಯ ಗಣಿ. ಎಲ್ಲರಲ್ಲೂ ಸ್ನೇಹದ ಹೊನಲನ್ನು ಹರಿಸುವ ಅವರ ಹೃದಯದಲ್ಲಿ ವಿಶ್ವಪ್ರೀತಿಯ ಬತ್ತದ ತೊರೆ ಹರಿಯುತ್ತಿದೆ. ಅಪರಿಚಿತರಿಗೂ ಅವರು ಕ್ಷಣಮಾತ್ರದಲ್ಲಿ ಸುಪರಿಚಿತರಾಗಿ ಬಿಡುತ್ತಾರೆ. ಸಭೆಯಲ್ಲಿ ಅವರು ಮಾತನಾಡಿದರೆ ಅದು ಅಮೃತಧಾರೆ. ಸಮುದ್ರದಂತೆ ಗಂಭೀರವಾದ ವಿಷಯಗಳನ್ನು ಪ್ರಸ್ತಾಪಿಸುವಾಗಲೂ ಅವರು ಹಾಸ್ಯ ತರಂಗಗಳಿಂದ ಅಲಂಕರಿಸುತ್ತಾರೆ. ಯಾರ ಮನಸ್ಸನ್ನೂ ನೋಯಿಸುವ, ಕುಚೋದ್ಯ ಮಾಡುವ, ಶ್ರೋತೃಗಳಿಗೆ ಮುಜುಗರವನ್ನುಂಟು ಮಾಡುವ ಹಾಸ್ಯ ಅವರದಲ್ಲ. ತಮ್ಮನ್ನೇ ಗುರಿಯಾಗಿಸಿಕೊಂಡು ಅವರು ನಗೆಬುಗ್ಗೆಗಳನ್ನುಕ್ಕಿಸುತ್ತಾರೆ. ಒಂದು ಸಭೆಯಲ್ಲಿ ಅವರು ಗಂಭೀರ ಧ್ವನಿಯಲ್ಲೇ Small is beautiful, look at me ಎಂದು ಹೇಳಿ ನಗುವಿನ ಅಲೆಗಳನ್ನೆಬ್ಬಿಸಿದುದನ್ನು ನಾನೆಂದೂ ಮರೆಯಲಾರೆ.

ಹಂಪನಾ ಅವರ ಜೀವನಾನುಭವ ದೊಡ್ಡದು. ಎಷ್ಟೊಂದು ದೇಶಗಳನ್ನು ಅವರು ಸುತ್ತಿದ್ದಾರೆ, ಎಷ್ಟೊಂದು ವಿಶ್ವವಿದ್ಯಾನಿಲಯಗಳಲ್ಲಿ ಭಾಷಣಗಳನ್ನು ಮಾಡಿದ್ದಾರೆ, ಎಷ್ಟೊಂದು ಸಭೆಗಳಲ್ಲಿ ಕನ್ನಡದ ಕಹಳೆಯನ್ನು ಊದಿದ್ದಾರೆ ಎಂದು ನೋಡಿದರೆ ಆಶ್ಚರ್ಯವಾಗುತ್ತದೆ.

ಸಾಂಸಾರಿಕ ಜೀವನದಲ್ಲಿ ಅವರು ಅದೃಷ್ಟಶಾಲಿಗಳೆಂದು ಹೇಳಬೇಕು. ಪ್ರೀತಿಸಿ ಮದುವೆ ಮಾಡಿಕೊಂಡರು. ಅವರ ಧರ್ಮಪತ್ನಿ ಕಮಲಮ್ಮನವರು (ಕಮಲಾಹಂಪನಾ ಎಂದೇ ಪ್ರಖ್ಯಾತರಾದವರು) ಸಾಕ್ಷಾತ್ ಶಾರದೆಯ ಅವತಾರ. ಈ ದಂಪತಿಗಳನ್ನು ನೋಡಿದಾಗ–

ವಾಗರ್ಥಾವಿವ ಸಂಪೃಕ್ತೌ ವಾಗರ್ಥಪ್ರತಿಪತ್ತಯೇ।
ಜಗತಃ ಪಿತರೌವಂದೇ ಪಾರ್ವತೀಪರಮೇಶ್ವರೌ॥

ಎಂಬ ಕಾಳಿದಾಸೋಕ್ತಿಯೇ ನೆನಪಿಗೆ ಬರುತ್ತಿತ್ತು. ಒಬ್ಬರು ಹೆಚ್ಚಲ್ಲ, ಒಬ್ಬರು ಕಡಿಮೆಯಲ್ಲ. ಕನ್ನಡ ಸಾಹಿತ್ಯ ದೃಷ್ಟಿಯಲ್ಲಿ, ಜೈನ ದರ್ಶನ ದೃಷ್ಟಿಯಲ್ಲಿ ಒಬ್ಬರಿಗಿಂತ ಒಬ್ಬರು ಮೇಲುಗೈ. (ಇತ್ತೀಚೆಗೆ ಕಮಲಾ ಹಂಪನಾ ಪರಲೋಕವಾಸಿಗಳಾದರು.)

ಚಾರುವಸಂತ ಹಂಪನಾ ಅವರ ಮೇರುಕೃತಿ. ಒಂದು ಮಹಾಕಾವ್ಯ. ಕನ್ನಡದ ಸೊಬಗು ಅಲ್ಲಿ ಪಡಿಮೂಡಿದೆ. ಈ ಕೃತಿಯನ್ನು ರಚಿಸಿದಾಗ ಹಂಪನಾ ಅವರಿಗೆ ಎಪ್ಪತ್ತಾರು ವರ್ಷ. ಸಾಮಾನ್ಯರು ಪ್ರೇಮಕಾಮಗಳ ಪರಿಧಿಯನ್ನು ದಾಟಿ ಕೇವಲ ವೈರಾಗ್ಯವನ್ನು ಅವಲಂಬಿಸುವ ವಯಸ್ಸು. ಆದರೆ ಕವಿಚೇತನಕ್ಕೆ ವಯೋನಿರ್ಬಂಧವಿಲ್ಲ. ಚಾರುದತ್ತ–ವಸಂತಸೇನೆಯರ ಪ್ರೇಮವನ್ನು ಅದ್ಭುತವಾಗಿ ಹಂಪನಾ ಚಿತ್ರಿಸಿದ್ದಾರೆ. ಪ್ರತಿಯೊಬ್ಬ ಕನ್ನಡಿಗನೂ ಈ ಗ್ರಂಥವನ್ನು ಓದಿ ಆನಂದಿಸಬೇಕು.

ಚಾರುವಸಂತ ಭಾರತದ ನಾನಾ ಭಾಷೆಗಳಲ್ಲಿ ಅನುವಾದವನ್ನು ಕಂಡಿದೆ. ಹೀಗೆ ಕನ್ನಡದ ಕಂಪು ಅಖಿಲ ಭಾರತ ವ್ಯಾಪ್ತಿಯನ್ನು ಪಡೆದಿದೆ ಎಂಬುದು ಹೆಮ್ಮೆಯ ವಿಷಯ. (ಚಾರುವಸಂತವನ್ನು ಸಂಸ್ಕೃತಕ್ಕೆ ಅನುವಾದಿಸಿದ ಸೌಭಾಗ್ಯ ಪ್ರಸ್ತುತ ಲೇಖಕನದಾಗಿತ್ತು.)

'ಸ್ಪೆಕ್ಟ್ರಮ್ ಆಫ್ ಕ್ಲಾಸಿಕಲ್ ಲಿಟರೇಚರ್ ಇನ್ ಕರ್ನಾಟಕ'

ಕರ್ನಾಟಕದಲ್ಲಿ ಹುಟ್ಟಿದ ಶಾಸ್ತ್ರೀಯ ಅಭಿಜಾತ ಸಾಹಿತ್ಯವನ್ನು ಅದರ ಹಿರಿಮೆಯನ್ನೂ ಹೊರಗಿನ ಜಗತ್ತಿಗೂ ತಿಳಿಸಲು ಹಂಪನಾ ಆಂಗ್ಲ ಭಾಷೆಯಲ್ಲಿ ರಚಿಸಿರುವ ಬೃಹತ್ ಗ್ರಂಥವೇ 'ಸ್ಪೆಕ್ಟ್ರಮ್ ಆಫ್ ಕ್ಲಾಸಿಕಲ್ ಲಿಟರೇಚರ್ ಇನ್ ಕರ್ನಾಟಕ'. ಇದು ಐದು ಸಂಪುಟಗಳಲ್ಲಿ ಹರಡಿಕೊಂಡಿದೆ. ಒಂದನೆಯ ಸಂಪುಟದಲ್ಲಿ ಪಂಪನ ಪೂರ್ವದ ಮತ್ತು ಪಂಪನ ಯುಗದ ಕನ್ನಡ ಸಾಹಿತ್ಯದ ತಲಸ್ಪರ್ಶಿ ವಿಮರ್ಶೆಯನ್ನು ಹಂಪನಾ ನೀಡಿದ್ದಾರೆ. ಕರ್ನಾಟಕದ ಸಾಹಿತ್ಯ ಲೋಕದಲ್ಲಿ ಆಗ ಕನ್ನಡ, ಸಂಸ್ಕೃತ ಮತ್ತು ಪ್ರಾಕೃತ ಎಂಬ ಮೂರು ಭಾಷೆಗಳೂ ಮುಖ್ಯವಾಗಿದ್ದವು. ಪಂಪನು ಈ ಮೂರು ಭಾಷೆಗಳ ಜೊತೆಗೆ ತೆಲುಗು ಭಾಷೆಯನ್ನೂ ಚೆನ್ನಾಗಿ ಅರಿತಿದ್ದನು. ಪಂಪನ ಪೂರ್ವ ಕಾಲದಲ್ಲಿ ಉಮಾಸ್ವಾತಿಯ ತತ್ತ್ವಾರ್ಥಸೂತ್ರ ವ್ಯಾಖ್ಯಾನಕಾರರಾದ ಪೂಜ್ಯಪಾದ, ಅಕಳಂಕ, ವಿದ್ಯಾನಂದ ಮುಂತಾದ ಶ್ರೇಷ್ಠ ಸಂಸ್ಕೃತ ಗ್ರಂಥಕಾರರ ಮೇಲೆ ಹಂಪನಾ ಬೆಳಕನ್ನು ಚೆಲ್ಲಿದ್ದಾರೆ. ಅಂದಿನ ಸಾಹಿತ್ಯದ ವಿಶ್ವರೂಪ ದರ್ಶನವನ್ನು ಪಡೆಯಲು ಬಯಸುವ ಜಿಜ್ಞಾಸುಗಳು ಈ ಪುಸ್ತಕವನ್ನು ಓದಬೇಕು.

ಏಳನೆಯ ಶತಮಾನದಲ್ಲಿದ್ದ ತುಂಬಲೂರಾಚಾರ್ಯ, ಶ್ರೀವರ್ಧದೇವಾಚಾರ್ಯ, ಸಾಮಕುಂದ ಮುಂತಾದ ಶಾಸ್ತ್ರ ಪಾರಂಗತರನ್ನು ಹಂಪನಾ ಪರಿಚಯಿಸಿದ್ದಾರೆ. ಒಂಬತ್ತನೆಯ ಶತಮಾನದಲ್ಲಿದ್ದ ಶ್ರೀವಿಜಯ (814–877) ಉಪಲಬ್ಧವಾಗಿರುವ ಕವಿರಾಜಮಾರ್ಗವನ್ನೇ ಅಲ್ಲದೆ ಅನುಪಲಬ್ಧವಾಗಿರುವ ಚಂದ್ರಪ್ರಭ ಪುರಾಣವನ್ನು ರಘುವಂಶ ಪುರಾಣವನ್ನೂ ಬರೆದಿದ್ದನೆಂಬುದನ್ನೂ ಹಂಪನಾ ತಿಳಿಸಿದ್ದಾರೆ. ಹೀಗೆ ಆ ಕಾಲದ ಅನೇಕ ಕವಿಗಳ ಚರಿತೆಯನ್ನೂ, ಕಾವ್ಯಭಾಗಗಳ ಅನುವಾದಗಳನ್ನೂ ಕೊಟ್ಟಿದ್ದಾರೆ.

ಎರಡನೆಯ ಸಂಪುಟವು ಪಂಪೋತ್ತರಯುಗದ ಕನ್ನಡ ಸಾಹಿತ್ಯಕ್ಕೆ ಮೀಸಲಾಗಿದೆ. ಪೊನ್ನ, ರನ್ನ, ಚಾವುಂಡರಾಯ, ಕುಮುದೇಂದು, ಜಿನವಲ್ಲಭವ, ದುರ್ಗಸಿಂಹ, ನಾಗವರ್ಮ, ಶಾಂತಿನಾಥ, ನಾಗಚಂದ್ರ, ವಜ್ರಭಟ್ಟ, ನಯಸೇನ, ಕರ್ಣಪಾರ್ಯ, ಕರ್ನಾಭರಣ, ಬಂಧುವರ್ಮ ಮುಂತಾದ ಕವಿಗಳ ಚರಿತ್ರೆಯನ್ನು ಕೃತಿ ಪರಿಚಯ, ವಿಮರ್ಶೆಗಳನ್ನೂ ಇಲ್ಲಿ ಕಾಣುತ್ತೇವೆ.

ಮೂರನೆಯ ಸಂಪುಟದಲ್ಲಿ ಚತುರ್ಭಾಷಾಕವಿಚಕ್ರವರ್ತಿ ನೇಮಿಚಂದ್ರ, ರುದ್ರಭಟ್ಟ, ಕವಿಕಂದರ್ಪ, ಹರಿಹರ, ಜನ್ನ, ಮುಂತಾದವರಿಂದ ಆರಂಭಗೊಂಡು ರತ್ನಾಕರವರ್ಣಿಯವರೆಗಿದ್ದ ಕನ್ನಡ ಕವಿಗಳ ಸುಷ್ಠು ಪರಿಚಯವಿದೆ. ಕವಿಗಳ ಬಗೆಗೆ ಹೇಳುವಾಗ ಹಂಪನಾ ಅನೇಕ ಭಾರತೀಯ ಮತ್ತು ವಿದೇಶೀಯ ಲೇಖಕರ ಮಾತುಗಳನ್ನೂ ಉದಾಹರಿಸಿದ್ದಾರೆ.

ನಾಲ್ಕನೆಯ ಸಂಪುಟದಲ್ಲಿ ಕರ್ನಾಟಕದಲ್ಲಿ ರಚಿತವಾದ ಸಂಸ್ಕೃತ, ಪ್ರಾಕೃತ ಮತ್ತು ಅಪಭ್ರಂಶ ಸಾಹಿತ್ಯಗಳ ಚರಿತ್ರೆಯನ್ನು ನೋಡಬಹುದು. ಕರ್ನಾಟಕ ದೇಶ ಕನ್ನಡಕ್ಕೆ ಅಲ್ಲದೆ ಇತರ ಭಾಷೆಗಳ ಸಾಹಿತ್ಯದ ವೃದ್ಧಿಗೂ ಕಾರಣವಾಗಿದೆ. ಇಲ್ಲಿ ಉಭಯ ಭಾಷಾನಿಪುಣ ಅಸಗ ಮಹಾಕವಿ ಇದ್ದನು. ಉಭಯ ಭಾಷಾ ಚಕ್ರವರ್ತಿಯೆನಿಸಿದ್ದ ಹಸ್ತಿಮಲ್ಲನಿದ್ದನು. ಅಪಭ್ರಂಶ ಮಹಾಕವಿ ಸ್ವಯಂಭೂ ದೇವನೂ ಕರ್ನಾಟಕ ದೇಶದವನೇ. ಇವರೆಲ್ಲರ ಕೊಡುಗೆ ಊಹಾತೀತವೆನ್ನುವಷ್ಟು ದೊಡ್ಡದು. ಇದೆಲ್ಲವನ್ನೂ ಹಂಪನಾ ನಿರೂಪಿಸಿದ್ದಾರೆ. ಐದನೆಯ ಸಂಪುಟದಲ್ಲಿ ಹಂಪನಾ ತಮ್ಮ ಗಮನವನ್ನು ಕನ್ನಡ ನಾಡಿನ ಶಾಸನಗಳ ಮೇಲೆ ಕೇಂದ್ರೀಕರಿಸಿದ್ದಾರೆ. ಐದನೆಯ ಶತಮಾನದ ಹಲ್ಮಿಡಿ ಶಾಸನದಿಂದ ವಿವರಣೆಯನ್ನು ಆರಂಭಿಸಿ ಅನೇಕ ಶಾಸನಗಳನ್ನು ಪರಿಶೀಲಿಸಿದ್ದಾರೆ. ವಿದೇಶೀಯರಾಗಿದ್ದರೂ ಅನೇಕ ಯೂರೋಪಿಯನ್ನರು ನಮ್ಮ ಶಾಸನಗಳ ಅಧ್ಯಯನದಲ್ಲಿ ಎಷ್ಟು ತೊಡಗಿದ್ದರೆಂಬುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ.

ರವಿಕೀರ್ತಿಯ ಶಾಸನ (ಕ್ರಿ.ಶ. 634) ಅತ್ಯುತ್ತಮ ಸಂಸ್ಕೃತದಲ್ಲಿ ರಚಿತವಾಗಿದೆ. ಅದರ ಸಂಪೂರ್ಣ ಆಂಗ್ಲಾನುವಾದವನ್ನು ಕೀಲ್‌ಹಾರ್ನ್ ಮಹಾಶಯನು ಮಾಡಿದ್ದಾನೆ. ಹಂಪನಾ ಆ ಅನುವಾದವನ್ನು ಈ ಸಂಪುಟದಲ್ಲಿ ಕೊಟ್ಟಿದ್ದಾರೆ. ಈ ಸಂಪುಟದಲ್ಲಿ Sheldon Pollock ಅವರ Language of the Gods in the world of Men ಎಂಬ ಗ್ರಂಥವನ್ನು ಹಂಪನಾ ವಿಮರ್ಶಿಸಿದ್ದಾರೆ. ವಿದ್ವಾಂಸರು ಇದನ್ನು ಅವಶ್ಯವಾಗಿ ಓದಬೇಕು.

ಜರ್ಮನಿಯ Anna Aurclia Esposito ಅವರು ತಮ್ಮ ಮುನ್ನುಡಿಯಲ್ಲಿ ಹೇಳಿರುವಂತೆ Translations of the most impressive passages, some of them by the author himself, flavour the journey through the history of Karnataka's literature and arouse the desire to delve deeper into this unique culture. ಪಾಶ್ಚಾತ್ಯ ವಿದ್ವಾಂಸರೇ ಹಾಗೆ ಹೇಳಿರುವಾಗ ನಮಗೆ ನಮ್ಮ ಸಂಸ್ಕೃತಿಯ ಒಳನೋಟಗಳನ್ನು ಪಡೆಯಲು ಹಂಪನಾ ಅವರ ಕೃತಿಯು ಸ್ಫೂರ್ತಿಯನ್ನು ಕೊಡುವುದರಲ್ಲಿ ಸಂದೇಹವಿಲ್ಲ.


ಕರ್ನಾಟಕ ಸಂಸ್ಕೃತಿಯ ಶ್ರೇಷ್ಠ ಪ್ರತಿನಿಧಿಯಾಗಿ, ಸಾಹಿತ್ಯ ಸಾಧಕರಾಗಿರುವ ಹಂಪನಾ ಅವರು ದಸರಾ ಮಹೋತ್ಸವವನ್ನು ಉದ್ಘಾಟಿಸುತ್ತಿರುವ ಶುಭ ಸಂದರ್ಭದಲ್ಲಿ ಅವರನ್ನು ಪ್ರಣಾಮಪೂರ್ವಕವಾಗಿ ಅಭಿನಂದಿಸುತ್ತೇನೆ.

ಹಂಪನಾ ಎಂದೆಂಬ ಸಾಹಿತ್ಯ ಕಲ್ಪತರು
ಕಂಪನ್ನು ಬಿರುತಿಹ ಕುಸುಮಗಳ ನೀಡಿ ।
ತಂಪಾದ ನೆರಳನ್ನು ಜನಗಳಿಗೆ ಒದಗಿಸುತ
ಇಂಪಾದ ನುಡಿಗಳನು ಎಮಗೀಯಲಿ ।

ಮೈಸೂರು ದಸರಾ ಕಾರ್ಯಕ್ರಮಗಳಲ್ಲಿ ಸಿದ್ದರಾಮಯ್ಯ ಭಾಗಿಯಾಗಬಾರದು

ಮಾಜಿ ಸಚಿವ ಎನ್.ಮಹೇಶ್ ಆಗ್ರಹ

ಮೈಸೂರು,ಅ.2(ಬಿಎಲ್‌ಯು)– ಲೋಕಾಯುಕ್ತ ಹಾಗೂ ಇಡಿಯಲ್ಲಿ ಪ್ರಕರಣ ದಾಖಲಾಗಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮೈಸೂರು ದಸರಾದ ಯಾವುದೇ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬಾರದು ಎಂದು ಮಾಜಿ ಸಚಿವ ಎನ್.ಮಹೇಶ್ ಆಗ್ರಹಿಸಿದ್ದಾರೆ.



ಎನ್.ಮಹೇಶ್

ನಗರ ಬಿಜೆಪಿ ಕಚೇರಿಯಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದಸರಾ ಉದ್ಘಾಟನೆ, ಜಂಬೂಸವಾರಿ ಮೆರವಣಿಗೆಯ ಪುಷ್ಪಾರ್ಚನೆ ಸೇರಿದಂತೆ ದಸರಾದ ಯಾವುದೇ ಕಾರ್ಯಕ್ರಮದಲ್ಲಿ ಭಾಗಿಯಾಗಬಾರದು ಹಾಗೂ ಕೂಡಲೇ ತಮ್ಮ ಸ್ಥಾನ ತೊರೆಯಬೇಕು ಎಂದು ಒತ್ತಾಯ ಮಾಡಿದರು.

40 ವರ್ಷ ನಿಷ್ಕಳಂಕ ರಾಜಕಾರಣ ಮಾಡಿದ್ದೇನೆ ಎನ್ನುವುದಾದರೆ ನೈತಿಕ ಹೊಣೆ ಹೊತ್ತು ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕು ಎಂದು ಒತ್ತಾಯ ಮಾಡಿದರು.

ಸಿದ್ದರಾಮಯ್ಯ ಒಂದು ರೀತಿ ವಿಷ ವರ್ತುಲದಲ್ಲಿ ಸಿಲುಕಿದ್ದಾರೆ. ಪ್ರಜಾಪ್ರಭುತ್ವ ಹಾಗೂ ಸಂವಿಧಾನದ ಬಗ್ಗೆ ಮಾತನಾಡುವ ಸಿದ್ದರಾಮಯ್ಯ ರಾಜೀನಾಮೆ ನೀಡಿ ನೈತಿಕ ಮಾರ್ಗದಲ್ಲಿ ನಡೆಯಬೇಕು ಎಂದು ಮಹೇಶ್ ಹೇಳಿದರು.


ತಪ್ಪು ಮಾಡಿಲ್ಲ ಎನ್ನುವುದಾದರೆ ನಿವೇಶನ ವಾಪಸ್ಸು ಕೊಟ್ಟಿದ್ದೇಕೆ. ಇಡಿಯಲ್ಲಿ ದೂರು ದಾಖಲಾದ ಒಂದೇ ದಿನದಲ್ಲಿ ಈ ಕ್ರಮ ಏಕೆ ಕೈಗೊಂಡಿದ್ದೀರಾ ಎಂದು ಪ್ರಶ್ನಿಸಿದ ಮಹೇಶ್, ಯಡಿಯೂರಪ್ಪ ಅವರ ಮೇಲೆ ಬಂದ ಇಂತಹುದೆ ಆರೋಪವನ್ನು ಸಿದ್ದರಾಮಯ್ಯ ಈ ಹಿಂದೆ ಟೀಕಿಸಿದ್ದರು. ಆದರೆ ಈಗ ಸಿದ್ದರಾಮಯ್ಯ ಅವರಿಗೆ ಈ ಪರಿಸ್ಥಿತಿ ಬಂದಿದೆ ಎಂದರು.

ಪಾರ್ವತಿ ಅವರು 14 ನಿವೇಶನ ವಾಪಸ್ ನೀಡಿದ ಕೂಡಲೇ ಹಗರಣ ಕೊನೆಯಾಗುವುದಿಲ್ಲ. ನಿವೇಶನ ನೀಡಿದ ಸಂದರ್ಭದಲ್ಲಿ ಸಿದ್ದರಾಮಯ್ಯ ಪುತ್ರ ಯತೀಂದ್ರ ಶಾಸಕರಾಗಿ ಮುಡಾ ಸಭೆಯಲ್ಲಿ ಭಾಗಿಯಾಗಿದ್ದರು. ಇನ್ನು ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಮೈಸೂರಿಗೆ ಬಂದಾಗ ಹಲವು ಮಹತ್ವದ ದಾಖಲೆಗಳನ್ನು ಕೊಂಡೊಯ್ದರು. ಈ ಮೂಲಕ ಸಿದ್ದರಾಮಯ್ಯ ಅವರನ್ನು ಹಗರಣದಿಂದ ಮರೆಮಾಚುವ ಯತ್ನ ನಡೆದಿದೆ. ಒಟ್ಟಾರೆ ಮುಡಾ ಹಗರಣದಲ್ಲಿ ಯಾರೇ, ಯಾವುದೇ ಪಕ್ಷದವರು ಭಾಗಿಯಾಗಿದ್ದರೂ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಯತ್ನಾಳ್ ವಿರುದ್ಧ ಕ್ರಮಕ್ಕೆ ಆಗ್ರಹ: ಶಾಸಕ ಯತ್ನಾಳ್ ಬಿಜೆಪಿ ಬಗ್ಗೆ ವಿವಾದಾತ್ಮಕ ಹೇಳಿಕೆ ನೀಡುತ್ತಿರುವ ಕಾರಣ ಪಕ್ಷದ ಸಂಘಟನಾತ್ಮಕ ವಿಚಾರಕ್ಕೆ ಧಕ್ಕೆಯಾಗುತ್ತಿದೆ. ಏನೇ ಭಿನ್ನಾಭಿಪ್ರಾಯ ಇದ್ದರೂ ಕೇಂದ್ರ ಹಾಗೂ ರಾಜ್ಯ ನಾಯಕರ ಜೊತೆ ಮಾತುಕತೆ ಮೂಲಕ ಬಗೆಹರಿಸಿಕೊಳ್ಳದೆ ಬಹಿರಂಗ ಆರೋಪ ಮಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಯತ್ನಾಳ್ ವಿರುದ್ಧ ಹೈಕಮಾಂಡ್ ಕ್ರಮ ಕೈಗೊಳ್ಳಬೇಕು ಎಂದು ಮಹೇಶ್ ಆಗ್ರಹಿಸಿದರು.

ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಯಿಂದ ಮುಗ್ಗರಿಸಿದೆ. ಎಸ್‌ಸಿ, ಎಸ್ಟಿ ಸಮುದಾಯಕ್ಕೆ ಮೀಸಲಿಟ್ಟ ಅನುದಾನವನ್ನು ದುರುಪಯೋಗ ಮಾಡಿಕೊಂಡಿದೆ. ಮೊದಲ ವರ್ಷ 11,144 ಕೋಟಿ, ಎರಡನೇ ವರ್ಷ 14 ಸಾವಿರ ಕೋಟಿ ಸೇರಿದಂತೆ ಒಟ್ಟು 26 ಸಾವಿರ ಕೋಟಿ ದುರುಪಯೋಗ ಮಾಡಿಕೊಂಡಿದ್ದಾರೆ. ಇದರಿಂದ ಈ ಸಮುದಾಯದ ಆರು ನಿಗಮಗಳು ಗುಟುಕು ನೀರು ಕುಡಿಯುವ ಪರಿಸ್ಥಿಯಲ್ಲಿದ್ದು, ಕೇವಲ 510 ಕೋಟಿ ಮಾತ್ರ ನೀಡಿದ್ದಾರೆ. ಇಷ್ಟೆಲ್ಲಾ ಆದರೂ ತಮಗೂ ಈ ಪ್ರಕರಣಕ್ಕೂ ಸಂಬಂಧವಿಲ್ಲ ಎಂಬಂತೆ ಸಿದ್ದರಾಮಯ್ಯ ಹೇಳಿಕೆ ನೀಡುತ್ತಿದ್ದಾರೆ ಎಂದು ನಗರ ಬಿಜೆಪಿ ಅಧ್ಯಕ್ಷ ನಾಗೇಂದ್ರ ಕಿಡಿಕಾರಿದರು.

ಮುಡಾ ಸಭೆ ಒಪ್ಪಿಗೆ ಪಡೆಯದೆ ನಿವೇಶನ ರದ್ದು ಮಾಡಲಾಗಿದೆ



ಮುಡಾ ಸಾಮಾನ್ಯ ಸಭೆಯ ಸಮ್ಮತಿ ಪಡೆಯದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಪಾರ್ವತಿ ವಾಪಸು ನೀಡಿದ 14 ನಿವೇಶನಗಳನ್ನು ತರಾತುರಿಯಲ್ಲಿ ಒಂದೇ ದಿನದಲ್ಲಿ ರದ್ದು ಮಾಡಲಾಗಿದೆ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಆರೋಪಿಸಿದರು.

ಮುಡಾದ ಇಡೀ ಪ್ರಕರಣ ನಡೆಯುತ್ತಿರುವುದು 14 ನಿವೇಶನಗಳ ಸುತ್ತ. ಆದರೆ ಮುಡಾ ಆಯುಕ್ತರು ಸಾಮಾನ್ಯ ಸಭೆಯ ಒಪ್ಪಿಗೆ ಪಡೆಯದೆ ತರಾತುರಿಯಲ್ಲಿ ನಿವೇಶನ ಮಂಜೂರಾತಿ ರದ್ದು ಮಾಡಿದ್ದಾರೆ. ಒಟ್ಟಾರೆ ತಪ್ಪು ಮಾಡಿದ್ದೇವೆ ಎಂದು ಸ್ವತಃ ಸಿದ್ದರಾಮಯ್ಯ ಅವರೇ ಈ ಮೂಲಕ ಒಪ್ಪಿಕೊಂಡಿದ್ದಾರೆ ಎಂದು ಟೀಕಿಸಿದರು. ಈ ಮೂಲಕ ಸಿದ್ದರಾಮಯ್ಯ ಮುಜುಗರಕ್ಕೊಳಗಾಗಿದ್ದಾರೆ. ಇಡೀ ಪ್ರಕರಣದ ಬಗ್ಗೆ ಮುಂದೆ ನಡೆಯುವ ಹಲವು ರೀತಿಯ ಬೆಳವಣಿಗೆಗಳಿಂದ ಸಿದ್ದರಾಮಯ್ಯ ದಸರಾ ಜಂಬೂ ಸವಾರಿಯಲ್ಲಿ ಪುಷ್ಪಾರ್ಚನೆ ಮಾಡುವುದು ಅನುಮಾನ ಎಂದು ಶ್ರೀವತ್ಸ ಭವಿಷ್ಯ ನುಡಿದರು.

ದಸರಾ ಸಿಎಂ ಕಪ್ ಕ್ರೀಡಾಕೂಟದಲ್ಲಿ ವಿಜೇತರಿಗೆ ನಗದು ಬಹುಮಾನ

ಮೈಸೂರು, ಅ.2(ಎಂಕೆ)– ಪ್ರಸಕ್ತ ಸಾಲಿನ ರಾಜ್ಯಮಟ್ಟದ ದಸರಾ ಸಿಎಂ ಕಪ್ ಕ್ರೀಡಾಕೂಟದಲ್ಲಿ ವಿಜೇತರಾಗುವ ಕ್ರೀಡಾಪಟುಗಳಿಗೆ ನಗದು ಪುರಸ್ಕಾರ ನೀಡಲು ಆದೇಶಿಸಲಾಗಿದೆ.

ವೈಯಕ್ತಿಕ ಕ್ರೀಡೆಯಲ್ಲಿ ಪ್ರಥಮ ನಗದು ಬಹುಮಾನ 8,000 ರೂ., ದ್ವಿತೀಯ ಬಹುಮಾನ 5,000 ರೂ. ಹಾಗೂ ತೃತೀಯ ಬಹುಮಾನ 2,500 ರೂ. ನೀಡಿದರೆ, 7 ಕ್ರೀಡಾಪಟುಗಳೊಳಗಿನ ಗುಂಪು ಕ್ರೀಡೆಗಳಲ್ಲಿ ವಿಜೇತರಿಗೆ ಪ್ರಥಮ ನಗದು ಬಹುಮಾನ 4,000 ರೂ., ದ್ವಿತೀಯ ಬಹುಮಾನ 3,000 ರೂ. ಹಾಗೂ ತೃತೀಯ ಬಹುಮಾನ 2,000 ರೂ. ನೀಡಲಾಗುವುದು.

ಹಾಗೆಯೇ 8 ಮತ್ತು ಅದಕ್ಕಿಂತ ಹೆಚ್ಚಿನ ಗುಂಪು ಕ್ರೀಡೆಗಳಲ್ಲಿ ವಿಜೇತರಿಗೆ ಪ್ರಥಮ ನಗದು ಬಹುಮಾನ 3,000 ರೂ., ದ್ವಿತೀಯ ಬಹುಮಾನ 2,000 ರೂ. ಹಾಗೂ ತೃತೀಯ ಬಹುಮಾನ 1,500 ರೂ.ಗಳ ನಗದು ಪುರಸ್ಕಾರ ನೀಡಲು ಅನುಮತಿ ನೀಡಲಾಗಿದೆ.

ಅ.3 ರಿಂದ 6ರವರೆಗೆ ನಡೆಯುವ ದಸರಾ ಸಿಎಂ ಕಪ್ ಕ್ರೀಡಾಕೂಟದಲ್ಲಿ 26 ಕ್ರೀಡೆಗಳು ನಡೆಯಲಿದ್ದು, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಬೆಳಗಾವಿ, ಮೈಸೂರು ಮತ್ತು ಕಲಬುರಗಿ ವಿಭಾಗ ಮಟ್ಟದಿಂದ ಅರ್ಹತೆ ಪಡೆದ 3000 ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ.

ಮಂಜುನಾಥಗೆ ಪಿಹೆಚ್.ಡಿ ಪದವಿ




ಮೈಸೂರು,ಅ.2–ಡಾ.ಬಿ.ಆರ್.ರಕ್ಷಿತ್ ಮತ್ತು ಡಾ.ಕೆ.ಎನ್.ಪ್ರಕಾಶ್ ಅವರ ಮಾರ್ಗದರ್ಶನದಲ್ಲಿ ಬಿ.ಜೆ.ಮಂಜುನಾಥ ಅವರು ಐಜೆನ್ ವ್ಯಾಲ್ಯೂಸ್ ಅಸೋಸಿಯೇಟೆಡ್ ವಿತ್ ಗ್ರಾಫ್ಸ್ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ವಿಶ್ವೇಶ್ವರಯ್ಯ ಟೆಕ್ನಿಕಲ್ ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ ಗುರುವಾರ 3 ಅಕ್ಟೋಬರ್ 2024

ಐತಿಹಾಸಿಕ ಕ್ಷಣಕ್ಕೆ ಚಾಮುಂಡೇಶ್ವರಿ ಸನ್ನಿಧಿಯಲ್ಲಿ ಸಿದ್ಧತೆ





ದಸರಾ ಉದ್ಘಾಟನಾ ಕಾರ್ಯಕ್ರಮದ ವೇದಿಕೆ ಯನ್ನು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಎಡಿಸಿ ಡಾ.ಶಿವರಾಜ್ ಪರಿಶೀಲಿಸಿ, ಚಾಮುಂಡೇ ಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯ ದರ್ಶಿ ಎಂ.ಜೆ.ರೂಪ ಅವರಿಂದ ಮಾಹಿತಿ ಪಡೆಯುತ್ತಿರುವುದು.

ಮೈಸೂರು,ಅ.2(ಎಂಟಿವೈ)–ನಾಡಹಬ್ಬ ದಸರಾ ಮಹೋತ್ಸವಕ್ಕೆ ನಾಳೆ (ಗುರುವಾರ) ಚಾಲನೆ ದೊರೆಯಲಿದ್ದು, ಚಾಮುಂಡಿಬೆಟ್ಟದಲ್ಲಿ ದಸರಾ ಉದ್ಘಾಟನೆ ಹಾಗೂ ದೇವಾಲಯದಲ್ಲಿ ನಡೆಯಲಿರುವ ಧಾರ್ಮಿಕ ಕಾರ್ಯ ಕ್ರಮಕ್ಕೆ ಸಿದ್ಧತೆ ಈಗಾಗಲೇ ಪೂರ್ಣಗೊಂಡಿದೆ. ಚಾಮುಂಡಿಬೆಟ್ಟದಲ್ಲಿ ದೇವಾಲಯದ ಪಕ್ಕದ ಆವರಣದಲ್ಲಿ ದಸರಾ ಉತ್ಸವ ಉದ್ಘಾಟನಾ ಸಮಾರಂಭಕ್ಕಾಗಿ ವೇದಿಕೆ ನಿರ್ಮಿಸಲಾಗಿದ್ದು, 30ರಿಂದ 45 ಮಂದಿ ಗಣ್ಯರು ಆಸೀನರಾಗಲು ವೇದಿಕೆ ಸಿದ್ಧಪಡಿಸಲಾಗಿದೆ. ಅಲ್ಲದೆ ಸಮಾರಂಭ ವೀಕ್ಷಿಸಲು ಗಣ್ಯರು ಸೇರಿದಂತೆ 800 ಮಂದಿಗೆ ಆಸನದ ವ್ಯವಸ್ಥೆ ಮಾಡಲಾಗಿದೆ. ಮುಂಜಾಗ್ರತಾ ಕ್ರಮವಾಗಿ ಚಾಮುಂಡಿ ಬೆಟ್ಟದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದೆ.

ಬೆಳ್ಳಿಯ ರಥದಲ್ಲಿ ನಾಡದೇವಿ ಪ್ರತಿಷ್ಠಾಪನೆ: ದಸರಾ ಮಹೋತ್ಸವದ ಉದ್ಘಾಟನೆಯನ್ನು ನಾಡದೇವಿ ಚಾಮುಂಡೇಶ್ವರಿ ಉತ್ಸವ ಮೂರ್ತಿಗೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಲಾಗುತ್ತದೆ. ಅದಕ್ಕಾಗಿ ದೇವಾಲಯದ ಬೆಳ್ಳಿ ರಥವನ್ನು ವೇದಿಕೆಯ ಬಳಿ ನಿಲ್ಲಿಸಲಾಗಿದೆ. ನಾಳೆ ಬೆಳಗ್ಗೆ 9.15ರಿಂದ 9.45ರವರೆಗೆ ಸಲ್ಲುವ ಶುಭ ವೃಶ್ಚಿಕ ಲಗ್ನದಲ್ಲಿ ನಾಡೋಜ, ಹಿರಿಯ ಸಾಹಿತಿ ಹಂಪ ನಾಗರಾಜಯ್ಯ ಅವರು ಮುಖ್ಯಮಂತ್ರಿ ಸಿದ್ಧರಾಮಯ್ಯ ಸಮ್ಮುಖದಲ್ಲಿ ಬೆಳ್ಳಿ ರಥದಲ್ಲಿ ಪ್ರತಿಷ್ಠಾಪಿಸಲಾಗಿರುವ ಚಾಮುಂಡೇಶ್ವರಿ ಉತ್ಸವ ಮೂರ್ತಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಈ ಸಾಲಿನ ದಸರಾ ಉತ್ಸವಕ್ಕೆ ಚಾಲನೆ ನೀಡಲಿದ್ದಾರೆ.

ದೇವಾಲಯದಲ್ಲಿ ಪೂಜೆ: ನವರಾತ್ರಿಯ ಆರಂಭದ ಮೊದಲ ದಿನವಾದ ನಾಳೆ(ಅ.3) ಮುಂಜಾನೆ 4.30ರಿಂದಲೇ ಚಾಮುಂಡೇಶ್ವರಿ ದೇವಾಲಯದಲ್ಲಿ ಪ್ರಧಾನ ಆಗಮಿಕ ಡಾ.ಎನ್.ಶಶಿಶೇಖರ್ ದೀಕ್ಷಿತ್ ನೇತೃತ್ವದಲ್ಲಿ ಮಹಾನ್ಯಾಸಪೂರ್ವಕ ರುದ್ರಾಭಿಷೇಕ, ಪಂಚಾಮೃತ ಅಭಿಷೇಕ ಸೇರಿದಂತೆ ವಿವಿಧ ಪೂಜಾ ಕೈಂಕರ್ಯಗಳು ಜರುಗಲಿವೆ. 9 ದಿನವೂ ವಿಶೇಷ ವಿವಿಧ ಪೂಜಾ ಕಾರ್ಯಗಳು ಜರುಗಲಿದ್ದು, ಪ್ರತಿ ದಿನ ಸಂಜೆ 4.30ರಿಂದ 5.30ರವರೆಗೆ ಮಹಾಬಲೇಶ್ವರ ದೇವಾಲಯದ ಮುಂಭಾಗ ಇರುವ ದರ್ಬಾರ್ ಮಂಟಪದಲ್ಲಿ ಚಾಮುಂಡೇಶ್ವರಿ ದೇವಿಗೆ ದರ್ಬಾರ್ ಉತ್ಸವ ನೆರವೇರಲಿದೆ.

ವಿವಿಧ ಅಲಂಕಾರ: ದಸರಾ ಹಿನ್ನೆಲೆಯಲ್ಲಿ ಚಾಮುಂಡೇಶ್ವರಿಗೆ ಒಂಭತ್ತು ದಿನವೂ ನಾನಾ ಅಲಂಕಾರ ಮಾಡಲಾಗುತ್ತದೆ. ಮೊದಲ ದಿನವಾದ ನಾಳೆ(ಅ.3) ಬ್ರಾಹ್ಮೀ ಅಲಂಕಾರ, ಅ.4ರಂದು ಮಹೇಶ್ವರಿ ಅಲಂಕಾರ, ಅ.5ರಂದು ಕೌಮಾರಿ, ಅ.6ರಂದು ವೈಷ್ಣವಿ, ಅ.7ರಂದು ವಾರಾಹಿ, ಅ.8ರಂದು ಇಂದ್ರಾಣಿ ಅಲಂಕಾರವಿರುತ್ತದೆ. ಅ.9ರಂದು ಚಾಮುಂಡಿ ಅಲಂಕಾರ, ಅ.10ರಂದು ಸರಸ್ವತಿ ಅಲಂಕಾರ, ಅಂದು ಸಂಜೆ ಕಾಳರಾತ್ರಿ ಪೂಜೆಯೂ ನಡೆಯುತ್ತದೆ. ಅ.11ರಂದು ಮಹಾಲಕ್ಷ್ಮೀ ಅಲಂಕಾರ, ಅ.12ರಂದು ಅಶ್ವಾರೋಹಣ ಅಲಂಕಾರ ಮಾಡಿ ಪೂಜಿಸಲಾಗುತ್ತದೆ. ಪ್ರತಿ ದಿನ ಬೆಳಿಗ್ಗೆ 7.30 ರಿಂದ 2 ಗಂಟೆ, ಮಧ್ಯಾಹ್ನ 3.30ರಿಂದ 6 ಗಂಟೆ ಹಾಗೂ ಸಂಜೆ.7.30ರಿಂದ ರಾತ್ರಿ 9 ಗಂಟೆಯವರೆಗೆ ಭಕ್ತರು ದೇವಿಯ ದರ್ಶನ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಅ.16ರಂದು ಬೆಟ್ಟದಲ್ಲಿ ರಥೋತ್ಸವವಿದ್ದು, ಅ.18ರಂದು ಬೆಟ್ಟದ ದೇವಿಕೆರೆಯಲ್ಲಿ ತೆಪ್ಪೋತ್ಸವ ಜರುಗಲಿದೆ. ಆ ನಂತರ ಈ ವರ್ಷದ ದಸರಾ ಮಹೋತ್ಸವದ ಎಲ್ಲಾ ಕಾರ್ಯಕ್ರಮಗಳು ಸಂಪನ್ನಗೊಂಡಂತಾಗುತ್ತದೆ.

ಪರಿಶೀಲನೆ: ದಸರಾ ಉದ್ಘಾಟನೆ ಹಿನ್ನೆಲೆಯಲ್ಲಿ ಬುಧವಾರ ಬೆಳಗ್ಗೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಅಪರ ಜಿಲ್ಲಾಧಿಕಾರಿ ಡಾ. ಶಿವರಾಜು ಚಾಮುಂಡಿಬೆಟ್ಟಕ್ಕೆ ಆಗಮಿಸಿ ವೇದಿಕೆ ಪರಿಶೀಲಿಸಿದರು. ಅಲ್ಲದೆ, ದಸರಾ ಉದ್ಘಾಟನೆಗೆ ಕೈಗೊಂಡಿರುವ ಕ್ರಮ ಕುರಿತಂತೆ ಅವಲೋಕಿಸಿದರು. ವೇದಿಕೆಯಲ್ಲಿ ಮುಖ್ಯಮಂತ್ರಿಗಳು, ಉದ್ಘಾಟಕರೊಂದಿಗೆ ಯಾರ್ಯಾರಿಗೆ ಆಸನದ ವ್ಯವಸ್ಥೆ ಮಾಡಬೇಕೆಂದು ಸಲಹೆ ನೀಡಿ, ಶಿಷ್ಟಾಚಾರ ಪಾಲಿಸುವಂತೆ ಸೂಚನೆ ನೀಡಿದರು. ಈ ವೇಳೆ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಂ.ಜೆ.ರೂಪ ಅವರು ಸಿದ್ಧತಾ ಕಾರ್ಯದ ಬಗ್ಗೆ ಮಾಹಿತಿ ನೀಡಿದರು.

ಚಿನ್ನದ ಅಂಬಾರಿಯಲ್ಲಿ ಸಾಗುವ ಉತ್ಸವ ಮೂರ್ತಿ: ಚಾಮುಂಡಿ ಬೆಟ್ಟದಲ್ಲಿ ನಾಳೆ ಗಣ್ಯರು ಪುಷ್ಪಾರ್ಚನೆ ಮಾಡಲಿರುವ ಚಾಮುಂಡೇಶ್ವರಿ ಉತ್ಸವ ಮೂರ್ತಿಯನ್ನು ಅರಮನೆಯಿಂದ ತಂದು, ಚಾಮುಂಡಿಬೆಟ್ಟದ ದೇವಾಲಯದಲ್ಲಿ ಈಗಾಗಲೇ ಇಡಲಾಗಿದೆ. ಪ್ರತಿ ವರ್ಷ ದಸರಾ ಮಹೋತ್ಸವದ ಆರಂಭಕ್ಕೆ ಕೆಲ ದಿನ ಮೊದಲೇ ಶುಭ ಮುಹೂರ್ತದಂದು ಅರಮನೆಯಿಂದ ಚಾಮುಂಡಿಬೆಟ್ಟಕ್ಕೆ ಉತ್ಸವಮೂರ್ತಿ ತರಲಾಗುತ್ತದೆ. ನಂತರ ಸ್ವಚ್ಛಗೊಳಿಸಿ, ಪೂಜೆ ಸಲ್ಲಿಸುವ ಮೂಲಕ ಶಕ್ತಿ ತುಂಬಲಾಗುತ್ತದೆ. ನಾಳೆಯಿಂದ ಅ.12ರವರೆಗೂ ಚಾಮುಂಡಿಬೆಟ್ಟದ ದೇವಾಲಯದಲ್ಲೇ ಪೂಜಿಸಲಾಗುತ್ತದೆ. ಜಂಬೂಸವಾರಿಯ ದಿನ ಬೆಳಿಗ್ಗೆ ಉತ್ಸವ ಮೂರ್ತಿಯನ್ನು ಅರಮನೆಗೆ ತರಲಾಗುತ್ತದೆ. ನಂತರ ಚಿನ್ನದ ಅಂಬಾರಿಯಲ್ಲಿಟ್ಟು ಜಂಬೂ ಸವಾರಿಯಲ್ಲಿ ಮೆರವಣಿಗೆ ಮಾಡಲಾಗುತ್ತದೆ. ಜಂಬೂ ಸವಾರಿಯ ನಂತರ ಉತ್ಸವ ಮೂರ್ತಿಯನ್ನು ಅರಮನೆಯಲ್ಲಿಟ್ಟು, ವರ್ಷವಿಡೀ ಪೂಜಿಸಲಾಗುತ್ತದೆ.

ಗಾಂಧೀಜಿ ನಮ್ಮೊಂದಿಗಿಲ್ಲ; ಆದರೆ ಅವರ ತತ್ವ–ಸಿದ್ಧಾಂತ ಅಮರ

- ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಮಹದೇವಪ್ಪ ಅಭಿಮತ
- ಕಾಂಗ್ರೆಸ್ ಕಚೇರಿಯಲ್ಲಿ ಗಾಂಧಿ ಜಯಂತಿ ಆಚರಣೆ

ಮೈಸೂರು,ಅ.2(ಎಂಟಿವೈ)– ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರನ್ನು ಕೊಂದವರ ಪರ ಇರುವವರು ಸಮಾಜದಲ್ಲಿ ಅಶಾಂತಿ ಉಂಟು ಮಾಡಲು ಪ್ರಯತ್ನಿಸುತ್ತಿದ್ದು, ಅಂತಹವರ ಬಗ್ಗೆ ಎಚ್ಚರಿಕೆಯಿಂದ ಇರುವುದರೊಂದಿಗೆ ಮಹನೀಯರ ಚಿಂತನೆ, ಆದರ್ಶಗಳು ನಶಿಸದಂತೆ ನೋಡಿಕೊಳ್ಳಬೇಕಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಸಲಹೆ ನೀಡಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಬುಧವಾರ ನಡೆದ ಮಹಾತ್ಮ ಗಾಂಧಿ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಮಹಾತ್ಮ ಗಾಂಧೀಜಿ ನಮ್ಮೊಂದಿಗೆ ಇಲ್ಲದಿದ್ದರೂ, ಅವರ ತತ್ವ–ಸಿದ್ಧಾಂತ ಸದಾ ನಮ್ಮೊಂದಿಗೆ ಇರುತ್ತವೆ. ದೇಶದಲ್ಲಿ ಎಲ್ಲಾ ಗ್ರಾಮಗಳು ಸ್ವರಾಜ್ಯ ಕಲ್ಪನೆಯಲ್ಲಿ ಅಭಿವೃದ್ಧಿಯಾಗಬೇಕು ಎಂದು ಕನಸು ಕಂಡಿದ್ದರು. ಸ್ಥಳೀಯ ಉತ್ಪನ್ನಗಳು ಕಡಿಮೆ ದರದಲ್ಲಿ ಎಲ್ಲ ಜನರಿಗೆ ದೊರಕಬೇಕೆಂಬ ಪರಿಕಲ್ಪನೆ ಹೊಂದಿದ್ದರು. ಗುಡಿ ಕೈಗಾರಿಕೆ ಹೆಚ್ಚು ಬಳಕೆಯಾಗಬೇಕು. ದೇಸಿ ವಸ್ತುಗಳನ್ನು ಜನರು ಖರೀದಿಸಬೇಕು ಎಂದು ಆಶಿಸಿದ್ದರು. ಸ್ಥಳೀಯ ಮಾನವ ಸಂಪನ್ಮೂಲಗಳನ್ನು ಬಳಸಿಕೊಂಡು ನಾವೆಲ್ಲರೂ ಸ್ವಾವಲಂಬಿಗಳಾಗಬೇಕು ಎಂದು ಬಯಸಿದ್ದರು ಎಂದು ಹೇಳಿದರು.



ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ರಾಮಸ್ವಾಮಿ ವೃತ್ತದಿಂದ ಕಾಂಗ್ರೆಸ್ ಕಚೇರಿವರೆಗೆ 'ಸ್ವಾತಂತ್ರ್ಯದೆಡೆಗೆ ಕಾಂಗ್ರೆಸ್ ನಡಿಗೆ' ಎಂಬ ಪಾದಯಾತ್ರೆ ನಡೆಸಿದರು.

ಧರ್ಮದ ಹೆಸರಿನಲ್ಲಿ ಇಂದು ಕೋಮುವಾದಿ ಶಕ್ತಿಗಳು ಭಯೋತ್ಪಾದನೆ ಹುಟ್ಟು ಹಾಕುತ್ತಿವೆ. ಗಾಂಧೀಜಿ ಅವರನ್ನು ಕೊಂದವರನ್ನು ಸಮರ್ಥಿಸಿಕೊಳ್ಳುವ ಗುಂಪಿನಿಂದ ಸೌಹಾರ್ದತೆ, ಶಾಂತಿ, ಸಹೋದರತ್ವ, ಸಹಬಾಳ್ವೆಗೆ ಧಕ್ಕೆ ತರುವ ಸಂಚು ನಡೆಯುತ್ತಿದೆ. ಇದನ್ನು ತಡೆಯಲು ಗಾಂಧಿವಾದ ಮದ್ದಾಗಿದೆ. ಸಾವಿರಾರು ಮಂದಿಯ ತ್ಯಾಗದಿಂದ ಕಷ್ಟಪಟ್ಟು ಪಡೆದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಮತ್ತೆ ಸ್ವಾತಂತ್ರ್ಯ ಚಳವಳಿಯ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು..

ಮೆರವಣಿಗೆ: ಗಾಂಧೀಜಿ ಅವರ ಅಧ್ಯಕ್ಷತೆಯಲ್ಲಿ ಬೆಳಗಾವಿಯಲ್ಲಿ ನಡೆದ ಅಧಿವೇಶನಕ್ಕೆ ನೂರು ವರ್ಷಗಳು ಪೂರ್ಣಗೊಂಡ ಹಿನ್ನೆಲೆಯಲ್ಲಿ ಅದರ ನೆನಪಿಗಾಗಿ ಕಾಂಗ್ರೆಸ್ ಕಾರ್ಯಕರ್ತರು ಮೈಸೂರಿನ ರಾಮಸ್ವಾಮಿ ವೃತ್ತದಿಂದ 'ಸ್ವಾತಂತ್ರ್ಯದೆಡೆಗೆ ಕಾಂಗ್ರೆಸ್ ನಡಿಗೆ' ಘೋಷಣೆಯೊಂದಿಗೆ ಕಾಂಗ್ರೆಸ್ ಭವನದವರೆಗೆ ಮೆರವಣಿಗೆ ನಡೆಸಿದರು. 300 ಮಂದಿಕ್ಕೂ ಹೆಚ್ಚು ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಶಾಸಕ ಕೆ.ಹರೀಶ್ ಗೌಡ, ವಿಧಾನಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮಾಜಿ ಸಂಸದ ಕಾಗಲವಾಡಿ ಶಿವಣ್ಣ, ಮುಡಾ ಅಧ್ಯಕ್ಷ ಕೆ.ಮರೀಗೌಡ, ಗ್ಯಾರಂಟಿ ಯೋಜನೆಯ ಅನುಷ್ಠಾನ ಸಮಿತಿ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯ್‌ಕುಮಾರ್, ನಗರ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಲತಾ ಟಿ.ಬಿ.ಚಿಕ್ಕಣ್ಣ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಒಂದನೇ ಪುಟದಿಂದ

ಡ್ರಗ್ಸ್ ಮಾರಾಟ ಜಾಲ ಪತ್ತೆ

ನಿವಾಸಿ ಮೆಹರೂಫ್ (37) ಬಂಧಿತರು. ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಕೇರಳ ಮೂಲದ ಮಹಮ್ಮದ್ ಅನೂಫ್ ಥೈಲ್ಯಾಂಡ್‌ನ ಬ್ಯಾಂಕಾಕ್‌ನಲ್ಲಿ ಕೆಫೆ ಇಟ್ಟುಕೊಂಡಿದ್ದಾನೆ. ಈತ ಕೇರಳದ ಕಾಸರಗೋಡಿನ ಮೆಹರೂಫ್ ಮತ್ತು ಮಹಮ್ಮದ್ ಅನೂಫ್ ಅವರೊಂದಿಗೆ ವಿರಾಜಪೇಟೆಯ ರವೂಫ್, ನಾಸೀರುದ್ದೀನ್, ವಾಜೀದ್, ನಾಪೋಕ್ಲುವಿನ ಯಾಹಿಯಾ, ಆಕನಾಸ್, ಅಜ್ಜಲ್, ಕೇರಳದ ರಿಯಾಜ್ ಅವರನ್ನು ಒಳಗೊಂಡ ತಂಡ ರಚಿಸಿ ಅಂತಾರಾಷ್ಟ್ರೀಯ ಮಾದಕ ದ್ರವ್ಯ ಸಾಗಾಟ ಕಾರ್ಯದಲ್ಲಿ ತೊಡಗಿದ್ದ. ಬ್ಯಾಂಕಾಕ್‌ನಿಂದ ಹೈಡ್ರೋ ಗಾಂಜಾವನ್ನು ಯಾಹಿಯಾ ಸೆ.23ರಂದು ರಾತ್ರಿ 11.30ಕ್ಕೆ ಬೆಂಗಳೂರಿನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತಂದಿದ್ದನು. ನಂತರ ನಾಸೀರುದ್ದೀನ್, ಆಕನಾಸ್, ಅಜ್ಜಲ್, ರಿಯಾಜ್ ಮತ್ತು ವಾಜೀದ್ ಮತ್ತು ಯಾಹಿಯಾ ಜೊತೆಗೂಡಿ ಕಾರಿನಲ್ಲಿ ವಿಮಾನ ನಿಲ್ದಾಣದಿಂದ ಯಾಹ್ಯಾನನ್ನು ಕರೆದುಕೊಂಡು ಕೊಡಗಿಗೆ ಆಗಮಿಸಿ ಗೋಣಿಕೊಪ್ಪದ ಬೆಳ್ಳಿಯಪ್ಪ ರೆಸಿಡೆನ್ಸಿಯಲ್ಲಿ ತಂಗಿದ್ದರು ಎಂದು ತಿಳಿಸಿದರು.

ಕೇರಳದ ಮೆಹರೂಫ್‌ನ ನಿರ್ದೇಶನಕ್ಕಾಗಿ ಈ ತಂಡ ಕಾಯುತ್ತಿದ್ದು, ಒಂದೇ ಸ್ಥಳದಲ್ಲಿ ಇದ್ದರೆ ಯಾರಿಗಾದರೂ ಅನುಮಾನ ಬರುತ್ತದೆ ಎಂದು ತಿಳಿದು ಮತ್ತೆ ಸ್ಥಳ ಬದಲಾವಣೆ ಮಾಡುವ ಉದ್ದೇಶದಿಂದ ವಿರಾಜಪೇಟೆಯಿಂದ ಮಡಿಕೇರಿಗೆ ಕಾರಿನಲ್ಲಿ ಆಗಮಿಸುತ್ತಿದ್ದರು. ಈ ಕುರಿತು ಮಾಹಿತಿ ಪಡೆದ ಜಿಲ್ಲಾ ಪೊಲೀಸರು ವಿರಾಜಪೇಟೆ ರಸ್ತೆಯ ರಮ್ಯ ಸರ್ವೀಸ್ ಸ್ಟೇಷನ್ ಬಳಿ ಸೆ.28ರ ರಾತ್ರಿ 1 ಗಂಟೆಯಲ್ಲಿ ದಾಳಿ ನಡೆಸಿ, ಐವರು ಆರೋಪಿಗಳನ್ನು ಬಂಧಿಸಿದ್ದರು. ನಂತರ ಆರೋಪಿಗಳನ್ನು ವಿಚಾರಣೆಗೆ ಒಳಪಡಿಸಿದಾಗ ಅಂತಾರಾಷ್ಟ್ರೀಯ ಡ್ರಗ್ಸ್ ಸಾಗಾಟ ಜಾಲ ಸಕ್ರಿಯವಾಗಿರುವುದು ಪತ್ತೆಯಾಗಿದೆ.

ಸೆ.29ರಂದು ರಾತ್ರಿ 10.30ರಲ್ಲಿ ಪ್ರಕರಣದ ಪ್ರಮುಖ ಆರೋಪಿ ಕೇರಳದ ಮೆಹರೂಫ್ ಥೈಲ್ಯಾಂಡ್‌ಗೆ ಪರಾರಿಯಾಗಲು ಯತ್ನಿಸುತ್ತಿರುವ ಮಾಹಿತಿ ಅರಿತ ಪೊಲೀಸರು, ಕೇರಳದ ಎರ್ನಾಕುಲಂ ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿ ವೈಭವ್ ಸಕ್ಸೇನಾ ಮತ್ತು ಕೊಚ್ಚಿ ಏರ್‌ಪೋರ್ಟ್ ಇಮಿಗ್ರೇಶನ್ ಅಧಿಕಾರಿ ಕೃಷ್ಣರಾಜ್ ಅವರ ಸಹಕಾರ ಪಡೆದು ಆರೋಪಿಯನ್ನು ಬಂಧಿಸಲಾಯಿತು ಎಂದು ಮಾಹಿತಿ ನೀಡಿದರು. ಕೊಡಗು ಎಎಸ್‌ಪಿ ಸುಂದರ್ ರಾಜ್, ಮಡಿಕೇರಿ ಉಪವಿಭಾಗದ ಡಿವೈಎಸ್‌ಪಿ ಮಹೇಶ್ ಕುಮಾರ್, ಮಡಿಕೇರಿ ನಗರ ವೃತ್ತ ನಿರೀಕ್ಷಕ ಪಿ.ಕೆ.ರಾಜು, ಗ್ರಾಮಾಂತರ ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ, ಅಪರಾಧ ಪತ್ತೆ ದಳದ ವೃತ್ತ ನಿರೀಕ್ಷಕ ಮೇದಪ್ಪ, ಸಿಬ್ಬಂದಿ ಯೋಗೇಶ್, ಪ್ರಭಾಕರ್, ರಾಜೇಶ್, ನಿರಂಜನ್, ನಗರ ಠಾಣಾಧಿಕಾರಿ ಲೋಕೇಶ್, ಡಿಸಿಆರ್‌ಬಿ ಘಟಕದ ರವಿಕುಮಾರ್, ಮುರುಳಿ, ಶರತ್ ರೈ ಅವರು ಕಾರ್ಯಾಚರಣೆ ನಡೆಸಿದ್ದಾರೆ ಎಂದರು.

> ಇದೊಂದು ಅಪರೂಪ ಪ್ರಕರಣವಾಗಿದ್ದು, ಹೈಡ್ರೋ ಗಾಂಜಾ ಎಂಬುವುದು ಸಾಮಾನ್ಯ ಗಾಂಜಾಕ್ಕಿಂತ ಹೆಚ್ಚಿನ ನಶೆಯ ಮಾದಕ ದ್ರವ್ಯವಾಗಿದೆ. ಇದು ದುಬಾರಿ ಬೆಲೆ ಹೊಂದಿದೆ. ಹೈಡ್ರೋ ಗಾಂಜಾವನ್ನು ವಿಭಿನ್ನ ರೀತಿ ಕೃತಕ ಬೆಳಕು ಉಪಯೋಗಿಸಿ ಹಾಗೂ ಹವಾನಿಯಂತ್ರಿತ ಕೊಠಡಿಯಲ್ಲಿ ಬೆಳೆಯಲಾಗುತ್ತದೆ. ಈ ಗಾಂಜಾವನ್ನು ಪ್ರತಿಷ್ಠಿತರ ಪಾರ್ಟಿಗಳಲ್ಲಿ ಮಾತ್ರ ಬಳಸಲಾಗುತ್ತದೆ. ಈ ಪ್ರಕರಣದ ಪ್ರಮುಖ ಆರೋಪಿ ನಿರ್ದೇಶನದ ಮೇರೆಗೆ ಕೊಡಗಿನ ಮೂಲಕ ದುಬೈಗೆ ಸಾಗಿಸಲು ಪ್ರಯತ್ನಿಸಲಾಗುತ್ತಿತ್ತು. ಪ್ರಕರಣ ಭೇದಿಸಲು ಸತತ 72 ಗಂಟೆ ಕಾರ್ಯಾಚರಣೆ ನಡೆಸಲಾಗಿದೆ.
>
> –ಕೆ.ರಾಮರಾಜನ್, ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ.



ಮೈಸೂರು ದಸರಾ ಮಹೋತ್ಸವ–2024 ಕಾರ್ಯಕ್ರಮಗಳು

ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ಸನ್ನಿಧಿ

ಬೆಳಗ್ಗೆ 9.15 ರಿಂದ 9.45ರವರೆಗೆ :



ನಾಡದೇವತೆ ಶ್ರೀ ಚಾಮುಂಡೇಶ್ವರಿ ದೇವಿಯ ಅಗ್ರಪೂಜೆಯೊಂದಿಗೆ ದಸರಾ ಮಹೋತ್ಸವ

ಉದ್ಘಾಟನೆ: ಹಿರಿಯ ಸಾಹಿತಿ, ನಾಡೋಜ ಡಾ.ಹಂಪ ನಾಗರಾಜಯ್ಯ, ಉಪಸ್ಥಿತರು: ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮುಖ್ಯ ಅತಿಥಿಗಳು: ಕೇಂದ್ರ ಹಣಕಾಸು ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್, ಕೇಂದ್ರ ಉಕ್ಕು ಮತ್ತು ಕೈಗಾರಿಕೆ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಇಂಧನ ಸಚಿವ ಪ್ರಹ್ಲಾದ್ ಜೋಷಿ, ಜಲಶಕ್ತಿ ಮತ್ತು ರೈಲ್ವೆ ರಾಜ್ಯ ಸಚಿವ ವಿ.ಸೋಮಣ್ಣ, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ರಾಜ್ಯ ಸಚಿವೆ ಕು. ಶೋಭಾ ಕರಂದ್ಲಾಜೆ, ಅಧ್ಯಕ್ಷತೆ : ಶಾಸಕ ಜಿ.ಟಿ.ದೇವೇಗೌಡ.

ಬೆಳಗ್ಗೆ 11.00 : ಚಲನಚಿತ್ರೋತ್ಸವ, ಉದ್ಘಾಟನೆ : ಮುಖ್ಯಮಂತ್ರಿ ಸಿದ್ದರಾಮಯ್ಯ, ಸ್ಥಳ: ಕರಾಮುವಿವಿ ಘಟಿಕೋತ್ಸವ ಭವನ
ಬೆಳಗ್ಗೆ 11.30 : ಆಹಾರ ಮೇಳ, ಉದ್ಘಾಟನೆ : ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವ ಕೆ.ಹೆಚ್. ಮುನಿಯಪ್ಪ, ಸ್ಥಳ: ಮಹಾರಾಜ ಕಾಲೇಜು ಮೈದಾನ
ಮಧ್ಯಾಹ್ನ 12.30 : ದಸರಾ ಫಲಪುಷ್ಪ ಪ್ರದರ್ಶನ, ಉದ್ಘಾಟನೆ: ಮುಖ್ಯಮಂತ್ರಿ ಸಿದ್ದರಾಮಯ್ಯ, ಸ್ಥಳ: ಕುಪ್ಪಣ್ಣ ಪಾರ್ಕ್
ಮಧ್ಯಾಹ್ನ 4.00 : ಕುಸ್ತಿ ಪಂದ್ಯಾವಳಿ, ಉದ್ಘಾಟನೆ: ಮುಖ್ಯಮಂತ್ರಿ ಸಿದ್ದರಾಮಯ್ಯ, ಸ್ಥಳ: ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣ; ರಾಜ್ಯ ಮಟ್ಟದ ಕಲಾ ಪ್ರದರ್ಶನ, ರಾಷ್ಟ್ರ ಮಟ್ಟದ ಕರಕುಶಲ ಪ್ರದರ್ಶನ, ಉದ್ಘಾಟನೆ: ಕನ್ನಡ–ಸಂಸ್ಕೃತಿ ಸಚಿವ ತಂಗಡಗಿ ಶಿವರಾಜ್ ಸಂಗಪ್ಪ, ಸ್ಥಳ: ಕಾವಾ, ಸಿದ್ದಾರ್ಥನಗರ.
ಸಂಜೆ 4.30 : ರಾಜ್ಯ ದಸರಾ ಸಿಎಂ ಕಪ್ ಕ್ರೀಡಾಕೂಟ, ಉದ್ಘಾಟನೆ: ಮುಖ್ಯಮಂತ್ರಿ ಸಿದ್ದರಾಮಯ್ಯ, ಸ್ಥಳ: ಚಾಮುಂಡಿವಿಹಾರ ಕ್ರೀಡಾಂಗಣ
ಸಂಜೆ 5.00 : ಕನ್ನಡ ಪುಸ್ತಕ ಮೇಳ, ಉದ್ಘಾಟನೆ : ಕನ್ನಡ ಮತ್ತು ಸಂಸ್ಕೃತಿ ಸಚಿವ ತಂಗಡಗಿ ಶಿವರಾಜ್ ಸಂಗಪ್ಪ, ಸ್ಥಳ: ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನ
ಸಂಜೆ 5.30 : ನವರಾತ್ರಿ ಜನಪದ ರಂಗ ಉತ್ಸವ, ಉದ್ಘಾಟನೆ :ಕನ್ನಡ ಮತ್ತು ಸಂಸ್ಕೃತಿ ಸಚಿವ ತಂಗಡಗಿ ಶಿವರಾಜ್ ಸಂಗಪ್ಪ, ಸ್ಥಳ: ಭೂಮಿಗೀತ ಸಭಾಂಗಣ, ಕಲಾಮಂದಿರ
ಸಂಜೆ 6.30 : ದಸರಾ ದೀಪಾಲಂಕಾರ, ಉದ್ಘಾಟನೆ: ಇಂಧನ ಸಚಿವ ಕೆ.ಜೆ.ಜಾರ್ಜ್, ಸ್ಥಳ: ಹಸಿರು ಮಂಟಪ, ನ್ಯೂ ಸಯ್ಯಾಜಿರಾವ್ ರಸ್ತೆ.
ಸಂಜೆ 7.30 : ದಸರಾ ವಸ್ತುಪ್ರದರ್ಶನ, ಉದ್ಘಾಟನೆ: ಮುಖ್ಯಮಂತ್ರಿ ಸಿದ್ದರಾಮಯ್ಯ, ಸ್ಥಳ: ದಸರಾ ವಸ್ತುಪ್ರದರ್ಶನ ಮೈದಾನ.

ಸಾಂಸ್ಕೃತಿಕ ಕಾರ್ಯಕ್ರಮಗಳು

ಅರಮನೆ ಆವರಣ

ಮಧ್ಯಾಹ್ನ 4.00 : ಮಹಾದೇವಪ್ಪ, ಮಲ್ಲೇಶಯ್ಯ ತಂಡದವರಿಂದ ನಂದಿ ಧ್ವಜ, ವೈ.ಎಂ.ಸಿದ್ದಾರ್ಥ, ತಂಡದಿಂದ ವೀರಗಾಸೆ.
ಮಧ್ಯಾಹ್ನ 4.30 : ಗುರುರಾಜ್ ಮತ್ತು ತಂಡದಿಂದ ಮಂಗಳವಾದ್ಯ
ಸಂಜೆ 5.00 : ಎಂ. ಸಿದ್ದರಾಜು ಮತ್ತು ತಂಡದಿಂದ ನಾಲ್ವಡಿ ಗೀತೆಗಳು
ಸಂಜೆ 6.00 : ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ ಮತ್ತು ಶೆಹನಾಯ್ ಕಲಾವಿದ ಪಂಡಿತ್ ಬಸವರಾಜ ಭಜಂತ್ರಿ ಅವರಿಗೆ ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ: ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಸ್ಥಿತರು: ವಿಧಾನಪರಿಷತ್ ಸಭಾಪತಿ ಬಸವರಾಜ ಶಿವಲಿಂಗ ಹೊರಟ್ಟಿ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ವಿಧಾನಸಭಾ ಸಭಾಧ್ಯಕ್ಷ ಯು.ಟಿ.ಖಾದರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್, ಕನ್ನಡ–ಸಂಸ್ಕೃತಿ ಸಚಿವ ತಂಗಡಗಿ ಶಿವರಾಜ್ ಸಂಗಪ್ಪ, ಅಧ್ಯಕ್ಷತೆ: ಶಾಸಕ ಟಿ.ಎಸ್.ಶ್ರೀವತ್ಸ
ಸಂಜೆ 6.00 : ಅಮ್ಮ ರಾಮಚಂದ್ರ ಮತ್ತು ತಂಡ; ಬೆಂಗಳೂರಿನ ಪರಮಪದ ತಂಡದಿಂದ ನಾಡಗೀತೆ ಮತ್ತು ಆಸ್ಥಾನಗೀತೆ
ಸಂಜೆ 7.00 : ಬೆಂಗಳೂರಿನ ನಾಟ್ಯ ಲಕ್ಷಣ ಅವರಿಂದ ನಮಸ್ತೆ ಇಂಡಿಯಾ, ನೃತ್ಯ ರೂಪಕ
ರಾತ್ರಿ 8.00 : ಅನುರಾಧ ಭಟ್–ಸುಚೇತನ್ ರಂಗಸ್ವಾಮಿ ಮತ್ತು ತಂಡದಿಂದ ಭಕ್ತಿ ಭಾವಗಾನ ಸುಧಾ

ಜಗನ್ಮೋಹನ ಅರಮನೆ

ಸಂಜೆ 5.30 : ಸಿ.ಎಲ್. ಜಗದೀಶ್ ಮತ್ತು ತಂಡ, ಮಂಡ್ಯ ಅವರಿಂದ ಸ್ಯಾಕ್ಸೋಫೋನ್ ವಾದನ
ಸಂಜೆ 6.00 : ಮಲೆ ಮಲೆ ಮಲ್ಲೇಶ ಹೂಗಾರ್, ಧಾರವಾಡ ಅವರಿಂದ ತಬಲ ಜುಗಲ್‌ಬಂದಿ
ಸಂಜೆ 7.00 : ಬೆಂಗಳೂರಿನ ಚಂದನ ಮುರಳೀಧರ ಮತ್ತು ತಂಡದಿಂದ ಭಕ್ತಿಗೀತೆಗಳು
ರಾತ್ರಿ 8.00 : ಉಷಾ ಅಚ್ಯುತನ್ ಮತ್ತು ತಂಡದಿಂದ ಭರತನಾಟ್ಯ

ಕಲಾಮಂದಿರ

ಸಂಜೆ 5.00 : ಸರಗೂರು ಸೋಮಶೇಖರ್ ಮತ್ತು ತಂಡದಿಂದ ವೀರಗಾಸೆ
ಸಂಜೆ 5.30 : ಎಂ.ಟಿ.ವಿದ್ಯಾಧರ ಮಾಣಿಕ್ಯ ಮತ್ತು ತಂಡದಿಂದ ಸ್ಯಾಕ್ಸೋಫೋನ್ ವಾದನ
ಸಂಜೆ 6.00 : ಮೈಸೂರಿನ ಸಿ.ನರಸಿಂಹ ಮತ್ತು ತಂಡದಿಂದ ಸ್ಯಾಕ್ಸೋಫೋನ್ ವಾದನ
ಸಂಜೆ 7.00 : ದಾವಣಗೆರೆ ಎಂ.ಎಸ್.ಪ್ರದೀಪ್‌ಕುಮಾರ್ ಮತ್ತು ತಂಡದಿಂದ ಸಿತಾರ್ ವಾದನ
ರಾತ್ರಿ 8.00 : ನಿಹಾರಿಕಾ ಮತ್ತು ತಂಡದಿಂದ ಭರತನಾಟ್ಯ
ರಾತ್ರಿ 9.00 : ಮೈಸೂರಿನ ಪುಟ್ಟಮಹದೇವಪ್ಪ ಮತ್ತು ತಂಡದಿಂದ ಜಾನಪದ ಗೀತೆಗಳು

ಗಾನಭಾರತಿ, ಕುವೆಂಪುನಗರ

ಸಂಜೆ 5.30 : ಮಂಡ್ಯದ ಸಂಪತ್ ಕುಮಾರ್ ಮತ್ತು ತಂಡದಿಂದ ಮಂಗಳವಾದ್ಯ
ಸಂಜೆ 6.00 : ಬಳ್ಳಾರಿ ಎಸ್. ಅಭಿನಯ ಮತ್ತು ತಂಡದಿಂದ ಶಾಸ್ತ್ರೀಯ ನೃತ್ಯ
ಸಂಜೆ 7.00 : ಬೆಂಗಳೂರಿನ ಎಂ. ಕೃಷ್ಣಮೂರ್ತಿ ಮತ್ತು ತಂಡದಿಂದ ತಾಳವಾದ್ಯ ಜುಗಲ್‌ಬಂದಿ
ರಾತ್ರಿ 8.00 : ಮೈಸೂರಿನ ಜಿ.ಎಂ. ಹರ್ಷಿತಾ ಮತ್ತು ತಂಡದಿಂದ ಸುಗಮ ಸಂಗೀತ

ಶ್ರೀ ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ

ಸಂಜೆ 5.00 : ಮೈಸೂರಿನ ಪಿ. ಕವಿತಾ ಮತ್ತು ತಂಡದಿಂದ ಮಹಿಳಾ ಕಂಸಾಳೆ
ಸಂಜೆ 5.30 : ಮೈಸೂರಿನ ವಿ. ಪ್ರಜ್ವಲ್ ಮತ್ತು ತಂಡದಿಂದ ಡೊಳ್ಳು ಕುಣಿತ
ಸಂಜೆ 6.00 : ಬೆಂಗಳೂರಿನ ಗಣಸಂಭ್ರಮ ಟ್ರಸ್ಟ್‌ನ ಡಾ. ಬಿ.ಎಂ. ಪ್ರಭು ಅವರಿಂದ ಸುಗಮ ಸಂಗೀತ
ಸಂಜೆ 7.00 : ಶಿವಮೊಗ್ಗದ ಕೆ. ವೆಂಕಟರಮಣ ಮತ್ತು ತಂಡದಿಂದ ವೀಣಾ ವಾದನ
ರಾತ್ರಿ 8.00 : ಮೈಸೂರಿನ ಭರತಾಂಜಲಿ ನೃತ್ಯ ಮತ್ತು ಯೋಗ ಟ್ರಸ್ಟ್‌ನ ಶೀಲಾ ಶ್ರೀಧರ್ ಅವರಿಂದ ಭರತನಾಟ್ಯ

ಚಿಕ್ಕಗಡಿಯಾರ

ಸಂಜೆ 5.00 : ಗೋವಿಂದ ನಾಯಕ ಮತ್ತು ತಂಡದಿಂದ ಡೊಳ್ಳು ಕುಣಿತ
ಸಂಜೆ 5.30 : ಅನುಷಾ ಮತ್ತು ತಂಡದಿಂದ ಮಹಿಳಾ ನಗಾರಿ
ಸಂಜೆ 6.00 : ಕೊಪ್ಪಳ ತಪ್ಪಣ್ಣ ಅಂಬಾಜಿ ಸುಗಟೇಕಾರ ಅವರಿಂದ ಗೊಂದಳಿಗಾರ ಮೇಳ
ಸಂಜೆ 7.00 : ಧಾರವಾಡದ ವಿದುಷಿ ಯಶೋಧರೆ ಮಲ್ಲಿಗವಾಡ ಅವರಿಂದ ಜಾನಪದ ನೃತ್ಯ ರೂಪಕ
ರಾತ್ರಿ 8.00 : ಬಾಗಲಕೋಟೆ ಸಿದ್ದಪ್ಪ ಭೀಮಪ್ಪ ಹೂಗಾರ ಅವರಿಂದ ಹಂತಿ ಪದ

ಪುರಭವನ

ಸಂಜೆ 6.00 : ಶ್ರೀ ಚಾಮುಂಡೇಶ್ವರಿ ಬಸಪ್ಪ ಸೇವಾ ಟ್ರಸ್ಟ್, ರಾಮನಗರ ಅವರಿಂದ ಪೌರಾಣಿಕ ನಾಟಕ 'ಕುರುಕ್ಷೇತ್ರ'
ರಾತ್ರಿ 8.00 : ಭುವನೇಶ್ರಿ ಕಲಾಸಂಘ, ಮೈಸೂರು ಅವರಿಂದ ಪೌರಾಣಿಕ ನಾಟಕ 'ರಾಮಾಂಜನೇಯ ಯುದ್ಧ'

ಕಿರು ರಂಗಮಂದಿರ, ಕಲಾಮಂದಿರ ಆವರಣ

ಸಂಜೆ 5.00 : ಎಂ. ಮಂಜುನಾಥ್ ಮತ್ತು ತಂಡ, ಮೈಸೂರು ಅವರಿಂದ ಭಕ್ತಿಗೀತೆಗಳು
ಸಂಜೆ 7.00 : ನಿರ್ದಿಗಂತ (ಡಾ. ಶ್ರೀಪಾದ ಭಟ್) ತಂಡದಿಂದ ನಾಟಕ 'ಮಂಟೇಸ್ವಾಮಿ ಕಾವ್ಯ ಪ್ರಯೋಗ'

ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ

ಸಂಜೆ 5.00 : ಶಿವರುದ್ರಸ್ವಾಮಿ ಮತ್ತು ತಂಡ, ಚಾಮರಾಜನಗರ ಅವರಿಂದ ವೀರಗಾಸೆ
ಸಂಜೆ 5.30 : ಶ್ರೀ ಚಾಮುಂಡೇಶ್ವರಿ ಜನಪದ ಕಲಾತಂಡ (ದಿವ್ಯ ಮತ್ತು ತಂಡ, ಮೈಸೂರು) ಅವರಿಂದ ಡೊಳ್ಳು ಕುಣಿತ
ಸಂಜೆ 6.00 : ಸಂತೋಷ್ ಗಡ್ಡನಕೆರೆ, ಬಾಗಲಕೋಟೆ ಅವರಿಂದ ದಾಸಮಂಜರಿ
ಸಂಜೆ 7.30 : ಶ್ರೀ ಕಲಾಪ್ರಕಾಶ ನಾಟ್ಯ ಸಂಘ, ಹುಬ್ಬಳ್ಳಿ (ಕೆ.ಜಯಲಕ್ಷ್ಮಿ) ಅವರಿಂದ ನಾಟಕ 'ನನ್ನ ಗಂಡ ಬಲು ಭಂಡ'

ನಟನ ರಂಗಮಂದಿರ, ರಾಮಕೃಷ್ಣನಗರ

ಸಂಜೆ 5.00 : ಮಾತೃಭೂಮಿ ಕಲಾತಂಡ, ಪಿರಿಯಾಪಟ್ಟಣ ಅವರಿಂದ ಕಂಸಾಳೆ
ಸಂಜೆ 5.30 : ನಾಗನಾಯಕ ಮತ್ತು ತಂಡದಿಂದ ಡೊಳ್ಳು ಕುಣಿತ
ಸಂಜೆ 6.30 : ಪಯಣ (ಶ್ರೀಜಿತ್ ಸುಂದರಂ) ಅವರಿಂದ ನಾಟಕ 'ತಲ್ಲಿ-ಟ್ರೂತ್ ಡ್ರೀಮ್ ವಯಾ ಬೆಂಗಳೂರು

ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನ, ನಂಜನಗೂಡು

ಸಂಜೆ 5.00 : ಜಿ.ಎಸ್. ಮೋಹನ್‌ಕುಮಾರ್ ಮತ್ತು ತಂಡದಿಂದ ಜಾನಪದ ನೃತ್ಯ
ಸಂಜೆ 5.30 : ದೇವೀರಮ್ಮ ಮತ್ತು ತಂಡ, ಹಾಸನ ಅವರಿಂದ ಕಂಸಾಳೆ ನೃತ್ಯ
ಸಂಜೆ 6.00 : ಧರಣಿ ಮತ್ತು ತಂಡ, ಕೊಡಗು ಅವರಿಂದ ಉಮ್ಮತ್ತಾಟ್
ಸಂಜೆ 7.00 : ಚಿಕ್ಕರ ಲೋಕೇಶ್ ಮತ್ತು ತಂಡ, ರಾಮನಗರ ಅವರಿಂದ ಜಾನಪದ ಗೀತೆಗಳು
ರಾತ್ರಿ 8.00 : ರಾಜುಬುದ್ದಿ ಮತ್ತು ತಂಡ, ನಂಜನಗೂಡು ಅವರಿಂದ ಸುಗಮ ಸಂಗೀತ

ವನರಂಗ, ರಂಗಾಯಣ

ನವರಾತ್ರಿ ಜನಪದ ರಂಗ ಉತ್ಸವ

ಸಂಜೆ 5.30 : ಪಪ್ಪೆಟ್ ಶೋ, ಉದ್ಘಾಟನೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಡಾ. ಎಂ.ಎನ್. ಅಜಯ್ ನಾಗಭೂಷಣ್, ಮುಖ್ಯ ಅತಿಥಿಗಳು : ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ ರೆಡ್ಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರಾದ ಡಾ.ಧರಣಿದೇವಿ ಮಾಲಗತ್ತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ.
ಸಂಜೆ 6.30 : ಮೈಸೂರು ಗುರುರಾಜ್ ಮತ್ತು ತಂಡದಿಂದ ಮಂಟೇಸ್ವಾಮಿ ಕಾವ್ಯ

ಚಾಮುಂಡಿಬೆಟ್ಟದಲ್ಲಿ ನವದುರ್ಗೆಯರು ಪ್ರತ್ಯಕ್ಷ!



ಚಾಮುಂಡಿಬೆಟ್ಟದಲ್ಲಿ ಬುಧವಾರ ನವದುರ್ಗೆಯರ ವೇಷಧಾರಿಗಳಾಗಿ ಬಂದ ಮಹಿಳೆಯರ ತಂಡ ಗಮನ ಸೆಳೆಯಿತು.

ಮೈಸೂರು,ಅ.2(ಎಂಟಿವೈ)– ದಸರಾ ಮಹೋತ್ಸವ ಹಿನ್ನೆಲೆಯಲ್ಲಿ ಮಹಿಳೆಯರ ತಂಡವೊಂದು ಚಾಮುಂಡಿಬೆಟ್ಟದಲ್ಲಿ ನವದುರ್ಗೆಯರ ವೇಷದಲ್ಲಿ ಪ್ರತ್ಯಕ್ಷಗೊಂಡು ಗಮನ ಸೆಳೆಯಿತು.

ನವರಾತ್ರಿ ಆರಂಭದ ಮುನ್ನ ದಿನವಾದ ಬುಧವಾರ ಚಾಮುಂಡಿಬೆಟ್ಟಕ್ಕೆ ಆಗಮಿಸಿದ ಮೈಸೂರಿನ ಮಹಿಳೆಯರ ತಂಡ ನವದುರ್ಗೆಯರ ವೇಷ-ಭೂಷಣದಲ್ಲಿ ದೇವಾಲಯದ ಮುಂಭಾಗ ಕಾಣಿಸಿಕೊಂಡರು. ದಸರಾ ಮಹೋತ್ಸವ ವೇಳೆ ದುಷ್ಟರನ್ನು ಸಂಹರಿಸಿ, ಶಿಷ್ಟರನ್ನು ಕಾಪಾಡುವ ಸಂದೇಶ ನೀಡಿದರು.

ಮೈಸೂರಿನ ವಿವಿಧ ಬಡಾವಣೆಗಳ ನಿವಾಸಿಗಳಾದ ಮಾಲಿನಿ ಪಾಲಾಕ್ಷ, ಅಂಬಿಕಾ, ಪುಷ್ಪ ಅಪ್ಪಯ್ಯ, ಲಕ್ಷ್ಮಿ, ರಾಧಾ ಪಾಲಂದಿರಾ, ಸರೋಜಿನಿ, ಪವಿತ್ರ, ಜ್ಯೋತಿ, ಶೈಲಜ ಒಳಗೊಂಡ ಮಹಿಳಾಮಣಿಗಳ ಈ ತಂಡ ಮಾ ಶೈಲಪುತ್ರಿ, ಮಾ ಬ್ರಹ್ಮಚಾರಿಣಿ, ಮಾ ಚಂದ್ರಘಂಟ, ಮಾ ಕೂಷ್ಮಾಂಡ, ಮಾ ಸ್ಕಂದಮಾತ, ಮಾ ಕಾತ್ಯಾಯಿನಿ, ಮಾ ಕಾಳರಾತ್ರಿ, ಮಾ ಮಹಾಗೌರಿ, ಮಾ ಸಿದ್ಧಿದಾತ್ರಿ, ನವದುರ್ಗೆಯರ ವೇಷ ಧರಿಸಿ ದೇವಾಲಯದ ಪ್ರತ್ಯಕ್ಷರಾಗಿದ್ದರು. ಅದರಲ್ಲೂ ದೇವಾಲಯದ ಮುಂದೆ ತ್ರಿಶೂಲ, ಕತ್ತಿ, ಗುರಾಣಿ ಸೇರಿದಂತೆ ವಿವಿಧ ಅಸ್ತ್ರ ವಾದರಿಯನ್ನು ಹಿಡಿದುಕೊಂಡು ನಿಂತಿದ್ದ ನವದುರ್ಗೆಯರ ವೇಷಧಾರಿಗಳನ್ನು ಕಂಡು ಬೆಟ್ಟಕ್ಕೆ ಬಂದಿದ್ದ ಭಕ್ತರು, ಪ್ರವಾಸಿಗರು ಹೌಹಾರಿದರು. ಅಲ್ಲದೆ, ನವದುರ್ಗೆಯರ ವೇಷಧಾರಿಗಳೊಂದಿಗೆ ಫೋಟೋ ತೆಗೆಸಿಕೊಂಡು ಸಂಭ್ರಮಿಸಿದರು.

ದಸರಾ ಆಹಾರ ಮೇಳದ ಅಧ್ವಾನ: ವ್ಯಾಪಾರಿಗಳ ನಿರಾಸಕ್ತಿ

ಮೈಸೂರು, ಅ.2(ಎಂಕೆ)– ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಗಳಲ್ಲೊಂದಾದ ದಸರಾ ಆಹಾರ ಮೇಳ ಅಧ್ವಾನ ಮೇಳವಾಗಿದೆ..!

ಇದೇ ಮೊದಲ ಬಾರಿಗೆ ಸುವಿಶಾಲ ಮಹಾರಾಜ ಕಾಲೇಜು ಮೈದಾನದಲ್ಲಿ ನಡೆಯುತ್ತಿರುವ ಆಹಾರ ಮೇಳವನ್ನು ವ್ಯವಸ್ಥಿತವಾಗಿ ರೂಪಿಸದೆ ಅಸ್ತವ್ಯಸ್ತ ಮಾಡಿರುವಂತಿದೆ. ಆಹಾರ ಮಳಿಗೆಗಳ ನ್ನಿಡಲು ಸುಮಾರು 200 ಕ್ಕೂ ಹೆಚ್ಚು ಮಂದಿ ಅರ್ಜಿ ಸಲ್ಲಿಸಿದ್ದು, ಅವರಲ್ಲಿನ ಅರ್ಧದಷ್ಟು ಮಳಿಗೆದಾರರು ತಮ್ಮ ಮಳಿಗೆ ಗಳನ್ನಿಡಲು ಹಿಂದೇಟು ಹಾಕಿದ್ದಾರೆ.



ಆಹಾರ ಮೇಳದಲ್ಲಿ ನಿರ್ಮಿಸಿದ್ದ ಮಳಿಗೆಗಳನ್ನು ತೆರವುಗೊಳಿಸುತ್ತಿರುವ ಹಾಗೂ ಇನ್ನೂ ಪೂರ್ಣ ಪ್ರಮಾಣ ಸಿದ್ಧಗೊಳ್ಳದಿರುವುದು.

8 ದಿನಗಳ ಆಹಾರ ಮೇಳಕ್ಕೆ ಮಾಂಸಾಹಾರ ಮಳಿಗೆಗೆ ಜಿಎಸ್‌ಟಿ ಸೇರಿ 88,500 ರೂ., ಸಸ್ಯಾಹಾರ ಮಳಿಗೆಗೆ 59 ಸಾವಿರ ರೂಗಳನ್ನು ನಿಗದಿ ಮಾಡಿದ್ದು, ಇದುವರೆಗೆ ಸುಮಾರು 50 ಮಂದಿಯಷ್ಟೇ ಡಿಡಿ ಮುಖಾಂತರ ಹಣ ಪಾವತಿ ಮಾಡಿದ್ದಾರೆ. ಆದರೆ ನೂರಕ್ಕೂ ಹೆಚ್ಚು ಮಳಿಗೆ ಗಳನ್ನು ತೆರೆಯಲಾಗಿದ್ದು, ಆಹಾರ ಮೇಳದ ಮೊದಲ ದಿನ ಬಹುತೇಕ ಮಳಿಗೆಗಳು ಖಾಲಿ ಇರುವ ಸಾಧ್ಯತೆ ಹೆಚ್ಚಿದೆ.

ಅವ್ಯವಸ್ಥೆ: ಮೈದಾನದ ಸುತ್ತಲೂ ಮಳಿಗೆಗಳು ಮಧ್ಯದಲ್ಲಿ ಆಹಾರ ಸೇವಿಸಲು ಸ್ಥಳಾವಕಾಶವಾಗುವಂತೆ ಚೌಕಾಕಾರದಲ್ಲಿ ವ್ಯವಸ್ಥಿತವಾಗಿ ಮೇಳ ಆಯೋಜಿಸದೆ ಮೈದಾನದ ಮಧ್ಯದಲ್ಲಿಯೂ ಶಾಮಿಯಾನ ಅಳವಡಿಸಿ ಮಳಿಗೆಗಳನ್ನು ನಿರ್ಮಿಸಲಾಗಿತ್ತು. ಆದರೆ, ಕೂಡಲೇ ಎಚ್ಚೆತ್ತು ಮಧ್ಯದಲ್ಲಿದ್ದ ಮಳಿಗೆಗಳನ್ನು ತೆರವುಗೊಳಿಸಿ, ಮಳೆ ಬಂದಾಗ ಆಹಾರ ಸೇವಿಸಲು ಅನುಕೂಲವಾಗಲೆಂದು ಶಾಮಿಯಾನವನ್ನು ಮಾತ್ರ ಹಾಗೆಯೇ ಬಿಡಲಾಗಿದೆ.

ಎಲ್ಲವೂ ಅಪೂರ್ಣ: ನಾಳೆ(ಅ.3) ಬೆಳಗ್ಗೆ 11.30ಕ್ಕೆ ದಸರಾ ಆಹಾರ ಮೇಳ ಉದ್ಘಾಟನೆಯಾಗಲಿದ್ದು, ಮಳಿಗೆಗಳ ನಿರ್ಮಾಣ ಇನ್ನೂ ಕುಂಟುತ್ತಾ ಸಾಗುತ್ತಲೇ ಇದೆ. ಅಲ್ಲದೆ ಮಳಿಗೆಗಳ ಅಳತೆಯೂ ಚಿಕ್ಕದಾಗಿದ್ದು, ಮಳಿಗೆದಾರರಿಗೆ ಮತ್ತು ಗ್ರಾಹಕರಿಗೆ ತೊಂದರೆಯಾಗುವ ಸಾಧ್ಯತೆ ಇದೆ. ನೆಲಕ್ಕೆ ಹಾಕುವ ತೆಳುವಾದ ಹಸಿರು ಮ್ಯಾಟ್ ಅನ್ನು ಸರಿಯಾಗಿ ಹಾಕಿಲ್ಲ. ಆರಂಭಕ್ಕೂ ಮುನ್ನವೇ ಅಲ್ಲಲ್ಲಿ ಕಿತ್ತುಕೊಂಡು ಬಂದಿದೆ.

ಪ್ರತ್ಯೇಕ ಮಳಿಗೆ ಇಲ್ಲ: ಸ್ಕೌಟ್ ಅಂಡ್ ಗೈಡ್ಸ್ ಮೈದಾನದಲ್ಲಿ ಪ್ರತ್ಯೇಕವಾಗಿ ಗುಡಿಸಲು ಹಾಕಿಕೊಂಡು ಬಂಬೂ ಬಿರಿಯಾನಿ, ಜಿದರಕ್ಕಿ ಪಾಯಸ ಮಾಡುವ ಬುಡಕಟ್ಟು ಸಮುದಾಯದವರಿಗೆ ಈ ಬಾರಿ ಪ್ರತ್ಯೇಕವಾಗಿ ಸ್ಥಳಾವಕಾಶ ನೀಡಿಲ್ಲ. ಇತರೆ ಮಳಿಗೆಗಳಿಗಿಂತ ಸ್ವಲ್ಪ ಹೆಚ್ಚಿನ ಜಾಗ ನೀಡಿದ್ದರೂ ಅನುಕೂಲವಾಗುತ್ತಿತ್ತು. ಬಂಬೂ ಬಿರಿಯಾನಿ ತಯಾರಿಸುವ ವೇಳೆ ಒಲೆಯಿಂದ ಬರುವ ಹೊಗೆಯಿಂದ ಇತರೆ ಮಳಿಗೆದಾರರಿಗೆ ತೊಂದರೆಯಾಗಬಹುದು.

108 ಮಳಿಗೆ: ದಸರಾ ಆಹಾರ ಮೇಳದಲ್ಲಿ ಈ ಬಾರಿ 108 ಮಳಿಗೆಗಳು ಇರಲಿದ್ದು, ನಾಳೆ ಸಂಜೆಯೊಳಗೆ ಎಲ್ಲಾ ಮಳಿಗೆದಾರರು ಹಣ ಪಾವತಿ ಮಾಡುವ ಸಾಧ್ಯತೆ ಇದೆ. ಗಾಂಧಿ ಜಯಂತಿ ಹಿನ್ನೆಲೆ ಸರ್ಕಾರಿ ರಜೆ ಇದ್ದಿದ್ದರಿಂದ ತಡವಾಗಿದೆ. ನಾಳೆ ಸಂಜೆಯೊಳಗೆ ಎಲ್ಲಾ ಮಳಿಗೆಗಳು ಭರ್ತಿಯಾಗಲಿವೆ ಎಂದು ದಸರಾ ಆಹಾರ ಮೇಳ ಉಪ ಸಮಿತಿಯ ಪದಾಧಿಕಾರಿಯೊಬ್ಬರು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಪತ್ರಿಕಾ ಛಾಯಾಗ್ರಾಹಕರ ಛಾಯಾಚಿತ್ರ ಪ್ರದರ್ಶನ

ಮೈಸೂರು, ಅ.2(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದ ಅಂಗವಾಗಿ ಮೈಸೂರು ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ ಆಯೋಜಿಸಿರುವ ಛಾಯಾಚಿತ್ರ ಪ್ರದರ್ಶನಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಚಾಲನೆ ನೀಡಿದರು.

ಮೈಸೂರಿನ ಕಲಾಮಂದಿರದ ಸುಚಿತ್ರ ಕಲಾ ಗ್ಯಾಲರಿಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಮೈಸೂರು ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ ವತಿಯಿಂದ ಏರ್ಪಡಿಸಿರುವ ಛಾಯಾಚಿತ್ರ ಪ್ರದರ್ಶನ ಅ.12ರವರೆಗೆ ನಡೆಯಲಿದ್ದು, 150ಕ್ಕೂ ಹೆಚ್ಚು ಕಣ್ಮನ ಸೆಳೆಯುವ ಛಾಯಾಚಿತ್ರಗಳನ್ನು ಪ್ರದರ್ಶಿಸಲಾಗಿದೆ.

ಮೈಸೂರಿನ ವಿವಿಧ ಪತ್ರಿಕೆಗಳಲ್ಲಿ ಫೋಟೋ ಜರ್ನಲಿಸ್ಟ್ ಆಗಿ ಸೇವೆ ಸಲ್ಲಿಸುತ್ತಿರುವ ಛಾಯಾಗ್ರಾಹಕರು ತೆಗೆದಿರುವ ಅತ್ಯುತ್ತಮ ಸುದ್ದಿ ಛಾಯಾಚಿತ್ರ, ದಸರಾ ಗಜಪಡೆ, ಅಂಬಾರಿ ಆನೆಗಳಾದ ಅರ್ಜುನ, ಬಲರಾಮ, ಅಭಿಮನ್ಯು, ವಯನಾಡಿನ ಭೂಕುಸಿತದ ದೃಶ್ಯ, ವನ್ಯಜೀವಿ ಛಾಯಾ ಚಿತ್ರ ದಸರಾ ಮಹೋತ್ಸವ, ಜಂಬೂಸವಾರಿ, ಖಾಸಗಿ ದರ್ಬಾರ್, ಚಾಮುಂಡೇಶ್ವರಿ ರಥೋತ್ಸವ, ಮೈಸೂರಲ್ಲಿ ನಡೆದ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡ ಹಿರಿಯ ರಾಜಕಾರಣಿಗಳು ಚಿತ್ರಗಳು, ಮಾನವೀಯತೆ ಛಾಯಾಚಿತ್ರ ಸೇರಿದಂತೆ ಅಪರೂಪದ ಛಾಯಾಚಿತ್ರಗಳನ್ನು ಪ್ರದರ್ಶನಕ್ಕಿಡಲಾಗಿದೆ.

ಛಾಯಾಚಿತ್ರ ವೀಕ್ಷಿಸಿದ ಸಚಿವ ಡಾ.ಮಹದೇವಪ್ಪ, ಶಾಸಕರಾದ ಜಿ.ಟಿ. ದೇವೇಗೌಡ, ಕೆ.ಹರೀಶ್‌ಗೌಡ, ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಗ್ಯಾರಂಟಿ ಯೋಜನೆಯ ಉಪಾಧ್ಯಕ್ಷ ಡಾ.ಪುಷ್ಪ ಅಮರನಾಥ್ ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮೈಸೂರು ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ ಅಧ್ಯಕ್ಷ ಪ್ರಗತಿ ಗೋಪಾಲಕೃಷ್ಣ ವಹಿಸಿದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ ಉಪಾಧ್ಯಕ್ಷ ಎಸ್.ಆರ್.ಮಧುಸೂದನ್, ಪ್ರಧಾನ ಕಾರ್ಯದರ್ಶಿ ಲಕ್ಷ್ಮೀನಾರಾಯಣ ಯಾದವ್, ಖಜಾಂಚಿ ಎ.ನಂದನ್, ಕಾರ್ಯಕಾರಿ ಸಮಿತಿ ಸದಸ್ಯರಾದ ಎಂ.ಎ.ಶ್ರೀರಾಮ್, ಕೆ.ಹೆಚ್.ಚಂದ್ರು, ಅನುರಾಗ್ ಬಸವರಾಜ್, ಹಂಪಾನಾಗರಾಜ್, ಉದಯಶಂಕರ್ ಎಸ್., ಕ್ರಿಷ್ಣೋಜಿರಾವ್, ನಾಗೇಶ್ ಪಾಣತ್ತಲೆ, ರವಿ ಗುಮಟ, ನಿಶಾಂತ್ ಪಾಲ್, ಅನೂಪ್ ರಾಘ್ ಟಿ. ಇನ್ನಿತರರಿದ್ದರು.



ಮೈಸೂರು ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ ಸುಚಿತ್ರ ಕಲಾ ಗ್ಯಾಲರಿಯಲ್ಲಿ ಆಯೋಜಿಸಿರುವ ಛಾಯಾಚಿತ್ರ ಪ್ರದರ್ಶನದಲ್ಲಿ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕರಾದ ಜಿ.ಟಿ.ದೇವೇಗೌಡ, ಕೆ.ಹರೀಶ್‌ಗೌಡ, ವಿಧಾನಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ, ಗ್ಯಾರಂಟಿ ಯೋಜನೆ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್ ಅವರಿಗೆ 'ಮೈಸೂರು ಮಿತ್ರ' ಛಾಯಾಗ್ರಾಹಕ ಎಂ.ಎನ್.ಲಕ್ಷ್ಮೀನಾರಾಯಣ ಯಾದವ್ ವಿವರಿಸುತ್ತಿರುವುದು.

ಸಚಿವ ಕೆ.ಹೆಚ್.ಮುನಿಯಪ್ಪ ಮೈಸೂರು ಜಿಲ್ಲಾ ಪ್ರವಾಸ

ಮೈಸೂರು: ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವ ಕೆ.ಹೆಚ್.ಮುನಿಯಪ್ಪ ಅ.3ರಂದು ಮೈಸೂರು ಜಿಲ್ಲಾ ಪ್ರವಾಸವನ್ನು ಕೈಗೊಂಡಿದ್ದು, ಅಂದು ಬೆಳಗ್ಗೆ 8.30 ಗಂಟೆಗೆ ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಿ ಸನ್ನಿಧಿಗೆ ಆಗಮಿಸುವರು.



ಬೆಳಗ್ಗೆ 9.15 ಗಂಟೆಗೆ ಚಾಮುಂಡಿ ಬೆಟ್ಟದ ಶ್ರೀ ಚಾಮುಂಡೇಶ್ವರಿ ಸನ್ನಿಧಿಯಲ್ಲಿ ಆಯೋಜಿಸಲಾಗಿರುವ ನಾಡದೇವತೆ ಶ್ರೀ ಚಾಮುಂಡೇಶ್ವರಿ ದೇವಿಯ ಅಗ್ರಪೂಜೆಯೊಂದಿಗೆ 2024 ರ ದಸರಾ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ಬೆಳಗ್ಗೆ 11.30 ಗಂಟೆಗೆ ಮಹಾರಾಜ ಕಾಲೇಜು ಮೈದಾನದಲ್ಲಿ ಆಯೋಜಿಸಿರುವ ಆಹಾರ ಮೇಳ ಕಾರ್ಯಕ್ರಮದ ಉದ್ಘಾಟನೆ ಮಾಡಲಿದ್ದು, ಸಂಜೆ 5 ಗಂಟೆಗೆ ಮೈಸೂರಿನಿಂದ ತೆರಳಲಿದ್ದಾರೆ.

ಪ್ರವಾಸಿಗರಿಗೆ ಪಾರಂಪರಿಕ ಸ್ವಾಗತ

ಮೈಸೂರು, ಅ.2(ಜಿಎ)–ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಅಂಬಾ ವಿಲಾಸ ಅರಮನೆಗೆ ಬರುವ ಪ್ರವಾಸಿಗರಿಗೆ ಮೈಸೂರು ಸಂಸ್ಕೃತಿ, ಪರಂಪರೆ ಸಾರುವ ಹಿನ್ನೆಲೆಯಲ್ಲಿ ಜನನಿ ಸೇವಾ ಟ್ರಸ್ಟ್ ವತಿಯಿಂದ ದೇಶ–ವಿದೇಶದ ಪ್ರವಾಸಿಗರನ್ನು ಸಾಂಪ್ರದಾಯಿಕವಾಗಿ ಸ್ವಾಗತಿಸಲಾಯಿತು.

ಅರಮನೆಗೆ ದೇಶ–ವಿದೇಶಗಳಿಂದ ಆಗಮಿಸಿದ ಪ್ರವಾಸಿಗರಿಗೆ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌಧರಿ ಅವರು ಮೈಸೂರು ಪೇಟ ತೊಡಿಸಿ, ನಂಜನಗೂಡು ರಸಬಾಳೆ ನೀಡಿ, ಸುಗಂಧ ದ್ರವ್ಯ ಸಿಂಪಡಿಸಿ, ಮಲ್ಲಿಗೆ ಹೂ ಹಾಗೂ ಹಸಿರು ಬಳೆ ತೊಡಿಸಿ, ಆರತಿ ಎತ್ತಿ ಮೈಸೂರು ಪಾಕ್ ತಿನಿಸಿ ಸ್ವಾಗತಿಸಿದರು.



ಮೈಸೂರಿನ ಅಂಬಾ ವಿಲಾಸ ಅರಮನೆ ಮುಂಭಾಗ ದೇಶ–ವಿದೇಶದ ಪ್ರವಾಸಿಗರನ್ನು ಸಾಂಪ್ರದಾಯಿಕವಾಗಿ ಸ್ವಾಗತಿಸಲಾಯಿತು.

ನಂತರ ಮಾತನಾಡಿದ ಅವರು, ಮೈಸೂರು ದಸರಾ ಇಡೀ ವಿಶ್ವವಿಖ್ಯಾತಿ ಪಡೆದುಕೊಂಡಿದ್ದು, ದಸರಾ ನೋಡಲು ದೇಶ–ವಿದೇಶಗಳಿಂದ ಬಂದಿರುವ ಪ್ರವಾಸಿಗರಿಗೆ ಮೈಸೂರು ಸಂಸ್ಕೃತಿಯನ್ನು ಬಿಂಬಿಸುವ ಪದಾರ್ಥಗಳನ್ನು ನೀಡುವ ಮೂಲಕ ಸ್ವಾಗತಿಸಿದ್ದು, ಸಂತಸದ ವಿಚಾರವಾಗಿದೆ. ಪ್ರವಾಸಿಗರೂ ಸಹ ಮೈಸೂರಿನ ದಸರಾ ಬಗ್ಗೆ ತಿಳಿದುಕೊಳ್ಳಲು ಸಾಕಷ್ಟು ಉತ್ಸುಕರಾಗಿದ್ದಾರೆ. ತಾಯಿ ಚಾಮುಂಡೇಶ್ವರಿ ನಾಡು ಸುಭಿಕ್ಷೆಯಿಂದ ಇರುವಂತೆ ನಾಡಹಬ್ಬ ದಸರಾ ಮಹೋತ್ಸವ ಯಾವುದೇ ವಿಘ್ನವಿಲ್ಲದೆ ನೆರವೇರುವಂತೆ, ಆಶೀರ್ವದಿಸುವಂತೆ ಬೇಡಿಕೊಳ್ಳುತ್ತೇನೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಇತಿಹಾಸ ತಜ್ಞ ಪ್ರೊ.ರಂಗರಾಜು, ಸುಗಮ ಸಂಗೀತ ಗಾಯಕಿ ಹೆಚ್.ಆರ್.ಲೀಲಾವತಿ, ಟ್ರಸ್ಟ್ ಅಧ್ಯಕ್ಷ ಎಂ.ಕೆ.ಅಶೋಕ, ಆರ್.ಗೌತಮ್ ಸುಲೇಚ, ನಂದಿನಿ, ಆರ್.ಸೌಮ್ಯ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಹಂಪನಾಗೆ ಸುತ್ತೂರು ಶ್ರೀಗಳಿಂದ ಅಭಿನಂದನೆ...



ನಾಡಹಬ್ಬ ದಸರಾ ಮಹೋತ್ಸವದ ಉದ್ಘಾಟಕರಾದ ಪ್ರೊ.ಹಂಪ ನಾಗರಾಜಯ್ಯ ಅವರನ್ನು ಸುತ್ತೂರು ಶ್ರೀ ಮಠದಲ್ಲಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿನಂದಿಸಿದರು. ಕನ್ನಡ ಹೋರಾಟಗಾರ ಮೂಗೂರು ನಂಜುಂಡಸ್ವಾಮಿ, ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ, ಹಿಂದುಳಿದ ವರ್ಗಗಳ ಜಾಗೃತಿ ಸಮಿತಿ ಅಧ್ಯಕ್ಷ ಕೆ.ಎಸ್.ಶಿವರಾಂ, ಕಸಾಪ ಮಾಜಿ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ, ಚುಟುಕು ಸಾಹಿತ್ಯ ಪರಿಷತ್ತು ಸಂಸ್ಥಾಪಕ ಡಾ.ಎಂ.ಜಿ.ಆರ್.ಅರಸ್ ಚಿತ್ರದಲ್ಲಿದ್ದಾರೆ.

ಇಂದಿನಿಂದ ಶಾಲೆಗಳಿಗೆ ದಸರಾ ರಜೆ

ಬೆಂಗಳೂರು, ಅ.2– ನಾಳೆಯಿಂದ ರಾಜ್ಯದ ಎಲ್ಲಾ ಶಾಲಾಗಳಿಗೆ ದಸರಾ ರಜೆ ಘೋಷಣೆ ಮಾಡಲಾಗಿದೆ. ಈ ಕುರಿತಂತೆ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ನಾಳೆಯಿಂದ ನವರಾತ್ರಿ ಶುರುವಾಗುತ್ತಿದೆ. ಮೈಸೂರಿನಲ್ಲಿ ದಸರಾ ಹಬ್ಬದ ಸಂಭ್ರಮ ಮನೆ ಮಾಡಿದೆ. ಸದ್ಯ ಸಾರ್ವಜನಿಕ ಶಿಕ್ಷಣ ಇಲಾಖೆ ರಾಜ್ಯಾದ್ಯಂತ ಶಾಲಾ ಮಕ್ಕಳಿಗೆ ಅಕ್ಟೋಬರ್ 3 ರಿಂದ 20ರ ತನಕ ದಸರಾ ರಜೆ ಘೋಷಿಸಿದ್ದು ಒಟ್ಟು 17 ದಿನ ಶಾಲಾ ವಿದ್ಯಾರ್ಥಿಗಳಿಗೆ ದಸರಾ ರಜೆ ಇರಲಿದೆ.

ಅಕ್ಟೋಬರ್ 21ರಿಂದ 2ನೇ ಅವಧಿ ಪ್ರಾರಂಭ ಆಗಲಿದೆ. 2025ರ ಏಪ್ರಿಲ್ 10 ತನಕ ಶಾಲೆಗಳು ನಡೆಯಲಿದ್ದು, ಸಾರ್ವಜನಿಕ ಶಿಕ್ಷಣ ಇಲಾಖೆ ಈ ಕುರಿತಂತೆ ಆದೇಶ ಹೊರಡಿಸಿದೆ. 2024–2025ರ ಶೈಕ್ಷಣಿಕ ವರ್ಷದ ಶಾಲಾ ಅವಧಿಯ ಮಾರ್ಗದರ್ಶಿಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆ, ಶಾಲೆಗಳು ಆರಂಭಕ್ಕೂ ಮುನ್ನ ಪ್ರಕಟಣೆ ಹೊರಡಿಸಿತ್ತು. ಅದರ ನಿಯಮಾನುಸಾರದಂತೆ ರಜೆಗಳು ಘೋಷಣೆಯಾಗಿವೆ. ಕರ್ನಾಟಕದಲ್ಲಿ 2024–25ರ ಶೈಕ್ಷಣಿಕ ವರ್ಷವು ಮೇ 29ರಿಂದ ಪ್ರಾರಂಭವಾಗಿದ್ದು, ಮೊದಲ ಅವಧಿಯು ಅಕ್ಟೋಬರ್ 2ರ ತನಕ ಇತ್ತು. ಸೆಪ್ಟೆಂಬರ್ 23ರಿಂದ ಮಧ್ಯಂತರ ಪರೀಕ್ಷೆಗಳು ಶುರುವಾಗಿ ಸೆಪ್ಟೆಂಬರ್ 30ರ ತನಕ ನಡೆದಿವೆ. ಆ ಬಳಿಕ ಸರ್ಕಾರಿ ಮತ್ತು ಖಾಸಗಿ ಶಾಲಾ ಮಕ್ಕಳಿಗೆ ದಸರಾ ರಜೆ ಪ್ರಕ್ರಿಯೆ ಶುರುವಾಗಿದೆ.

ದ್ವಿತೀಯ ಪಿಯುಸಿ ಪುನರಾವರ್ತಿತ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಅವಕಾಶ

ಬೆಂಗಳೂರು, ಅ.2– ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿ ಪುನರಾವರ್ತಿತ ಅಭ್ಯರ್ಥಿಗಳು ಮತ್ತು 2024–2025ರ ದ್ವಿತೀಯ ಪಿಯುಸಿ ಪರೀಕ್ಷೆ–1ರಲ್ಲಿ ತಮ್ಮ ಫಲಿತಾಂಶಗಳನ್ನು ಸುಧಾರಿಸಲು ಬಯಸುವ ಅಭ್ಯರ್ಥಿಗಳಿಗೆ ದಿನಾಂಕಗಳನ್ನು ಬಿಡುಗಡೆ ಮಾಡಿದೆ.

KSEAB ಹೊರಡಿಸಿದ ಪತ್ರಿಕಾ ಪ್ರಕಟಣೆಯ ಪ್ರಕಾರ, ಹಿಂದಿನ ಪರೀಕ್ಷೆಗಳಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳು ಪಿಯು ಪರೀಕ್ಷಾ ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸುವ ಮೂಲಕ ಪುನರಾವರ್ತಿತ ಅಭ್ಯರ್ಥಿಗಳಾಗಿ ನೋಂದಾಯಿಸಿಕೊಳ್ಳಬಹುದು ಮತ್ತು ಹಿಂದಿನ ಅಂಕಪಟ್ಟಿಯೊಂದಿಗೆ ತಮ್ಮ ಅರ್ಜಿಗಳನ್ನು ಜಿಲ್ಲಾ ಉಪ ನಿರ್ದೇಶಕರಿಗೆ (ಪದವಿ ಪೂರ್ವ) ಸಲ್ಲಿಸಬೇಕು ಎಂದು ತಿಳಿಸಿದೆ.

2024ರಲ್ಲಿ ಪರೀಕ್ಷೆಗಳನ್ನು ಬರೆದ ವಿದ್ಯಾರ್ಥಿಗಳ ತಮ್ಮ ಅಂಕಗಳನ್ನು ಸುಧಾರಿಸಲು ಬಯಸಿದರೆ ನಿಗದಿತ ಶುಲ್ಕವನ್ನು ಪಾವತಿಸುವ ಮೂಲಕ ಮಾರ್ಚ್ 2025ರ ಪರೀಕ್ಷೆಗೆ ನೋಂದಾಯಿಸಿಕೊಳ್ಳಬಹುದು. ವಿದ್ಯಾರ್ಥಿಗಳು ಅರ್ಜಿ ಶುಲ್ಕ ಪಾವತಿಸಲು ಅಕ್ಟೋಬರ್ 25 ಕೊನೆಯ ದಿನವಾಗಿದೆ. 2024ರಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು (11 ಅಂಕೆಗಳ ನೋಂದಣಿ ಸಂಖ್ಯೆಯೊಂದಿಗೆ) ಯಾವುದೇ ಅಥವಾ ಎಲ್ಲಾ ವಿಷಯಗಳಲ್ಲಿ ತಮ್ಮ ಫಲಿತಾಂಶಗಳನ್ನು ಹೆಚ್ಚಿಸಲು ಬಯಸುವ ವಿದ್ಯಾರ್ಥಿಗಳು ಸಹ ಪರೀಕ್ಷೆಗೆ ಅರ್ಜಿ ಸಲ್ಲಿಸಬಹುದು. ಆಯಾ ಕಾಲೇಜುಗಳ ಪ್ರಾಂಶುಪಾಲರು ತಮ್ಮ ಮೂಲ ಅಂಕಪಟ್ಟಿಯನ್ನು ಸಂಗ್ರಹಿಸಿ ಉಪನಿರ್ದೇಶಕರಿಗೆ ಸಲ್ಲಿಸಬೇಕು. ಆರು ಅಂಕಿಗಳ ನೋಂದಣಿ ಸಂಖ್ಯೆಯನ್ನು ಹೊಂದಿರುವ ಪುನರಾವರ್ತಿತ ವಿದ್ಯಾರ್ಥಿಗಳು ಪರೀಕ್ಷೆಯನ್ನು ಬರೆಯಲು ಅನರ್ಹರಾಗಿರುತ್ತಾರೆ.

ರೇಣುಕಾಸ್ವಾಮಿ ಕೊಲೆ ಪ್ರಕರಣ: ತುಮಕೂರು ಜೈಲಿನಿಂದ ಡಿ ಗ್ಯಾಂಗ್‌ನ ಮೂವರು ರಿಲೀಸ್

ತುಮಕೂರು, ಅ.2– ರೇಣುಕಾಸ್ವಾಮಿ ಕೊಲೆ ಪ್ರಕರಣದ ಹಿನ್ನೆಲೆಯಲ್ಲಿ ಜಾಮೀನು ಸಿಕ್ಕ ಬಳಿಕವೂ ಬಿಡುಗಡೆಯಾಗದೇ ಪರದಾಡುತ್ತಿದ್ದ ಮೂವರು ಆರೋಪಿಗಳು ಇಂದು ತುಮಕೂರು ಜೈಲಿನಿಂದ ರಿಲೀಸ್ ಆಗಿದ್ದಾರೆ. ಸೆ.23 ರಂದು ರೇಣುಕಾಸ್ವಾಮಿ ಕೊಲೆ ಪ್ರಕರಣದ ಮೂವರು ಆರೋಪಿಗಳಾದ ಕೇಶವಮೂರ್ತಿ, ಕಾರ್ತಿಕ್, ಹಾಗೂ ನಿಖಿಲ್‌ಗೆ ಷರತ್ತುಬದ್ಧ ಜಾಮೀನು ದೊರೆತಿತ್ತು.

ಎ–16 ಆರೋಪಿ ಕೇಶವಮೂರ್ತಿಗೆ ಹೈಕೋರ್ಟ್‌ನಿಂದ ಹಾಗೂ ಎ–15 ಆರೋಪಿ ಕಾರ್ತಿಕ್, ಎ–17 ಆರೋಪಿ ನಿಖಿಲ್‌ಗೆ 57ನೇ ಸಿಸಿಹೆಚ್ ಕೋರ್ಟ್‌ನಿಂದ ಷರತ್ತುಬದ್ಧ ಜಾಮೀನು ಸಿಕ್ಕಿತ್ತು. ಕೋರ್ಟ್ 2 ಲಕ್ಷ ರೂ. ಹಣ ಹಾಗೂ ಇಬ್ಬರು ಶೂರಿಟಿದಾರರನ್ನ ಹೊಂದಿಸಲು ಆರೋಪಿಗಳ ಕುಟುಂಬಸ್ಥರಿಗೆ ಸೂಚಿಸಿತ್ತು. ಆದರೆ ಜಾಮೀನು ಶ್ಯೂರಿಟಿಗೂ ಹಣವಿಲ್ಲದೇ ಆರೋಪಿಗಳ ಕುಟುಂಬಸ್ಥರು ಪರದಾಡುತ್ತಿದ್ದರು. ಮಂಗಳವಾರ ರಾತ್ರಿ ತುಮಕೂರು ಜೈಲಾಧಿಕಾರಿಗಳಿಗೆ ಜಮೀನು ಆದೇಶದ ಪ್ರತಿ ಮೇಲ್ ಮೂಲಕ ತಲುಪಿದ್ದು, ಜಾಮೀನು ಆದೇಶ ಪ್ರತಿ ಮೇಲ್ ಮೂಲಕ ತಲುಪಿದ್ದು, ಇಂದು ಬಿಡುಗಡೆ ಪ್ರಕ್ರಿಯೆ ಮುಗಿಸಿ ಮೂವರು ಆರೋಪಿಗಳನ್ನ ಜೈಲಿನಿಂದ ರಿಲೀಸ್ ಮಾಡಲಾಗಿದೆ.

ದಸರಾ ಪುಸ್ತಕ ಮೇಳದ ಪೋಸ್ಟರ್ ಬಿಡುಗಡೆ



'ದಸರಾ ಪುಸ್ತಕ ಮೇಳ'ದ ಪೋಸ್ಟರ್ ಬಿಡುಗಡೆ ಮಾಡಲಾಯಿತು.

ಮೈಸೂರು, ಅ.2(ಎಂಕೆ)– ಮೈಸೂರು ದಸರಾ ಮಹೋತ್ಸವ–2024ದ ಅಂಗವಾಗಿ ನಗರದ ಭಾರತ್ ಸ್ಕೌಟ್ ಅಂಡ್ ಗೈಡ್ಸ್ ಮೈದಾನದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ ನಡೆಯುವ 'ದಸರಾ ಪುಸ್ತಕ ಮೇಳ'ದ ಪೋಸ್ಟರ್ ಅನ್ನು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಬಿಡುಗಡೆ ಮಾಡಿದರು. ಇದೇ ಮೊದಲ ಬಾರಿಗೆ ಅ.3 ರಿಂದ 11ರವರೆಗೆ ಪುಸ್ತಕ ಮೇಳ ನಡೆಯಲಿದ್ದು, 50ಕ್ಕೂ ಹೆಚ್ಚು ಪುಸ್ತಕ ಮಳಿಗೆಗಳನ್ನು ತೆರೆಯಲಾಗಿದೆ. ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ, ಗ್ಯಾರಂಟಿ ಯೋಜನೆಗಳ ಉಪಾಧ್ಯಕ್ಷೆ ಡಾ. ಪುಷ್ಪ ಅಮರನಾಥ್ ಉಪಸ್ಥಿತರಿದ್ದರು.

ಮುಡಾ ಹಗರಣ; ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ತನಿಖೆ ಹಿನ್ನೆಲೆ

ಮೈಸೂರು ಲೋಕಾಯುಕ್ತ ಕಚೇರಿ ರಜೆ ದಿನವೂ ಕಾರ್ಯ ನಿರ್ವಹಣೆ

- ಮುಂಬಾಗಿಲಿಗೆ ಬೀಗ, ಒಳಗೆ ಕೆಲಸ
- ತನಿಖೆಗೆ ಬೇರೆ ಜಿಲ್ಲೆ ಅಧಿಕಾರಿಗಳ ಬಳಕೆ
- ಕುತೂಹಲ ಮೂಡಿಸಿದ ತನಿಖೆಯ ಆಯಾಮ

ಮೈಸೂರು,ಅ.2(ಬಿಎಲ್‌ಯು)– ಗಾಂಧಿ ಜಯಂತಿ ಹಾಗೂ ಮಹಾಲಯ ಅಮಾವಾಸ್ಯೆ ರಜೆ ಇದ್ದರೂ, ಮುಡಾ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ತನಿಖೆ ಹಿನ್ನೆಲೆಯಲ್ಲಿ ಮೈಸೂರಿನ ಲೋಕಾಯುಕ್ತ ಕಚೇರಿಯಲ್ಲಿ ಇಂದೂ ಅಧಿಕಾರಿಗಳು ಕಾರ್ಯ ನಿರ್ವಹಿಸಿದರು.

ರಜಾ ದಿನದ ಹಿನ್ನೆಲೆ ಲೋಕಾಯುಕ್ತ ಕಚೇರಿಯ ಪ್ರವೇಶ ದ್ವಾರಕ್ಕೆ ಬೀಗ ಹಾಕಲಾಗಿತ್ತು. ಆದರೆ ಕಚೇರಿಯ ಎಡ ಭಾಗದ ಸಣ್ಣ ಬಾಗಿಲು ತೆರೆದಿತ್ತು.

ಸಿದ್ದರಾಮಯ್ಯರ ಪತ್ನಿ ಪಾರ್ವತಿ ಅವರಿಗೆ ತವರಿಂದ ದಾನವಾಗಿ ಬಂದಿದ್ದ ಭೂಮಿಯಲ್ಲಿ ಲೋಕಾಯುಕ್ತ ಪೊಲೀಸರು ನಿನ್ನೆ ಮಹಜರು ನಡೆಸಿದ್ದರು. ಜೊತೆಗೆ ನಿನ್ನೆ ಸಂಜೆ ತಾಲೂಕು ಕಚೇರಿಗೂ ಭೇಟಿ ನೀಡಿ ಹಲವು ದಾಖಲೆಗಳನ್ನು ಸಂಗ್ರಹಿಸಿದ್ದರು.

ಈ ಮೂಲಕ ಸಿದ್ದರಾಮಯ್ಯ ಅವರ ಮುಡಾ ಹಗರಣದ ತನಿಖೆಯನ್ನು ಚುರುಕುಗೊಳಿಸಿರುವ ಲೋಕಾಯುಕ್ತ ಪೊಲೀಸರು ಇಂದು ಹಗರಣದ ದಾಖಲಾತಿಗಳನ್ನು ಸಿದ್ಧಗೊಳಿಸುವ ಪ್ರಕ್ರಿಯೆಯಲ್ಲಿ ತೊಡಗಿದ್ದರು.

ಬೆಂಗಳೂರು ಹಾಗೂ ರಾಮನಗರ ಜಿಲ್ಲಾ ಲೋಕಾಯುಕ್ತ ಅಧಿಕಾರಿಗಳ ವಾಹನಗಳು ಮೈಸೂರು ಲೋಕಾಯುಕ್ತ ಕಚೇರಿ ಬಳಿ ನಿಂತಿದ್ದವು. ಸಿದ್ದರಾಮಯ್ಯ ವಿರುದ್ಧದ ತನಿಖೆಯಲ್ಲಿ ಮೈಸೂರು ಮಾತ್ರವಲ್ಲದೆ ಬೇರೆ ಜಿಲ್ಲೆಯ ಅಧಿಕಾರಿಗಳನ್ನು ಬಳಸಿಕೊಳ್ಳಲಾಗುತ್ತಿದೆ ಎನ್ನಲಾಗಿದೆ.



ಬೆಂಗಳೂರು ಹಾಗೂ ರಾಮನಗರ ಜಿಲ್ಲಾ ಲೋಕಾಯುಕ್ತ ಅಧಿಕಾರಿಗಳ ವಾಹನಗಳು, ಮೈಸೂರು ಲೋಕಾಯುಕ್ತ ಕಚೇರಿ ಬಳಿ ನಿಂತಿರುವುದು.

ಮುಡಾ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಇತರರ ವಿರುದ್ಧ ಈಗಾಗಲೇ ಇಡಿ (ಜಾರಿ ನಿರ್ದೇಶನಾಲಯ)ಯಲ್ಲಿ ಪ್ರಕರಣ ದಾಖಲಾಗಿದೆ. ಲೋಕಾಯುಕ್ತರು ದಾಖಲಿಸಿರುವ ಎಫ್‌ಐಆರ್ ಆಧರಿಸಿಯೇ ಇಡಿ, ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ದಾಖಲಿಸಿದೆ. ಇಡಿಯವರು ಹಗರಣ ಸಂಬಂಧ ದಾಖಲಾತಿಗಳನ್ನು ಕೇಳಿದ ಸಂದರ್ಭದಲ್ಲಿ ಅದನ್ನು ಒದಗಿಸಲು ಲೋಕಾಯುಕ್ತರು ಎಲ್ಲಾ ರೀತಿಯ ಸಿದ್ಧತೆಯಲ್ಲಿ ತೊಡಗಿದ್ದಾರೆ.

ಅಲ್ಲದೆ ತನಿಖಾ ವರದಿಯನ್ನು ಡಿಸೆಂಬರ್ 24ರೊಳಗೆ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಬೇಕಿರುವ ಕಾರಣ ಲೋಕಾಯುಕ್ತರು ತನಿಖೆಯನ್ನು ಮತ್ತಷ್ಟು ಚುರುಕುಗೊಳಿಸಲಿದ್ದಾರೆ. ಪಾರ್ವತಿ ಅವರಿಗೆ ದಾನವಾಗಿ ಬಂದಿದ್ದ ಭೂಮಿ, ಅವರಿಗೆ ವಿಜಯನಗರದಲ್ಲಿ ಮಂಜೂರಾದ ನಿವೇಶನಗಳ ಮಹಜರು ಸೇರಿದಂತೆ ಲೋಕಾಯುಕ್ತರು ನಡೆಸುತ್ತಿರುವ ತನಿಖೆಯ ಹಲವು ಆಯಾಮಗಳು ತೀವ್ರ ಕುತೂಹಲ ಮೂಡಿಸಿದೆ.

ಲೋಕಾಯುಕ್ತರು ಮುಡಾ ಹಗರಣದಲ್ಲಿ ಸಿದ್ದರಾಮಯ್ಯ ಪಾತ್ರದ ಬಗ್ಗೆ ತನಿಖೆ ನಡೆಸುತ್ತಿದ್ದರೆ, ದೇಸಾಯಿ ಆಯೋಗ ಮುಡಾದಲ್ಲಿ ಇಲ್ಲಿ ತನಕ ನಡೆದಿರುವ ಎಲ್ಲಾ ಅವ್ಯವಹಾರದ ಬಗ್ಗೆ ತನಿಖೆ ನಡೆಸುತ್ತಿದೆ.

ರೈತರ ಮೇಲಿನ ಗೋಲಿಬಾರ್, ಕೆಂಪಣ್ಣ ಆಯೋಗ ಸೇರಿದಂತೆ ರಾಜ್ಯದಲ್ಲಿ ಈಗಾಗಲೇ ನಡೆದಿರುವ ಹಲವು ತನಿಖೆಗಳು ಹಳ್ಳ ಹಿಡಿದಿವೆ. ಪುಟಗಟ್ಟಲೆ ಇರುವ ತನಿಖಾ ವರದಿ ಧೂಳು ಹಿಡಿಯುತ್ತಿದೆ. ಯಾವ ತನಿಖೆಯಿಂದಲೂ ಯಾರ ಮೇಲೂ ಕ್ರಮವಾಗಿಲ್ಲ. ಈ ತನಿಖೆ ಕೂಡ ಹಳ್ಳ ಹಿಡಿಯುವುದೋ ಇಲ್ಲ ತಪ್ಪಿತಸ್ಥರ ಮೇಲೆ ಕ್ರಮವಾಗುವುದೋ ಸಹಜ ಕುತೂಹಲ ರಾಜ್ಯದ ಜನರಲ್ಲಿದೆ.

ಎ3 ಆರೋಪಿ ಮಲ್ಲಿಕಾರ್ಜುನಸ್ವಾಮಿ ಮನೆ ಕೊನೆಗೂ ಪತ್ತೆ

ಮುಖ್ಯಮಂತ್ರಿ ಒಳಗೊಂಡ ಮುಡಾ ಹಗರಣದಲ್ಲಿ ಎ3 ಆರೋಪಿಯಾಗಿರುವ ಸಿದ್ದರಾಮಯ್ಯರ ಪತ್ನಿ ಪಾರ್ವತಿ ಅವರ ಸಹೋದರ ಮಲ್ಲಿಕಾರ್ಜುನಸ್ವಾಮಿ ಅವರ ಮೈಸೂರು ಮನೆಯನ್ನು ಲೋಕಾಯುಕ್ತ ಪೊಲೀಸರು ಕೊನೆಗೂ ಪತ್ತೆ ಹಚ್ಚಿದ್ದಾರೆ.

ಮೈಸೂರಿನ ಟಿ.ಕೆ.ಬಡಾವಣೆಯಲ್ಲಿರುವ ಅವರ ಮನೆಗೆ ಲೋಕಾಯುಕ್ತ ಪೊಲೀಸರು ನಿನ್ನೆ ಭೇಟಿ ನೀಡಿದ್ದರು. ಆದರೆ ಮಲ್ಲಿಕಾರ್ಜುನ ಸ್ವಾಮಿ ಕಳೆದ ನಾಲ್ಕು ವರ್ಷದ ಹಿಂದೆಯೇ ಮನೆಯನ್ನು ಬೇರೆಯವರಿಗೆ ಬಾಡಿಗೆ ನೀಡಿ ಬೆಂಗಳೂರಿನ ಡಾಲರ್ಸ್ ಕಾಲೋನಿಯಲ್ಲಿ ವಾಸವಿದ್ದಾರೆಂಬ ಮಾಹಿತಿಯನ್ನು ಕಲೆ ಹಾಕಿದ್ದಾರೆ.

ಬಾಡಿಗೆದಾರರು ಪ್ರತಿ ತಿಂಗಳ ಬಾಡಿಗೆ ಹಣವನ್ನು ಮಲ್ಲಿಕಾರ್ಜುನ ಸ್ವಾಮಿ ಅವರ ಬ್ಯಾಂಕ್ ಖಾತೆಗೆ ಜಮಾವಣೆ ಮಾಡುತ್ತಿದ್ದಾರೆ. ಹಾಗಾಗಿ ಮಲ್ಲಿಕಾರ್ಜುನ ಸ್ವಾಮಿ ಕುರಿತಂತೆ ಬಾಡಿಗೆದಾರರಿಗೂ ಯಾವುದೇ ಹೆಚ್ಚಿನ ಮಾಹಿತಿ ಇಲ್ಲ.

ಮಲ್ಲಿಕಾರ್ಜುನಸ್ವಾಮಿ ಅವರ ಬೆಂಗಳೂರಿನ ಡಾಲರ್ಸ್ ಕಾಲೋನಿಯ ಮನೆ ಪತ್ತೆ ಹಚ್ಚಿ ಅವರಿಗೆ ನೇರವಾಗಿ ನೋಟಿಸ್ ನೀಡಬೇಕಿದೆ. ಆದರೆ ಕಾನೂನಾತ್ಮಕವಾಗಿ ನಾಳೆ ಮೈಸೂರಿನ ಟಿ.ಕೆ.ಬಡಾವಣೆಯ ಅವರ ಮನೆಗೆ ನೋಟಿಸ್ ಅಂಟಿಸಲು ಉದ್ದೇಶಿಸಿದ್ದಾರೆ ಎಂದು ತಿಳಿದುಬಂದಿದೆ.

ಮುಡಾದಲ್ಲಿ ಶೇ.50:50 ಅನುಪಾತದಡಿ 2015ರಿಂದ ಹಂಚಿಕೆಯಾದ ನಿವೇಶನ ಮಂಜೂರಾತಿ ರದ್ದುಗೊಳಿಸಬೇಕು

ಮೈಸೂರು ನ್ಯಾಯಾಲಯದಲ್ಲಿ ಹಿರಿಯ ವಕೀಲ ಅರುಣ್‌ಕುಮಾರ್ ಪಿಐಎಲ್ ಸಲ್ಲಿಕೆ

ಮೈಸೂರು, ಅ.2(ಬಿಎಲ್‌ಯು)– ಮುಡಾದಲ್ಲಿ 2015ರಿಂದ ಶೇಕಡ 50:50 ಅನುಪಾತದಡಿ, ಪ್ರೋತ್ಸಾಹಿಕ ಯೋಜನೆಯಡಿ ಸೇರಿದಂತೆ ಹಂಚಿಕೆಯಾಗಿರುವ ಇತರೆ ಎಲ್ಲಾ ನಿವೇಶನಗಳ ಮಂಜೂರಾತಿಯನ್ನು ರದ್ದು ಮಾಡಬೇಕು ಎಂದು ಮೈಸೂರಿನ ಹಿರಿಯ ವಕೀಲ ಎಸ್.ಅರುಣ್‌ಕುಮಾರ್ ನಗರದ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಿದ್ದಾರೆ.

ಪಿಐಎಲ್‌ನಲ್ಲಿ 14 ಅಂಶಗಳನ್ನು ಅರುಣ್ ಕುಮಾರ್ ಉಲ್ಲೇಖಿಸಿದ್ದು, ಇದನ್ನು ಪರಿಗಣಿಸುವಂತೆ ನ್ಯಾಯಾಲಯವನ್ನು ಕೋರಿದ್ದಾರೆ.

ಮೈಸೂರಿನ ಪತ್ರಕರ್ತರ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಅರುಣ್‌ಕುಮಾರ್, ಮೈಸೂರಿನ ಪ್ರಧಾನ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ನಿನ್ನೆ ಪಿಐಎಲ್ ದಾಖಲಿಸಿರುವುದಾಗಿ ತಿಳಿಸಿದರು.

ಮೈಸೂರಿನ ನಜರ್‌ಬಾದ್ ವಾಸಿ ಎಂ.ಸತೀಶ್ ಜೊತೆ ಸಲ್ಲಿಸಿರುವ ಸದರಿ ಪಿಐಎಲ್‌ನಲ್ಲಿ ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಮೈಸೂರು ಜಿಲ್ಲಾಧಿಕಾರಿ, ಮುಡಾ ಹಾಗೂ ನಗರ ಪಾಲಿಕೆ ಆಯುಕ್ತರನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ ಎಂದು ಹೇಳಿದರು.



ಹಂಚಿಕೆಗಳ ಅಮಾನಿಕರಣ ಮಾಡಬೇಕು: ಮುಡಾದಲ್ಲಿ 2015ರಿಂದ 50:50 ಅನುಪಾತದಡಿ ಪ್ರೋತ್ಸಾಹಿಕ ಯೋಜನೆಯಡಿ ಮಂಜೂರಾಗಿರುವ ನಿವೇಶನ ಸೇರಿದಂತೆ ಇತರೆ ನಿವೇಶನಗಳನ್ನು ಅಕ್ರಮವಾಗಿ ಮಂಜೂರು ಮಾಡಿದ್ದು, ಈ ಹಂಚಿಕೆಗಳನ್ನು ಅಮಾನಿಕರಣ ಮಾಡಬೇಕು.

ವರ್ಗಾವಣೆ ತಡೆಗೆ ಒತ್ತಾಯ: ಶೇಕಡ 50:50 ಅನುಪಾತದಡಿ ಹಂಚಿಕೆಯಾದ ಎಲ್ಲಾ ನಿವೇಶನಗಳನ್ನು ಪರಭಾರೆ ಮಾಡುವುದು, ವರ್ಗಾವಣೆ ಮಾಡುವುದನ್ನು ತಡೆಯಬೇಕು.

ಪ್ರಕ್ರಿಯೆಗೆ ತಡೆ ಆಗ್ರಹ: ಮುಡಾ ಹಗರಣದ ಬಗ್ಗೆ ಸಮಗ್ರ ತನಿಖೆ ನಡೆಸುವ ತನಕ ನಿವೇಶನಗಳ ಹಂಚಿಕೆಗೆ ಸಂಬಂಧಿಸಿದಂತೆ ಎಲ್ಲಾ ಪ್ರಕ್ರಿಯೆಗಳನ್ನು ತಡೆ ಹಿಡಿಯಬೇಕು.

ನಿವೇಶನ ಹಂಚಿಕೆ ಬಗ್ಗೆ ಸ್ಪಷ್ಟತೆ ನೀಡಬೇಕು: ಮುಡಾ ಆಯುಕ್ತರಾಗಿದ್ದ ಡಿ.ಬಿ.ನಟೇಶ್ ಹಾಗೂ ಜಿ.ಟಿ.ದಿನೇಶ್‌ಕುಮಾರ್ ಅವಧಿಯಲ್ಲಿ ಎಷ್ಟು ನಿವೇಶನಗಳನ್ನು ಮಂಜೂರು ಮಾಡಲಾಗಿದೆ ಎಂಬ ವಿಚಾರವನ್ನು ಬಹಿರಂಗ ಮಾಡಬೇಕು.

ಶಾಶ್ವತ ಘೋಷಣೆ ಮಾಡಬೇಕು: ಮೈಸೂರಿನ ದಟ್ಟಗಳ್ಳಿಯ ಸರ್ವೆ ನಂಬರ್ 27.3, 27/1, 15/1 ಮತ್ತು 15/2ರಲ್ಲಿ ಸುಮಾರು 17.21 ಎಕರೆ ವಿಸ್ತೀರ್ಣದ ಜಮೀನು ಮುಡಾಗೆ ಸೇರಿದೆ ಎಂದು ಶಾಶ್ವತವಾಗಿ ಘೋಷಣೆ ಮಾಡಬೇಕು.

ಶಾಶ್ವತ ತಡೆಯಾಜ್ಞೆ ನೀಡಬೇಕು: ಮುಡಾ ಆಯುಕ್ತರಾಗಿದ್ದ ಡಿ.ಬಿ.ನಟೇಶ್ ಮತ್ತು ಜಿ.ಟಿ.ದಿನೇಶ್ ಕುಮಾರ್ ಮಂಜೂರು ಮಾಡಿರುವ ನಿವೇಶನಗಳನ್ನು ಪರಭಾರೆ ಮಾಡದಂತೆ ಶಾಶ್ವತ ತಡೆಯಾಜ್ಞೆ ನೀಡಬೇಕು. ಈ ಮೂಲಕ ಎಲ್ಲಾ ಫಲಾನುಭವಿಗಳನ್ನು ನಿರ್ಬಂಧಿಸಬೇಕು. ಭೂಮಿ ಕಳೆದುಕೊಂಡವರಿಗೆ ಪ್ರೋತ್ಸಾಹಕ ನಿವೇಶನಗಳ ಬದಲಾವಣೆಯನ್ನು ಅನೂರ್ಜಿತಗೊಳಿಸಬೇಕು

ನಿರ್ಮಾಣ ಪ್ರಕ್ರಿಯೆಗೆ ಕಡಿವಾಣ ಹಾಕಬೇಕು: 2015ರಿಂದ ಜಾರಿಯಾದ ಯೋಜನೆಗಳಲ್ಲಿ ಹಂಚಿಕೆಯಾಗಿರುವ ನಿವೇಶನಗಳಲ್ಲಿ ನಿರ್ಮಾಣ ಪ್ರಕ್ರಿಯೆ ಹಾಗೂ ವ್ಯಾಪಾರ ಚಟುವಟಿಕೆಗಳಿಗೆ ಯಾವುದೇ ರೀತಿಯ ಪರವಾನಗಿ ನೀಡಬಾರದು. ಈ ಸಂಬಂಧ ಮುಡಾ ಹಾಗೂ ನಗರಪಾಲಿಕೆಯನ್ನು ನಿರ್ಬಂಧಿಸಬೇಕು

ಈ ಎಲ್ಲಾ ಅಂಶಗಳನ್ನು ಉಲ್ಲೇಖಿಸಿ ನ್ಯಾಯಾಲಯದಲ್ಲಿ ಪಿಐಎಲ್ ಸಲ್ಲಿಸಿದ್ದು, ಇದನ್ನು ಪರಿಗಣಿಸಿ ತಡೆಯಾಜ್ಞೆ ನೀಡಬೇಕೆಂದು ನ್ಯಾಯಾಲಯಕ್ಕೆ ಮನವಿ ಮಾಡಲಾಗಿದೆ ಎಂದು ಹಿರಿಯ ವಕೀಲ ಅರುಣ್ ಕುಮಾರ್ ಸಮಗ್ರ ಮಾಹಿತಿ ನೀಡಿದರು. ಎಂ.ಸತೀಶ್, ವಕೀಲರಾದ ಲಕ್ಷ್ಮಿ, ಸನಾ ಖಾನ್ ಹಾಗೂ ಋತ್ವಿಕ್ ಗೌಡ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಅ.5, ವಿಶೇಷ ಸ್ವಾತಿ ಪೂಜೆ



ಮೈಸೂರು,ಅ.2–ಮೈಸೂರಿನ ಕಾಳಿದಾಸ ರಸ್ತೆಯಲ್ಲಿರುವ ಶ್ರೀ ಯದುಗಿರಿ ಯತಿರಾಜ ಮಠ, ಮೈಸೂರು ಶಾಖೆಯ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ಅ.5ರಂದು ಶನಿವಾರ 'ಸ್ವಾತಿ' ನಕ್ಷತ್ರದ ಪ್ರಯುಕ್ತ ವಿಶೇಷ ಪೂಜೆ ಆಯೋಜಿಸಲಾಗಿದೆ. ಅಂದು ಬೆಳಗ್ಗೆ 8ಕ್ಕೆ ಸಂಕಲ್ಪ, 9ಕ್ಕೆ ಅಭಿಷೇಕ, 10.30ಕ್ಕೆ ಅಲಂಕಾರ, 11.30ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 12.30ಕ್ಕೆ ಶಾತ್ತುಮೊರೈ, 1 ಗಂಟೆಗೆ ತೀರ್ಥ ಪ್ರಸಾದ ವಿನಿಯೋಗ ಏರ್ಪಡಿಸಲಾಗಿದೆ. ಸಂಜೆ 7.30ಕ್ಕೆ ಪ್ರಾಕಾರೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನದ ಮುಖ್ಯಸ್ಥ ವಿದ್ವಾನ್ ಕೆ.ಆರ್.ಯೋಗಾನರಸಿಂಹನ್ (ಮುರುಳಿ ಅಯ್ಯಂಗಾರ್) ತಿಳಿಸಿದ್ದಾರೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ಕೋರಿದ್ದಾರೆ. ಮಾಹಿತಿಗೆ ಮೊ. 9342188323, 7598832271 ಸಂಪರ್ಕಿಸಬಹುದು.

ಮೈಸೂರಲ್ಲಿ ಸ್ವಚ್ಛತಾ ಮ್ಯಾರಥಾನ್‌ಗೆ ಚಾಲನೆ

ಮೈಸೂರು,ಅ.2(ಆರ್‌ಕೆ)– ಸಾರ್ವಜನಿಕರಲ್ಲಿ ಸ್ವಚ್ಛತೆ ಬಗ್ಗೆ ಜಾಗೃತಿ ಮೂಡಿಸಲು ಇಂದು ಮೈಸೂರಲ್ಲಿ ಯುವ ಸಮೂಹ ಮ್ಯಾರಥಾನ್ ನಡೆಯಿತು.

ಅರಮನೆ ಬಲರಾಮ ದ್ವಾರದ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಬಳಿಯಿಂದ ಆರಂಭವಾದ ಸ್ವಚ್ಛತಾ ಮ್ಯಾರಥಾನ್‌ಗೆ ಹಸಿರು ನಿಶಾನೆ ತೋರುವ ಮೂಲಕ ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಚಾಲನೆ ನೀಡಿದರು.

'ನಮ್ಮ ಮೈಸೂರನ್ನು ಸ್ವಚ್ಛ, ಹಸಿರು ಮತ್ತು ತ್ಯಾಜ್ಯ ಮುಕ್ತ ನಗರವನ್ನಾಗಿ ಮಾಡೋಣ', 'ಸ್ವಚ್ಛತೆಯೇ ಸೇವೆ', 'ಸ್ವಭಾವ ಸ್ವಚ್ಛತೆ–ಸಂಸ್ಕಾರ ಸ್ವಚ್ಛತೆ' ಘೋಷವಾಕ್ಯದೊಂದಿಗೆ ಮೈಸೂರು ಮಹಾನಗರ ಪಾಲಿಕೆಯಿಂದ ಆಯೋಜಿಸಿರುವ ಮ್ಯಾರಥಾನ್‌ನಲ್ಲಿ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್, ಎನ್‌ಸಿಸಿ, ಎನ್‌ಎಸ್‌ಎಸ್, ವಿವಿಧ ಕಾಲೇಜು ವಿದ್ಯಾರ್ಥಿಗಳು, ಅಥ್ಲೆಟ್‌ಗಳು, ಜಿಎಸ್‌ಎಸ್ ಸಂಸ್ಥೆ ಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಪಾಲ್ಗೊಂಡಿದ್ದರು.



ಮೈಸೂರು ಅರಮನೆ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಬಳಿಯಿಂದ ಆರಂಭವಾದ ಸ್ವಚ್ಛತಾ ಮ್ಯಾರಥಾನ್‌ಗೆ ಹಸಿರು ನಿಶಾನೆ ತೋರುವ ಮೂಲಕ ಮೈಸೂರು ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಚಾಲನೆ ನೀಡಿದರು.

ಮ್ಯಾರಥಾನ್ ಕೆಆರ್ ಸರ್ಕಲ್, ಡಿ. ದೇವರಾಜ ಅರಸು ರಸ್ತೆ, ಜೆಎಲ್‌ಬಿ ರಸ್ತೆ, ರಾಮಸ್ವಾಮಿ ಸರ್ಕಲ್, ಚಾಮರಾಜ ಜೋಡಿ ರಸ್ತೆ, ಗನ್‌ಹೌಸ್, ಹಾರ್ಡಿಂಜ್ ಸರ್ಕಲ್ ಮೂಲಕ ಮರಳಿ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ 5 ಕಿ.ಮೀ. ಸಾಗಿ ಅಂತ್ಯಗೊಂಡಿತು.

ಮ್ಯಾರಥಾನ್‌ನಲ್ಲಿ ಶಿವಾನಂದ ಬಾಗಲಕೋಟೆ ಪ್ರಥಮ, ಪುರುಷೋತ್ತಮ್ ದ್ವಿತೀಯ ಹಾಗೂ ರಘುವರನ್ ತೃತೀಯ ಬಹುಮಾನ ಪಡೆದರು.

ನಗರಪಾಲಿಕೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಕೆ.ಜೆ.ಸಿಂಧೂ, ಎಕ್ಸಿಕ್ಯೂಟಿವ್ ಇಂಜಿನಿಯರ್ ದೀಪಕ್, ಮುಖ್ಯ ಆರೋಗ್ಯಾಧಿಕಾರಿ ಡಾ.ವೆಂಕಟೇಶ್, ಆರೋಗ್ಯಾಧಿಕಾರಿ ಡಾ. ಹರ್ಷ, ಪರಿಸರ ಇಂಜಿನಿಯರ್‌ಗಳು, ವಲಯಾಧಿಕಾರಿಗಳು, ಹೆಲ್ತ್ ಇನ್ಸ್‌ಪೆಕ್ಟರ್‌ಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಅಂತಾರಾಷ್ಟ್ರೀಯ ಓಪನ್ ಕರಾಟೆ ಚಾಂಪಿಯನ್‌ಶಿಪ್‌ನಲ್ಲಿ

ಎಸ್‌ಎಸ್‌ಜಿಆರ್‌ಗೆ 18 ಚಿನ್ನದ ಪದಕ

ಮೈಸೂರು,ಅ.2–ಶಿವಮೊಗ್ಗದಲ್ಲಿ ಇತ್ತೀಚೆಗೆ ನಡೆದ 5ನೇ ಅಂತಾರಾಷ್ಟ್ರೀಯ ಓಪನ್ ಕರಾಟೆ ಚಾಂಪಿಯನ್‌ಶಿಪ್ ಕಟಾ ಮತ್ತು ಕುಮಿತೆ ಸ್ಪರ್ಧೆಯಲ್ಲಿ ಮೈಸೂರಿನ ಎಸ್‌ಎಸ್‌ಜಿಆರ್ ಕರಾಟೆ ಮತ್ತು ಸ್ಪೋರ್ಟ್ಸ್ ಅಸೋಸಿಯೇಷನ್‌ನ 18 ವಿದ್ಯಾರ್ಥಿಗಳು ಭಾಗವಹಿಸಿ 18 ಚಿನ್ನದ ಪದಕ, 16 ಬೆಳ್ಳಿ ಪದಕ ಮತ್ತು 3 ಕಂಚಿನ ಪದಕವನ್ನು ಗಳಿಸಿದ್ದಾರೆ.


ಸೇಂಟ್ ವಿನ್ಸೆಂಟ್ ಸ್ಕೂಲ್‌ನ ಪೂರ್ವಿಕಾ, ಪೂರ್ಣಶ್ರೀ; ಫ್ಲೋಸ್ ಕಾರ್ಮೆಲಿ ಐಸಿಎಸ್‌ಸಿ ಸ್ಕೂಲ್‌ನ ಆರ್.ಶ್ರೇಯಸ್, ನಿರಾಲಿ; ಸೇಂಟ್ ಫ್ರಾನ್ಸಿಸ್ ಸ್ಕೂಲ್‌ನ ರಾಮು, ಮನಿಸ್, ಗುರುಕುಲ ವಿದ್ಯಾಸಂಸ್ಥೆಯ ಅರ್ಜುನ್‌ಸಿಂಗ್, ರೋಹಿತ್, ಗಗನ್‌ಗೌಡ ಸೇಂಟ್ ಮೇರಿಸ್ ಶಾಲೆಯ ಜೀವನ್; ಅರ್ನಾಲ್ಡ್ ಸ್ಕೂಲ್ ಆದಿತ್, ಸೇಂಟ್ ಜೋಸೆಫ್ ಸ್ಕೂಲ್‌ನ ಸ್ಕಂದಾ, ಚಿರಂತ್; ಬಿಟಿಎಲ್ ಸ್ಕೂಲ್‌ನ ಸೋನಾಲ್, ಟ್ರಿನಿಟಿ ಕಾಲೇಜಿನ ಪ್ರೀತು, ಲಯನ್ ಸ್ಕೂಲ್‌ನ ನಿಕ್ಷಿತ್, ಪಾರಸ್ ಜೈನ್ ಸ್ಕೂಲ್‌ನ ಮಧಿಹಾ ವಿದ್ಯಾರ್ಥಿಗಳು ಭಾಗವಹಿಸಿ ಜಯ ಗಳಿಸಿದ್ದಾರೆ. ಅಸೋಸಿಯೇಷನ್‌ನ ಲೋಕೇಶ್ ಸಿಯಾಸ್ ತರಬೇತುದಾರರಾಗಿದ್ದಾರೆ.



5ನೇ ಅಂತಾರಾಷ್ಟ್ರೀಯ ಓಪನ್ ಕರಾಟೆ ಚಾಂಪಿಯನ್‌ಶಿಪ್ ಕಟ್ಟಾ, ಕುಮಿತೆ ಸ್ಪರ್ಧೆಯಲ್ಲಿ ಮೈಸೂರಿನ ಎಸ್‌ಎಸ್‌ಜಿಆರ್ ಕರಾಟೆ ಮತ್ತು ಸ್ಪೋರ್ಟ್ಸ್ ಅಸೋಸಿಯೇಷನ್‌ನ ವಿದ್ಯಾರ್ಥಿಗಳು ಚಿನ್ನ, ಬೆಳ್ಳಿ, ಕಂಚಿನ ಪದಕ ಗಳಿಸಿದ್ದಾರೆ.

ದೇಶ - ವಿದೇಶ

ಅಮೆರಿಕ ಮಾಜಿ ಅಧ್ಯಕ್ಷ ಜಿಮ್ಮಿ ಕಾರ್ಟರ್‌ಗೆ 100ನೇ ಜನ್ಮದಿನದ ಸಂಭ್ರಮ



ಜಾರ್ಜಿಯಾ: ಅಮೆರಿಕದ 39ನೇ ಅಧ್ಯಕ್ಷರಾಗಿದ್ದ ಜಿಮ್ಮಿ ಕಾರ್ಟರ್ ಅವರು ಅ.1ರಂದು ತಮ್ಮ 100ನೇ ಜನ್ಮದಿನವನ್ನು ಆಚರಿಸಿಕೊಂಡಿದ್ದು, 100 ವರ್ಷ ಬದುಕಿರುವ ಅಮೆರಿಕದ ಏಕೈಕ ಅಧ್ಯಕ್ಷ ಎಂಬ ಹಿರಿಮೆಗೆ ಪಾತ್ರರಾಗಿದ್ದಾರೆ. ಕಾರ್ಟರ್ ತವರೂರಾದ ಜಾರ್ಜಿಯಾದ ಪ್ಲೇನ್ಸ್‌ನಲ್ಲಿ ಸಂಭ್ರಮ ಮನೆ ಮಾಡಿತ್ತು. ಜಿಮ್ಮಿ ಕುಟುಂಬದವರು, ಸ್ನೇಹಿತರು, ಅಭಿಮಾನಿಗಳು ಶುಭ ಕೋರಿದರು. ಜಾರ್ಜಿಯಾದ ಹಲವೆಡೆ ಅವರ ಜನ್ಮದಿನದ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಪ್ಲೇನ್ಸ್‌ನ ತಮ್ಮ ವಿಶಾಲವಾದ ಮನೆಯ ಎದುರುಗಡೆಯ ಹುಲ್ಲುಹಾಸಿನಲ್ಲಿ ವ್ಹೀಲ್‌ಚೇರ್‌ನಲ್ಲಿ ಬಂದು ತಮ್ಮ ಅಭಿಮಾನಿಗಳಿಗೆ ಕಾರ್ಟರ್ ಕೈ ಬೀಸಿದರು. ಕಳೆದ 17 ತಿಂಗಳಿನಿಂದ ಅವರು ಯಾವುದೇ ಸಾರ್ವಜನಿಕ ಸಮಾರಂಭದಲ್ಲಿ ಕಾಣಿಸಿಕೊಂಡಿಲ್ಲ. ಮನೆಯಲ್ಲೇ ಆರೋಗ್ಯವಾಗಿದ್ದಾರೆ. ಜಗತ್ತಿನ ಶ್ರೇಷ್ಠ ರಾಜಕಾರಣಿ ಎಂದು ಹೆಸರಾಗಿರುವ ಜಿಮ್ಮಿ ಕಾರ್ಟರ್ ಅವರಿಗೆ ಅನೇಕ ಜಾಗತಿಕ ನಾಯಕರು ಶುಭ ಕೋರಿದ್ದಾರೆ. ಅ.1 1924ರಂದು ಜಾರ್ಜಿಯಾದ ಪ್ಲೇನ್ಸ್‌ನಲ್ಲಿ ಜನಿಸಿದ ಜಿಮ್ಮಿ ಮೂಲತಃ ರೈತ ಕುಟುಂಬದವರು.

ದೆಹಲಿಯಲ್ಲಿ ಬರೋಬ್ಬರಿ 2,000 ಕೋಟಿ ಮೌಲ್ಯದ ಕೊಕೇನ್ ವಶ

ನವದೆಹಲಿ: ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಇಂದು



ಅತಿ ದೊಡ್ಡ ಮಾದಕ ವಸ್ತು ದಂಧೆ ಬಯಲಾಗಿದ್ದು, 2,000 ಕೋಟಿ ಮೌಲ್ಯದ 500 ಕೆಜಿ ಕೊಕೇನ್ ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ದಕ್ಷಿಣ ದೆಹಲಿಯಲ್ಲಿ ದಾಳಿ ನಡೆದಿದ್ದು, ಮಾದಕ ವಸ್ತು ದಂಧೆಗೆ ಸಂಬಂಧಿಸಿದಂತೆ ನಾಲ್ವರನ್ನು ಬಂಧಿಸಲಾಗಿದೆ. ಅಂತಾರಾಷ್ಟ್ರೀಯ ಡ್ರಗ್ಸ್ ಸ್ಮಗ್ಲಿಂಗ್ ಸಿಂಡಿಕೇಟ್‌ನಿಂದ ಈ ಕೃತ್ಯ ನಡೆದಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ. ದೆಹಲಿಯ ತಿಲಕ್‌ನಗರ ಪ್ರದೇಶದಲ್ಲಿ ಭಾನುವಾರ 400 ಗ್ರಾಂ ಹೆರಾಯಿನ್ ಮತ್ತು 160 ಗ್ರಾಂ ಕೊಕೇನ್ ವಶಪಡಿಸಿಕೊಂಡ ಇಬ್ಬರು ಅಫ್ಘಾನಿಸ್ತಾನ ಪ್ರಜೆಗಳನ್ನು ಬಂಧಿಸಿದ ನಂತರ ಇಂದು ಈ ದಾಳಿ ನಡೆಸಿದೆ.

ದೆಹಲಿಯ ಕಸ್ಟಮ್ಸ್ ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರೊಬ್ಬರಿಂದ 24 ಕೋಟಿ ಮೌಲ್ಯದ 1,660 ಗ್ರಾಂ ಕೊಕೇನ್ ಅನ್ನು ವಶಪಡಿಸಿಕೊಂಡಿದೆ. ಪ್ರಯಾಣಿಕನು ಫೆಡರಲ್ ರಿಪಬ್ಲಿಕ್ ಆಫ್ ಲೈಬೀರಿಯಾದ ಪ್ರಜೆಯಾಗಿದ್ದು, ದುಬೈನಿಂದ ದೆಹಲಿಗೆ ಆಗಮಿಸಿದ್ದ. ಅವರನ್ನು ಎನ್‌ಡಿಪಿಎಸ್ ಕಾಯ್ದೆ 1985ರ ಅಡಿಯಲ್ಲಿ ಬಂಧಿಸಲಾಯಿತು. ಹೆಚ್ಚಿನ ತನಿಖೆ ನಡೆಯುತ್ತಿದೆ.

ಚೀನಾದ ಸೂಪರ್ ಮಾರ್ಕೆಟ್‌ನಲ್ಲಿ ದುಷ್ಕರ್ಮಿಯಿಂದ ದಾಳಿ, ಮೂವರು ಸಾವು, 15 ಮಂದಿಗೆ ಗಾಯ

ಶಾಂಘೈ: ಚೀನಾದ ಶಾಂಘೈನಲ್ಲಿರುವ ಸೂಪರ್



ಮಾರ್ಕೆಟ್‌ನಲ್ಲಿ ಚಾಕು ಹಿಡಿದ ದುಷ್ಕರ್ಮಿಯೊಬ್ಬ ದಾಳಿ ನಡೆಸಿದ ಪರಿಣಾಮ ಮೂವರು ಸಾವನ್ನಪ್ಪಿ ಸುಮಾರು 15 ಮಂದಿ ಗಾಯಗೊಂಡಿದ್ದಾರೆ. ಘಟನಾ ಸ್ಥಳಕ್ಕೆ ಪೊಲೀಸರು ಆಗಮಿಸಿ, ಆತಂಕದ ವಾತಾವರಣವನ್ನು ತಿಳಿಗೊಳಿಸಿದ್ದಾರೆ ಎಂದು ಕ್ಸಿನ್ಹುವಾ ವರದಿ ಮಾಡಿದೆ. ದಾಳಿಕೋರನನ್ನು 37 ವರ್ಷದ ಲಿನ್ ಎಂದು ಗುರುತಿಸಲಾಗಿದ್ದು, ಪೊಲೀಸರು ಆತನನ್ನು ಬಂಧಿಸಿದ್ದಾರೆ. ಆರೋಪಿ ಚಾಕು ಹಿಡಿದು ಸೂಪರ್ ಮಾರ್ಕೆಟ್‌ನಲ್ಲಿ ಸುತ್ತಾಡುತ್ತಿರುವ ಫೋಟೋ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ. ಸುಮಾರು ಹದಿನೆಂಟು ಜನರಿಗೆ ಆತ ಚಾಕು ವಿನಿಂದ ಇರಿದಿದ್ದು, ಅದರಲ್ಲಿ ಮೂವರು ಮೃತಪಟ್ಟಿದ್ದಾರೆ. ಇತರರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಶಾಂಘೈ ಪೊಲೀಸರ ಹೇಳಿಕೆ ಪ್ರಕಾರ, ಲಿನ್ ವೈಯಕ್ತಿಕ ಹಣಕಾಸಿನ ವಿವಾದಗಳಿಂದ ಕೋಪಗೊಂಡು ಶಾಂಘೈಗೆ ಬಂದು ಈ ಕೃತ್ಯ ನಡೆಸಿದ್ದಾನೆ ಎನ್ನಲಾಗಿದೆ.

ರಾಜಸ್ಥಾನ, ಮಧ್ಯ ಪ್ರದೇಶದ ರೈಲು ನಿಲ್ದಾಣ, ಧಾರ್ಮಿಕ ಸ್ಥಳಗಳಿಗೆ ಬಾಂಬ್ ಬೆದರಿಕೆ

ಜೈಪುರ: ರಾಜಸ್ಥಾನ ಮತ್ತು ಮಧ್ಯಪ್ರದೇಶದ ಹಲ



ವಾರು ರೈಲ್ವೆ ನಿಲ್ದಾಣಗಳು ಹಾಗೂ ಧಾರ್ಮಿಕ ಸ್ಥಳಗಳಲ್ಲಿ ಬಾಂಬ್ ಸ್ಫೋಟಿಸುವುದಾಗಿ ಬೆದರಿಕೆ ಪತ್ರವೊಂದು ಹನುಮಾನ್‌ಗಢ ರೈಲು ನಿಲ್ದಾಣಕ್ಕೆ ಬಂದಿದೆ ಎಂದು ಪೊಲೀಸರು ಬುಧವಾರ ತಿಳಿಸಿದ್ದಾರೆ. ಈ ಪತ್ರವನ್ನು ಹನುಮಾನ್‌ಗಢ ರೈಲ್ವೆ ಸ್ಟೇಷನ್ ಮಾಸ್ಟರ್‌ಗೆ ಅಂಚೆ ಮೂಲಕ ಕಳುಹಿಸಲಾಗಿದ್ದು, ಸ್ಥಳೀಯ ಪೊಲೀಸರಿಗೆ ಮಾಹಿತಿ ನೀಡಲಾಗಿದೆ ಎಂದು ಹನುಮಾನ್‌ಗಢದ ಹೆಚ್ಚುವರಿ ಎಸ್‌ಪಿ, ಪ್ಯಾರೆಲಾಲ್ ಮೀನಾ ಹೇಳಿದ್ದಾರೆ. ಗಂಗಾನಗರ, ಹನುಮಾನ್‌ಗಢ, ಜೋಧ್‌ಪುರ, ಬಿಕಾನೇರ್, ಕೋಟಾ, ಬುಂಡಿ, ಉದಯಪುರ, ಜೈಪುರದ ರೈಲ್ವೆ ನಿಲ್ದಾಣ ಮತ್ತು ಇತರ ಸ್ಥಳಗಳಲ್ಲಿ ಅಕ್ಟೋಬರ್‌ನಲ್ಲಿ ಬಾಂಬ್ ಸ್ಫೋಟಿಸಲಾಗುವುದು ಎಂದು ಜೈಷ್–ಎ–ಮೊಹಮ್ಮದ್ ಹೆಸರಿನಲ್ಲಿದ್ದ ಪತ್ರದಲ್ಲಿ ಬೆದರಿಕೆ ಹಾಕಲಾಗಿದೆ ಎಂದು ತಿಳಿಸಿದ್ದಾರೆ.

ಸರ್ಕಾರಿ ರೈಲ್ವೆ ಪೊಲೀಸ್(ಜಿಆರ್‌ಪಿ), ಸ್ಥಳೀಯ ಪೊಲೀಸರು ಮತ್ತು ಬಿಎಸ್‌ಎಫ್ ಸಿಬ್ಬಂದಿ ರೈಲು ನಿಲ್ದಾಣ ಮತ್ತು ಇತರ ಸ್ಥಳಗಳಲ್ಲಿ ತೀವ್ರ ಶೋಧ ನಡೆಸಿದ್ದಾರೆ ಎಂದು ಮೀನಾ ಹೇಳಿದ್ದಾರೆ.

ಪ್ರವಾಹದ ನೀರಿನಲ್ಲೇ ಹೆಲಿಕಾಪ್ಟರ್ ಲ್ಯಾಂಡಿಂಗ್

ಬಿಹಾರ: ಪ್ರವಾಹಪೀಡಿತ ಬಿಹಾರಕ್ಕೆ ಪರಿಹಾರ ಕಿಟ್



ಒದಗಿಸಲು ಬಂದಿದ್ದ ವಾಯುಪಡೆ ಹೆಲಿಕಾಪ್ಟರ್ ತಾಂತ್ರಿಕ ದೋಷದಿಂದ ಪ್ರವಾಹದ ನೀರಿನಲ್ಲೇ ತುರ್ತು ಭೂಸ್ಪರ್ಶ ಮಾಡಿದ ಘಟನೆ ಬುಧವಾರ ನಡೆದಿದೆ. ಹೆಲಿಕಾಪ್ಟರ್‌ನಲ್ಲಿ ಇಬ್ಬರು ಸಿಬಂದಿ ಸೇರಿ ಒಟ್ಟು ನಾಲ್ವರು ಇದ್ದರು ಎನ್ನಲಾಗಿದ್ದು, ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಕಳೆದ ಕೆಲ ದಿನಗಳಿಂದ ಬಿಹಾರದ ಕೆಲ ಭಾಗಗಳಲ್ಲಿ ನಿರಂತರ ಮಳೆಯಾಗುತ್ತಿದ್ದು, ಪರಿಣಾಮ ಹಲವು ಪ್ರದೇಶಗಳು ಪ್ರವಾಹಕ್ಕೆ ತುತ್ತಾಗಿವೆ. ಈ ನಿಟ್ಟಿನಲ್ಲಿ ವಾಯುಪಡೆ ಹಲಿಕಾಪ್ಟರ್ ಮೂಲಕ ತುರ್ತು ಪರಿಹಾರ ಸಾಮಗ್ರಿಗಳನ್ನು ಒದಗಿಸಲು ಬಿಹಾರದ ಮುಜಾಫರ್‌ಪುರಕ್ಕೆ ತೆರಳುತ್ತಿದ್ದ ಸಮಯದಲ್ಲಿ ಹೆಲಿಕಾಪ್ಟರ್‌ನಲ್ಲಿ ತಾಂತ್ರಿಕ ಸಮಸ್ಯೆ ಎದುರಾಗಿದ್ದು, ಈ ವೇಳೆ ಪೈಲೆಟ್ ಹೆಚ್ಚಿನ ಅವಘಡ ತಪ್ಪಿಸಲು ಪ್ರವಾಹದ ನೀರಿನಲ್ಲೇ ಹೆಲಿಕಾಪ್ಟರ್ ತುರ್ತು ಲ್ಯಾಂಡ್ ಮಾಡಿದ್ದಾರೆ ಎನ್ನಲಾಗಿದೆ. ಹೆಲಿಕಾಪ್ಟರ್‌ನಲ್ಲಿದ್ದ ನಾಲ್ವರನ್ನು ರಕ್ಷಿಸಿ, ಆಸ್ಪತ್ರೆಗೆ ದಾಖಲು ಮಾಡಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಈ ವರ್ಷದಿಂದ ಕಾಫಿ ದಸರಾ ಆರಂಭ

● ಅ.6, 7ರಂದು ಗಾಂಧಿ ಮೈದಾನದಲ್ಲಿ ಕೃಷಿಕರಿಗೆ ಮಾಹಿತಿ ● ಶಾಸಕ ಡಾ.ಮಂಥರ್‌ಗೌಡ ಹೇಳಿಕೆ



ಮಡಿಕೇರಿಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಶಾಸಕ ಡಾ.ಮಂಥರ್‌ಗೌಡ, ಜಿಲ್ಲಾಧಿಕಾರಿ ವೆಂಕಟ್ ರಾಜಾ ಕಾಫಿ ದಸರಾ ಲೋಗೋ ಬಿಡುಗಡೆಗೊಳಿಸಿದರು.

ಮಡಿಕೇರಿ, ಅ.2–ಮಡಿಕೇರಿ ದಸರಾದಲ್ಲಿ ಈ ವರ್ಷದಿಂದ ಕಾಫಿ ದಸರಾ ಎಂಬ ವಿನೂತನ ಕಾರ್ಯಕ್ರಮ ಜಾರಿಗೊಳಿಸಲಾಗುತ್ತಿದ್ದು, ಅ.6 ಮತ್ತು 7ರಂದು ನಡೆಯುವ ಕಾಫಿ ದಸರಾದಲ್ಲಿ ಕಾಫಿ ಮತ್ತು ಇತರೆ ಕೃಷಿ ಸಂಬಂಧಿಸಿದಂತೆ ಅನೇಕ ಮಾಹಿತಿ ರೈತರಿಗೆ ದೊರಕಲಿದೆ ಎಂದು ಶಾಸಕ ಡಾ.ಮಂಥರ್‌ಗೌಡ ತಿಳಿಸಿದರು.

ನಗರದಲ್ಲಿ ನಡೆದ ಕಾಫಿ ದಸರಾ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಮೊದಲ ಬಾರಿಗೆ ಆಯೋಜಿಸುವ ಕಾಫಿ ದಸರಾಕ್ಕೆ ಕಾಫಿ ಮಂಡಳಿ, ಕರ್ನಾಟಕ ಹಾಗೂ ಕೊಡಗು ಪ್ಲಾಂಟರ್ಸ್ ಅಸೋಸಿಯೇಷನ್ ಸೇರಿದಂತೆ ಕಾಫಿ ವಲಯದಿಂದ ಉತ್ತಮ ಸ್ಪಂದನ ದೊರಕಿದೆ. ಈಗಾಗಲೇ 32 ಮಳಿಗೆಗಳು ಭರ್ತಿಯಾಗಿದ್ದು, ಕಾಫಿ, ಹೈನುಗಾರಿಕೆ, ಬಿದಿರು, ತೋಟಗಾರಿಕಾ ಬೆಳೆ, ಯಂತ್ರೋಪಕರಣಗಳಿಗೆ ಸಂಬಂಧಿಸಿದಂತೆ ಸಮಗ್ರ ಮಾಹಿತಿ ನೀಡಲಾಗುವುದು. ತೋಟಗಾರಿಕೆ, ಕೃಷಿ, ಮೀನುಗಾರಿಕೆ, ಪಶುಪಾಲನೆ ಇಲಾಖೆ, ಚೆಟ್ಟಳ್ಳಿ ತೋಟಗಾರಿಕಾ ಸಂಶೋಧನಾ ಕೇಂದ್ರ ಸೇರಿದಂತೆ ವಿವಿಧ ಇಲಾಖೆಗಳ ಮಳಿಗೆಗಳು ಅ.6 ಮತ್ತು 7ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆವರೆಗೆ ತೆರೆದಿರುತ್ತವೆ ಎಂದರು.

ಅ.6ರಂದು ಬೆಳಗ್ಗೆ 10ಕ್ಕೆ ಕೃಷಿ ಸಚಿವ ಚೆಲುವರಾಯಸ್ವಾಮಿ ಗಾಂಧಿ ಮೈದಾನದಲ್ಲಿ ಕಾಫಿ ದಸರಾ ಉದ್ಘಾಟಿಸಲಿದ್ದು, 11 ಗಂಟೆಗೆ ಕಲಾ ಸಂಭ್ರಮ ವೇದಿಕೆಯಲ್ಲಿ ಕಾಫಿ ಮತ್ತು ಕೃಷಿ ಸಂಬಂಧಿತ ವಿಚಾರ ಸಂಕಿರಣ ನಡೆಯಲಿವೆ. ಭಾರತೀಯ ಕಾಫಿ ಮಂಡಳಿ ಅಧ್ಯಕ್ಷ ದಿನೇಶ್ ದೇವವೃಂದ ಮತ್ತಿತರರು ಪಾಲ್ಗೊಳ್ಳಲಿದ್ದಾರೆ. ಅ.7ರಂದು ನಡೆಯುವ ಕಾರ್ಯಕ್ರಮದಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಜಿಲ್ಲೆಯ 7 ಸಾಧಕ ಕೃಷಿಕರನ್ನು ಸನ್ಮಾನಿಸಲಿದ್ದಾರೆ ಎಂದರು.

ಕಾಫಿ ದಸರಾ ಸಂಚಾಲಕ ಹೆಚ್.ಟಿ.ಅನಿಲ್ ಮಾತನಾಡಿ, 11 ವರ್ಷದ ಹಿಂದೆ ದಸರಾಕ್ಕೆ ಮಕ್ಕಳ ದಸರಾ, 7 ವರ್ಷದ ಹಿಂದೆ ಮಹಿಳಾ ದಸರಾ, 5 ವರ್ಷದ ಮೊದಲು ಜಾನಪದ ದಸರಾ ಸೇರ್ಪಡೆಯಾಯಿತು. ಇದೀಗ ಕಾಫಿ ದಸರಾದ ಮೂಲಕ ನಾಡ ಹಬ್ಬದಲ್ಲಿ ಕೃಷಿಕರಿಗೂ ಪ್ರಯೋಜನಕಾರಿ ಮಾಹಿತಿ ಲಭಿಸುತ್ತಿರುವುದು ಶ್ಲಾಘನೀಯ ಎಂದರು.

ಜಿಲ್ಲಾಧಿಕಾರಿಯಾದ ಮಡಿಕೇರಿ ದಸರಾ ಸಮಿತಿ ಅಧ್ಯಕ್ಷ ವೆಂಕಟ್ ರಾಜಾ ಮಾತನಾಡಿ, ಕಾರ್ಯಾಧ್ಯಕ್ಷ ಪ್ರಕಾಶ್ ಆಚಾರ್ಯ, ಪ್ರಧಾನ ಕಾರ್ಯದರ್ಶಿ ಬಿ.ವೈ.ರಾಜೇಶ್, ಖಜಾಂಚಿ ಅರುಣ್ ಶೆಟ್ಟಿ, ಕೊಡಗು ಪ್ಲಾಂಟರ್ಸ್ ಅಸೋಷಿಯೇಷನ್ ಅಧ್ಯಕ್ಷ ನಂದಾಬೆಳ್ಯಪ್ಪ, ನಿರ್ದೇಶಕ ಕೆ.ಕೆ.ವಿಶ್ವನಾಥ್, ಕಾರ್ಯದರ್ಶಿ ಬೆಳ್ಯಪ್ಪ, ಕರ್ನಾಟಕ ಪ್ಲಾಂಟರ್ಸ್ ಅಸೋಷಿಯೇಷನ್ ಅಧ್ಯಕ್ಷ ಕೆ.ರಾಜೀವ್, ಕಾಫಿ ಮಂಡಳಿ ಉಪ ನಿರ್ದೇಶಕರು, ತೋಟಗಾರಿಕೆ, ಕೃಷಿ, ಕೈಗಾರಿಕೆ, ಪಶುಪಾಲನಾ ಇಲಾಖೆ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಇದೇ ವೇಳೆ ಶಾಸಕ ಡಾ.ಮಂಥರ್‌ಗೌಡ, ಜಿಲ್ಲಾಧಿಕಾರಿ ವೆಂಕಟ್ ರಾಜಾ ಕಾಫಿ ದಸರಾ ಲೋಗೋ ಬಿಡುಗಡೆಗೊಳಿಸಿದರು.

ಇಂದು ದಸರಾ ಕರಗ ಉತ್ಸವಕ್ಕೆ ಚಾಲನೆ



ಮಡಿಕೇರಿ, ಅ.2–ಐತಿಹಾಸಿಕ ಹಿನ್ನೆಲೆ ಹೊಂದಿರುವ ಮಡಿಕೇರಿ ದಸರಾ ಶಕ್ತಿ ದೇವತೆಗಳ ಕರಗ ಉತ್ಸವಕ್ಕೆ ಗುರುವಾರ ಸಾಂಪ್ರದಾಯಿಕವಾಗಿ ಚಾಲನೆ ದೊರೆಯಲಿದೆ.

ನಗರದ ಪಂಪಿನಕೆರೆಯಲ್ಲಿ 4 ಶಕ್ತಿ ದೇವತೆಗಳಾದ ಶ್ರೀ ಕುಂದುರುಮೊಟ್ಟೆ ಚೌಟಿ ಮಾರಿಯಮ್ಮ, ಶ್ರೀ ದಂಡಿನ ಮಾರಿಯಮ್ಮ, ಶ್ರೀ ಕಂಚಿ ಕಾಮಾಕ್ಷಿಯಮ್ಮ ಮತ್ತು ಶ್ರೀ ಕೋಟೆ ಮಾರಿಯಮ್ಮ ಕರಗಗಳಿಗೆ ವಿಶೇಷ ಪೂಜೆ ಸಲ್ಲಿಸುವ ಮೂಲಕ ಮಡಿಕೇರಿ ದಸರಾಕ್ಕೆ ಅಧಿಕೃತ ಚಾಲನೆ ಸಿಗಲಿದೆ.

ಅ.3ರ ಮಧ್ಯಾಹ್ನ 2.30ಕ್ಕೆ ಆಯಾಯ ದೇವಾಲಯಗಳಿಂದ ವಾದ್ಯಗೋಷ್ಠಿಯೊಂದಿಗೆ ಶಕ್ತಿ ದೇವತೆಗಳ ಸಹಿತ ಕರಗ ದೇವಾಲಯ ಸಮಿತಿ ಪ್ರಮುಖರು ಪಂಪಿನಕೆರೆಗೆ ತೆರಳಿ ಬಳಿಕ ಶಾಸ್ತ್ರೋಕ್ತವಾಗಿ ಪೂಜೆ ಸಲ್ಲಿಸಿ ಕರಗ ಕಟ್ಟಲು ಪ್ರಾರಂಭಿಸುತ್ತಾರೆ. ಸಂಜೆ 6 ಗಂಟೆ ಬಳಿಕ ಕರಗಗಳು ವಿಶೇಷ ಪೂಜೆ ಸ್ವೀಕರಿಸಿ ಪಂಪಿನ ಕೆರೆಯಿಂದ ಪ್ರದಕ್ಷಿಣೆ ಹೊರಡಲಿವೆ.

ಈ ಸಂದರ್ಭ ಜಿಲ್ಲಾ ಉಸ್ತುವಾರಿ ಸಚಿವ ಬೋಸರಾಜು, ಜಿಲ್ಲಾಧಿಕಾರಿ ಹಾಗೂ ನಗರ ದಸರಾ ಸಮಿತಿ ಅಧ್ಯಕ್ಷ ವೆಂಕಟ್ ರಾಜಾ, ಶಾಸಕರಾದ ಡಾ.ಮಂಥರ್‌ಗೌಡ, ಎ.ಎಸ್.ಪೊನ್ನಣ್ಣ, ವಿಧಾನಪರಿಷತ್ ಸದಸ್ಯ ಸುಜಾ ಕುಶಾಲಪ್ಪ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ದಸರಾ ಸಮಿತಿ ಕಾರ್ಯಾಧ್ಯಕ್ಷ ಪ್ರಕಾಶ್ ಆಚಾರ್ಯ, ನಗರಸಭೆ ಪೌರಾಯುಕ್ತ ರಮೇಶ್, ದಶಮಂಟಪ ಸಮಿತಿ ಅಧ್ಯಕ್ಷ ಜಗದೀಶ್ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

ಏಪ್ರಿಲ್‌ನಲ್ಲಿ ಕೊಡವ ಕುಟುಂಬಗಳ ಬಾಳೆಕುಟ್ಟಿರ ಕ್ರೀಡಾಕೂಟ



ಸುದ್ದಿಗೋಷ್ಠಿಯಲ್ಲಿ ಕ್ರೀಡಾಕೂಟದ ಅಧ್ಯಕ್ಷ ಬಾಳೆಕುಟ್ಟಿರ ಮಂದಣ್ಣ ಮಾತನಾಡಿದರು.

ವಿರಾಜಪೇಟೆ, ಅ.2–ಕೊಡವ ಕುಟುಂಬಗಳ ನಡುವಿನ ಬಾಳೆಕುಟ್ಟಿರ ಕಪ್–2025 ಟಗ್ ಆಫ್ ವಾರ್ ಕ್ರೀಡಾಕೂಟವನ್ನು ಮುಂದಿನ ಏಪ್ರಿಲ್‌ನಲ್ಲಿ ಅರಮೇರಿ ಕಳಂಚೇರಿ ವಿದ್ಯಾಪೀಠದ ಮೈದಾನದಲ್ಲಿ ಆಯೋಜಿಸಲಾಗಿದೆ ಎಂದು ಕ್ರೀಡಾಕೂಟದ ಅಧ್ಯಕ್ಷ ಬಾಳೆಕುಟ್ಟಿರ ಮಂದಣ್ಣ ತಿಳಿಸಿದರು.

ವಿರಾಜಪೇಟೆ ಪ್ರೆಸ್‌ಕ್ಲಬ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕದನೂರು ಗ್ರಾಮ ಪಂಚಾಯಿತಿ ವ್ಯಾಪ್ತಿ ಮೈತಾಡಿ ಹಾಗೂ ಅರಮೇರಿ ಗ್ರಾಮ ಜಂಟಿಯಾಗಿ ಸುಮಾರು 9ನೇ ತಲೆಮಾರಿನ ಸದಸ್ಯರು ಒಗ್ಗೂಡಿ ಕೊಡವ ಟಗ್ ಆಫ್ ವಾರ್ ಅಕಾಡೆಮಿ ಸಹಯೋಗದಲ್ಲಿ 4ನೇ ವರ್ಷದ ಕ್ರೀಡಾಕೂಟ ನಡೆಸಲಾಗುತ್ತಿದೆ ಎಂದರು. ಕುಟುಂಬದ ಸದಸ್ಯರು ಹಾಗೂ ಎರಡು ಗ್ರಾಮಗಳ ಗ್ರಾಮಸ್ಥರನ್ನು ಒಗ್ಗೂಡಿಸಿ ಪ್ರೀತಿ, ವಿಶ್ವಾಸ, ಸಾಮರಸ್ಯ ಹಾಗೂ ಸಹಬಾಳ್ವೆ ನಡೆಸುವ ಉದ್ದೇಶದಿಂದ ಈ ಕ್ರೀಡಾಕೂಟ ಆಯೋಜಿಸಲಾಗಿದೆ ಎಂದು ಹೇಳಿದರು.

ಕ್ರೀಡಾ ಸಂಚಾಲಕ ಬಾಳೆಕುಟ್ಟಿರ ದಿನಿ ಬೋಪಯ್ಯ ಮಾತನಾಡಿ, ಕೊಡಗು ಜಿಲ್ಲೆಯಲ್ಲಿ ಹಲವಾರು ಕ್ರೀಡಾಕೂಟಗಳು ನಡೆಯುತ್ತದೆ. ಆದರೆ, ಕುಟುಂಬದ ಸದಸ್ಯರೆಲ್ಲ ಸೇರಿ ಕ್ರೀಡಾಕೂಟದಲ್ಲಿ ಭಾಗವಹಿದರೆ ಉತ್ಸಾಹ ಹೆಚ್ಚುತ್ತದೆ. ಕೊಡವ ಕುಟುಂಬಗಳೇ ಪಾಲ್ಗೊಳ್ಳುವುದರಿಂದ 4ನೇ ವರ್ಷದ ಕ್ರೀಡಾಕೂಟಕ್ಕೆ ಚಾಲನೆ ನೀಡಲಾಗುತ್ತಿದೆ. ಪೊನ್ನೊಲತಂಡ (ನಾಪೋಕ್ಲು), ಚಟ್ಟಂಗಡ (ಟಿ.ಶೆಟ್ಟಿಗೇರಿ), ಬೊಟ್ಟೋಳಂಡ (ನಾಪೋಕ್ಲು), ಬಾಳೆಕುಟ್ಟಿರ ಕುಟುಂಬಗಳ ಪಂದ್ಯಾವಳಿಯನ್ನು ಅರಮೇರಿಯಲ್ಲಿ ನಡೆಸಲಾಗುವುದು ಎಂದರು.

ಖಜಾಂಚಿ ರಾಯ್ ಕಾರ್ಯಪ್ಪ ಮಾತನಾಡಿ, ಅ.5ರಂದು ವಿರಾಜಪೇಟೆಯ ಮಲಬಾರ್ ರಸ್ತೆಯ ಖಾಸಗಿ ಸಭಾಂಗಣದಲ್ಲಿ ಟಗ್ ಆಫ್ ವಾರ್ ಕ್ರೀಡಾಕೂಟದ ಲೋಗೋ ಬಿಡುಗಡೆಗೊಳಿಸಲಾಗುವುದು. ಅರಮೇರಿ ಕಳಂಚೇರಿ ಮಠಾಧ್ಯಕ್ಷ ಶ್ರೀ ಶಾಂತಮಲ್ಲಿಕಾರ್ಜುನಸ್ವಾಮೀಜಿ ಲೋಗೋ ಬಿಡುಗಡೆಗೊಳಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕ್ರೀಡಾಕೂಟದ ಅಧ್ಯಕ್ಷ ಬಾಳೆಕುಟ್ಟಿರ ಮಂದಣ್ಣ ವಹಿಸಲಿದ್ದು, ಶಾಸಕ ಎ.ಎಸ್.ಪೊನ್ನಣ್ಣ, ವಿಧಾನ ಪರಿಷತ್ ಸದಸ್ಯ ಸುಜಾ ಕುಶಾಲಪ್ಪ, ಕೊಡವ ಟಗ್ ಆಫ್ ವಾರ್ ಅಕಾಡೆಮಿ ಅಧ್ಯಕ್ಷ ಪೊನ್ನೋಲ ತಂಡ ಕಿರಣ್ ಭಾಗವಹಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕ್ರೀಡಾಕೂಟದ ಸದಸ್ಯರಾದ ಗಣು ಕಾವೇರಪ್ಪ, ಸತ್ಯ ಉತ್ತಯ್ಯ ಇದ್ದರು.

ಜೆಮ್ಸಿ ಮೊಣ್ಣಪ್ಪ ನಿಧನ



ನಾಪೋಕ್ಲು, ಅ.2–ಸಮೀಪದ ಬಲ್ಲಮಾವಟ್ಟಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪೇರೂರು ಗ್ರಾಮದ ದಿವಂಗತ ಪೂಣಚ್ಚನವರ ಮಗ ಜೆಮ್ಸಿ ಮೊಣ್ಣಪ್ಪ(55) ಅನಾರೋಗ್ಯದಿಂದ ಮಂಗಳವಾರ ನಿಧನರಾದರು.

ಮೃತರು ತಾಯಿ ಶಾಂತಿ, ಪತ್ನಿ ಭಾರತಿ, ಪುತ್ರಿ ಶ್ರಾವ್ಯ ಸೇರಿದಂತೆ ಅಪಾರ ಬಂಧುಬಳಗವನ್ನು ಅಗಲಿದ್ದಾರೆ. ಬುಧವಾರ ಪೇರೂರು ಗ್ರಾಮದ ಸ್ವಗೃಹ ಆವರಣದಲ್ಲಿ ಅಂತ್ಯಕ್ರಿಯೆ ನಡೆಯಿತು.

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಹುಟ್ಟುಹಬ್ಬ ಹಿನ್ನೆಲೆ

ಚಿನಕುರಳಿಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ



ಚಿನಕುರಳಿಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಿತು.



> ಪ್ರತಿಯೊಬ್ಬರೂ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು. ಪ್ರಸ್ತುತ ಆರೋಗ್ಯ ಸೇವೆ ವ್ಯಾಪಾರೀಕರಣವಾಗುತ್ತಿರುವ ಹಿನ್ನೆಲೆಯಲ್ಲಿ ಸಂಘ ಸಂಸ್ಥೆಗಳು ಆಯೋಜಿಸುವ ಆರೋಗ್ಯ ಶಿಬಿರಗಳನ್ನು ಸದುಪಯೋಗ ಪಡಿಸಿಕೊಂಡು ಆರೋಗ್ಯ ಕಾಪಾಡಿಕೊಳ್ಳಬೇಕು.
> –ಸಿ.ಎಂ.ಕಾಳೇಗೌಡ, ಮಾಜಿ ಗ್ರಾಪಂ ಅಧ್ಯಕ್ಷ.

ಚಿನಕುರಳಿ: ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರ 61ನೇ ಹುಟ್ಟುಹಬ್ಬದ ಅಂಗವಾಗಿ ಗ್ರಾಮದಲ್ಲಿ ಬುಧವಾರ ಉಚಿತ ಬೃಹತ್ ಆರೋಗ್ಯ ತಪಾಸಣಾ ಶಿಬಿರ ನಡೆಯಿತು.

ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆ ಆವರಣದಲ್ಲಿ ಅಂತಾರಾಷ್ಟ್ರೀಯ ಲಯನ್ಸ್ ಸಂಸ್ಥೆ, ಲಯನ್ ಕ್ಲಬ್ ಆಫ್ ಬೆಂಗಳೂರು, ಡಾ.ಎಚ್.ಆರ್.ಚಂದ್ರಶೇಖರ್ ವಾಕ್ ಮತ್ತು ಶ್ರವಣ ಸಂಸ್ಥೆ ಹೆಣ್ಣೂರು, ಲಯನ್ಸ್ ಕ್ಲಬ್ ಆಫ್ ಫ್ರೆಂಚ್ ರಾಕ್ಸ್ ಪಾಂಡವಪುರ, ನಯನ ಕುಮಾರ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಮೈಸೂರು, ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಮೈಸೂರು ಇವರ ಸಹಯೋಗದಲ್ಲಿ ನಡೆದ ಆರೋಗ್ಯ ತಪಾಸಣಾ ಶಿಬಿರಕ್ಕೆ ಡೇರಿ ಅಧ್ಯಕ್ಷ ಸಿ.ಶಿವಕುಮಾರ್, ತಾಪಂ ಮಾಜಿ ಸದಸ್ಯ ಸಿ.ಎಸ್.ಗೋಪಾಲಗೌಡ ಚಾಲನೆ ನೀಡಿದರು.

ಶಿಬಿರದಲ್ಲಿ ವಾಕ್ ಮತ್ತು ಶ್ರವಣ ದೋಷ, ಬಿಪಿ, ಶುಗರ್, ಕೀಲು, ಮೂಳೆ, ಸ್ತ್ರೀರೋಗ, ಕಣ್ಣಿನ ತಪಾಸಣೆ ಹಾಗೂ ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಿಂದ ಇಸಿಜಿ, ಎಕೋ, ಬ್ರೆಸ್ಟ್ ಕ್ಯಾನ್ಸರ್, ರಿಜನಲ್ ಕ್ಯಾನ್ಸರ್ ಸೇರಿದಂತ ವಿವಿಧ ಸಾಮಾನ್ಯ ತಪಾಸಣೆ ನಡೆಸಲಾಯಿತು.

ಶಿಬಿರದಲ್ಲಿ ಚಿನಕುರಳಿ ಸೇರಿದಂತೆ ಸುತ್ತಮುತ್ತಲ ಗ್ರಾಮಗಳ 500ಕ್ಕೂ ಹೆಚ್ಚು ಮಂದಿ ಹಾಗೂ 300ಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿ ತಪಾಸಣೆಗೆ ಒಳಪಟ್ಟರು.

ಟಿಎಪಿಸಿಎಂಎಸ್ ನಿರ್ದೇಶಕ ರಾಮಕೃಷ್ಣೇಗೌಡ ಮಾತನಾಡಿ, ಮಾಜಿ ಸಚಿವ, ನಮ್ಮ ನಾಯಕ ಸಿ.ಎಸ್.ಪುಟ್ಟರಾಜು ಅವರ ಹುಟ್ಟುಹಬ್ಬ ಅಂಗವಾಗಿ ಗ್ರಾಮದಲ್ಲಿ ಉಚಿತ ಬೃಹತ್ ಆರೋಗ್ಯ ತಪಾಸಣೆ ಶಿಬಿರ ಏರ್ಪಡಿಸಲಾಗಿದೆ. ಶಿಬಿರದಲ್ಲಿ ನಯನ ಕುಮಾರ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಹಾಗೂ ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ಡಾ.ಎಚ್.ಆರ್.ಚಂದ್ರಶೇಖರ್ ವಾಕ್ ಮತ್ತು ಶ್ರವಣ ಸಂಸ್ಥೆ ವೈದ್ಯರು ಸಾರ್ವಜನಿಕರ ಆರೋಗ್ಯ ತಪಾಸಣೆ ನಡೆಸಿದ್ದಾರೆ. ಸಂಘ ಸಂಸ್ಥೆಗಳು ನಡೆಸುವ ಇಂತಹ ಆರೋಗ್ಯ ಶಿಬಿರಗಳನ್ನು ಸಾರ್ವಜನಿಕರು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ತಿಳಿಸಿದ ಅವರು, ಮಾಜಿ ಸಚಿವ ಪುಟ್ಟರಾಜು ಅವರಿಗೆ ತಾಯಿ ಚಾಮುಂಡೇಶ್ವರಿ ಆಯಸ್ಸು, ಆರೋಗ್ಯ, ಅಧಿಕಾರ ಕೊಟ್ಟು ಇನ್ನಷ್ಟು ಸಮಾಜಸೇವೆ ಮಾಡುವ ಶಕ್ತಿ ನೀಡಲೆಂದು ಹಾರೈಸುತ್ತೇನೆ ಎಂದರು.

ಶಿಬಿರದಲ್ಲಿ ಜಿಪಂ ಮಾಜಿ ಸದಸ್ಯ ಸಿ.ಅಶೋಕ್, ಗ್ರಾಪಂ ಅಧ್ಯಕ್ಷೆ ಗಾಯತ್ರಿ ಕುಮಾರ್, ಉಪಾಧ್ಯಕ್ಷ ಶ್ರೀನಿವಾಸ್, ಡೈರಿ ಉಪಾಧ್ಯಕ್ಷ ಸಿ.ಆರ್.ರಮೇಶ್, ಲಯನ್ಸ್ ಅಧ್ಯಕ್ಷ ಕರೀಗೌಡ, ಕಾರ್ಯದರ್ಶಿ ಪುಟ್ಟಬಸವೇಗೌಡ, ಖಜಾಂಚಿ ಡಾ.ಕೆ.ಆರ್.ಸ್ವಾಮಿಗೌಡ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಸಿ.ಪ್ರಕಾಶ್, ವಿಎಸ್‌ಎಸ್‌ಎನ್‌ಬಿ ಅಧ್ಯಕ್ಷ ಮಂಜುನಾಥ್, ನಿರ್ದೇಶಕ ಮೊಗ್ಗಣ್ಣಗೌಡ, ಮಾಜಿ ಅಧ್ಯಕ್ಷರಾದ ಇಮ್ತಿಯಾಜ್ ಪಾಷ, ಸಿ.ಎಂ.ಕಾಳೇಗೌಡ, ಮಾಜಿ ಸದಸ್ಯ ಸಿ.ಡಿ.ಮಹದೇವು ಸೇರಿದಂತೆ ಹಲವರಿದ್ದರು.

ಬೈಕ್‌ಗೆ ಕಾಡು ಹಂದಿ ಡಿಕ್ಕಿ: ಮಹಿಳೆ ಸಾವು

ಹಲಗೂರು: ಕಾಡು ಹಂದಿ ಅಡ್ಡಬಂದ ಪರಿಣಾಮ ಬೈಕ್ ಮಗುಚಿ ಮಹಿಳೆ ಸಾವನ್ನಪ್ಪಿರುವ ಘಟನೆ ನಂದಿಪುರದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಭವ್ಯ(26) ಸಾವನ್ನಪ್ಪಿದವರು. ಈಕೆ ಸಂಬಂಧಿಕರ ಮನೆಯಿಂದ ಸ್ವಗ್ರಾಮಕ್ಕೆ ಹೋಗುವ ವೇಳೆ ಬೈಕ್‌ಗೆ ಕಾಡು ಹಂದಿ ಅಡ್ಡ ಬಂದ ಪರಿಣಾಮ ದುರ್ಘಟನೆ ಸಂಭವಿಸಿದೆ.ಮಳವಳ್ಳಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ವಾರಸುದಾರರಿಗೆ ಶವ ಹಸ್ತಾಂತರಿಸಲಾಯಿತು. ಈ ಸಂಬಂಧ ಹಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಕ್ಕರೆ ನಾಡಲ್ಲಿ ಪಿತೃಪಕ್ಷ ಆಚರಣೆ

● ಗಾಂಧಿ ಜಯಂತಿ ಇದ್ದರೂ, ಪ್ರಾಣಿ ವಧೆಗೆ ಇರಲಿಲ್ಲ ನಿರ್ಬಂಧ ● ಪ್ರತಿ ಮನೆಯಲ್ಲೂ ಹಬ್ಬದೂಟ, ಹಿರಿಯರಿಗೆ ಎಡೆ ಇಟ್ಟು ನೈವೇದ್ಯ ● ಶ್ರೀರಂಗಪಟ್ಟಣದ ಕಾವೇರಿ ನದಿಯಲ್ಲಿ ಹಿರಿಯರಿಗೆ ಪಿತೃತರ್ಪಣ ● ಮೈಸೂರಿನ ಬ್ರಾಹ್ಮಣ ಸಭಾದಿಂದ ಹುತಾತ್ಮ ಯೋಧರಿಗೆ ಪಿಂಡಪ್ರಧಾನ

ಮಂಡ್ಯ, ಅ.2– ಮಂಡ್ಯ ಗ್ರಾಮೀಣ ಸೊಗಡಿನ ಹಬ್ಬವೆಂದೇ ಕರೆಯುವ ಮಹಾಲಯ ಅಮಾವಾಸ್ಯೆ (ಮಹಾನವಮಿ ಹಬ್ಬ)ಯನ್ನು ಬುಧವಾರ ಜಿಲ್ಲಾದ್ಯಂತ ಕುಟುಂಬದ ಪೂರ್ವಿಕರಿಗೆ ಎಡೆ ಇಟ್ಟು, ಪೂಜೆ ಸಲ್ಲಿಸಿ ಪಿತೃ ತರ್ಪಣ ನೆರವೇರಿಸಲಾಯಿತು.

ಎಡೆ ಇಡುವ ಕಾರ್ಯ ಸಂಜೆ 6 ಗಂಟೆ ಮೇಲೆ ಆರಂಭವಾಗುವ ಹಿನ್ನೆಲೆಯಲ್ಲಿ ಬೆಳಗ್ಗೆಯಿಂದಲೇ ಜನ ಪೂಜಾ ಸಾಮಗ್ರಿಗಳು, ಅಡುಗೆ ತಿನಿಸುಗಳ ಖರೀದಿಸುತ್ತಿದ್ದ ದೃಶ್ಯ ಕಂಡು ಬಂತು. ಅದರಲ್ಲೂ ಗ್ರಾಮೀಣ ಭಾಗದಲ್ಲಿ ಹೆಚ್ಚಾಗಿ ಹಬ್ಬ ಆಚರಿಸುವ ಹಿನ್ನೆಲೆಯಲ್ಲಿ ಗ್ರಾಮೀಣ ಭಾಗದ ಸಾವಿರಾರು ಜನರು ಮಂಡ್ಯ ನಗರದ ಮಾರುಕಟ್ಟೆಗೆ ಲಗ್ಗೆ ಇಟ್ಟಿದ್ದ ದೃಶ್ಯ ಸಹಜವಾಗಿ ಕಂಡು ಬಂತು.

ಪ್ರಾಣಿವಧೆಗಿಲ್ಲ ನಿರ್ಬಂಧ: ಮಹಾಲಯ ಅಮವಾಸ್ಯೆ ಹಬ್ಬದ ಪ್ರಮುಖ ಆಕರ್ಷಣೆ ಮಾಂಸದೂಟ. ಹಬ್ಬ ಆಚರಿಸುವ ಶೇ.95 ರಷ್ಟು ಈ ಭಾಗದ ಜನ ಪೂರ್ವಿಕರಿಗೆ ಮಾಂಸದಡಿಗೆಯನ್ನೇ ಎಡೆಗೆ ಇಡುತ್ತಾರೆ. ಆದರೆ ಇಂದು ಗಾಂಧಿ ಜಯಂತಿ ಇದ್ದಿದ್ದರಿಂದ ಪ್ರಾಣಿವಧೆಗೆ ಸಹಜವಾಗಿಯೇ ನಿರ್ಬಂಧ ಇರುತ್ತದೆ. ಆದರೆ ಗಾಂಧಿ ಜಯಂತಿಯಂದೇ ಮಹಾಲಯ ಅಮವಾಸ್ಯೆಯೂ ಬಂದಿದ್ದರಿಂದ ಮಂಡ್ಯ ಜಿಲ್ಲಾಡಳಿತ ಪ್ರಾಣಿವಧೆ ನಿರ್ಬಂಧ ವಿಧಿಸುವ ಗೋಜಿಗೆ ಹೋಗಿರಲಿಲ್ಲ.

ಬದಲಿಗೆ ಜಿಲ್ಲಾದ್ಯಂತ ಮದ್ಯ ಮಾರಾಟಕ್ಕೆ ನಿರ್ಬಂಧ ವಿಧಿಸಿ, ಮಾಂಸದಗಂಡಿಗಳ ತೆರವಿಗೆ ಅನುವು ಮಾಡಿಕೊಡಲಾಗಿತ್ತು. ಆದ್ದರಿಂದ ಜಿಲ್ಲೆಯ ಎಲ್ಲಾ ಮಟನ್ ಮತ್ತು ಚಿಕನ್ ಸ್ಟಾಲ್‌ಗಳು ತೆರೆದಿದ್ದರೆ, ಗ್ರಾಮೀಣ ಜನರು ಕುರಿ, ಮೇಕೆಗಳನ್ನು ಕುಯ್ಯುತ್ತಿದ್ದ ದೃಶ್ಯಗಳು ಕಂಡು ಬಂದವು. ಜೊತೆಗೆ ಹಬ್ಬದ ಕಾರಣ ಕೋಳಿ ಮತ್ತು ಆಡು, ಮೇಕೆ ಮಾಂಸದ ದರ ಸ್ವಲ್ಪ ಹೆಚ್ಚುವಾಗಿತ್ತು ಅಲ್ಲದೇ ತರಕಾರಿ, ಹೂವು, ಇನ್ನಿತರೆ ಸಾಮಗ್ರಿಗಳ ಬೆಲೆ ಸಹ ಹೆಚ್ಚಳಗೊಂಡಿತ್ತು.

ಇನ್ನು ಸಂಜೆಯಾಗುತ್ತಿದ್ದಂತೆ ಪ್ರತಿ ಮನೆಯಲ್ಲೂ ಬಗೆ ಬಗೆಯ ಅಡುಗೆ ತಯಾರಿಸಿ, ಪೂರ್ವಿಕರಿಗೆ ನೈವೇದ್ಯ ಇಟ್ಟು, ಹೊಸ ಬಟ್ಟೆ, ಸಿಹಿ ಹಾಗೂ ಖಾರದ ತಿನಿಸುಗಳು, ಅವರು ಬಳಕೆ ಮಾಡುತ್ತಿದ್ದ ವಸ್ತುಗಳನ್ನಿಟ್ಟು, ಮನೆ ಮಂದಿಯಲ್ಲಾ ಪೂರ್ವಿಕರಿಗೆ ಪೂಜೆ ಸಲ್ಲಿಸಿ, ಹಬ್ಬದೂಟ ಮಾಡಿದರು.

ಕಾವೇರಿ ನದಿ ತಟದಲ್ಲಿ ಪಿತೃತರ್ಪಣ: ಮಹಾಲಯ ಅಮಾವಾಸ್ಯೆ ಹಿನ್ನೆಲೆಯಲ್ಲಿ ಶ್ರೀರಂಗಪಟ್ಟಣದ ಕಾವೇರಿ ನದಿ ತಟದಲ್ಲಿ ಪಿತೃಪಕ್ಷದ ಸಂಭ್ರಮ ಮನೆ ಮಾಡಿತ್ತು. ಕಾವೇರಿ ನದಿ ತಟದಲ್ಲಿ ಭಕ್ತರು ತುಂಬಿ ತುಳುಕುತ್ತಿದ್ದರು ಅಲ್ಲದೇ ಅಗಲಿದ ತಮ್ಮ ಕುಟುಂಬದ ಪೂರ್ವಜರಿಗೆ ಕಾವೇರಿ ನದಿ ತಟದಲ್ಲಿ ಪಿತೃತರ್ಪಣ ಬಿಟ್ಟರು. ಪಿಂಡಪ್ರಧಾನ ಮಾಡಿ ತಿಲತರ್ಪಣ ಅರ್ಪಿಸಿ ಕುಟುಂಬದ ಪೂರ್ವಜರ ಸದ್ಗತಿಗೆ ಮೊರೆ ಹೋಗುತ್ತಿದ್ದರು. ಪಿತೃಪಕ್ಷದ ಅಮಾವಾಸ್ಯೆ ದಿನ ಪಿಂಡ ಪ್ರಧಾನ ಮಾಡಿ ತಿಲ ತರ್ಪಣ ಅರ್ಪಿಸಿದರೆ ಸದ್ಗತಿ ಪ್ರಾಪ್ತಿ ಪ್ರತೀತಿ ಇದ್ದು, ಈ ಹಿನ್ನೆಲೆಯಲ್ಲಿ ಕಾವೇರಿ ನದಿ ತಟದ ಪಶ್ಚಿಮ ವಾಹಿನಿ, ಸ್ನಾನಘಟ್ಟ ಸಂಗಮ, ಘೋಸಾಯ್ ಘಾಟ್‌ನಲ್ಲಿ ವೈದಿಕ ಶ್ರದ್ಧಾ ಕಾರ್ಯ ನಡೆಯಿತು. ರಾಜ್ಯ ಹಾಗೂ ಹೊರ ರಾಜ್ಯದ ಹೆಚ್ಚಿನ ಜನರು ಪಿಂಡ ಪ್ರಧಾನಕ್ಕೆ ಶ್ರೀರಂಗಪಟ್ಟಣಕ್ಕೆ ಬಂದ ಕಾರಣ ಪಟ್ಟಣದಲ್ಲಿ ವಾಹನ ದಟ್ಟಣೆ ಹೆಚ್ಚಾಗಿತ್ತು. ಕಾವೇರಿ ನದಿ ತಟದಲ್ಲಿ ಸಾಲು ವಾಹನಗಳು ನಿಂತು ಪಾರ್ಕಿಂಗ್‌ಗಾಗಿ ಪರದಾಟ ನಡೆಸುವ ಪರಿಸ್ಥಿತಿ ಉಂಟಾಗಿತ್ತು.



ಹುತಾತ್ಮ ಯೋಧರಿಗೆ ಶ್ರೀರಂಗಪಟ್ಟಣದಲ್ಲಿ ಪಿತೃತರ್ಪಣ: ಇದೇ ಮೊದಲ ಬಾರಿಗೆ ಹುತಾತ್ಮ ಯೋಧರಿಗೆ ಪಿಂಡ ಪ್ರಧಾನ ಮಾಡಲಾಯಿತು. ವಿವಿಧ ಸಂಘಟನೆಗಳ ಸಹಯೋಗದಲ್ಲಿ ಶ್ರೀರಂಗಪಟ್ಟಣದ ಪಶ್ಚಿಮ ವಾಹಿನಿಯ ಕಾವೇರಿ ನದಿ ತಟದಲ್ಲಿ ಶ್ರದ್ಧಾಭಕ್ತಿಯಿಂದ ಪೂಜೆ ನೆರವೇರಿಸಿ ವಿವಿಧ ದುರ್ಘಟನೆಗಳಲ್ಲಿ ಸಾವೀಗೀಡಾದ ಹುತಾತ್ಮ ವೀರಯೋಧರಿಗೆ ಪೂಜೆ ವೇಳೆ ತಿಲತರ್ಪಣ ಬಿಡಲಾಯಿತು.

ಮೈಸೂರು ಜಿಲ್ಲಾ ಬ್ರಾಹ್ಮಣ ಮಹಾಸಭಾ, ದತ್ತಸೇನೆ ಮೈಸೂರು, ಅರಿವು ಸಂಸ್ಥೆ ಮೈಸೂರು ಇವರ ಸಹಯೋಗದಲ್ಲಿ ಪಿಂಡ ಪ್ರಧಾನ ನೆರವೇರಿದರೆ, ಪಶ್ಚಿಮ ವಾಹಿನಿಯ ಕಾವೇರಮ್ಮ ಶ್ರದ್ಧಾ ಕೇಂದ್ರದಲ್ಲಿ ವೈದಿಕ ಪೂಜಾ ಕೈಂಕರ್ಯ ನಡೆಯಿತು.ಹುತಾತ್ಮ ಯೋಧರ ಫೋಟೋ ಇಟ್ಟು ಪೂಜೆ ಸಲ್ಲಿಸಿ ವೈದಿಕ ಶ್ರದ್ಧಾ ಪೂಜೆ ಸಲ್ಲಿಸಲಾಯಿತು. ಪಶ್ಚಿಮ ವಾಹಿನಿಯ ವೈದಿಕ ಕ್ರಿಯಾ ಕರ್ಮದ ಅರ್ಚಕ ಶೇಷಾದ್ರಿ ಅಯ್ಯರ್ ನೇತೃತ್ವದಲ್ಲಿ ಪೂಜಾ ಕೈಂಕರ್ಯ ನಡೆದವು.

ಸಿದ್ದಲಿಂಗೇಶ್ವರಸ್ವಾಮಿಗೆ ಕಜ್ಜಾಯ ಅಲಂಕಾರ: ಪಿತೃಪಕ್ಷದ ಮಹಾಲಯ ಅಮಾವಾಸ್ಯೆ ಹಿನ್ನಲೆಯಲ್ಲಿ ಕೆ.ಆರ್.ಪೇಟೆಯ ಗವಿಮಠದ ಶ್ರೀ ಸ್ವತಂತ್ರ ಸಿದ್ಧಲಿಂಗೇಶ್ವರ ಸ್ವಾಮಿ ದೇಗುಲದ ಗವಿಮಠದ ಸ್ವತಂತ್ರ ಸಿದ್ಧಲಿಂಗೇಶ್ವರ ಸ್ವಾಮಿಗೆ ಕಜ್ಜಾಯ ಅಲಂಕಾರ ಮಾಡಲಾಗಿತ್ತು. ಗವಿ ಮಠದ ಪೀಠಾಧ್ಯಕ್ಷ ಚನ್ನವೀರ ಸ್ವಾಮೀಜಿಗಳ ನೇತೃತ್ವದಲ್ಲಿ 3 ಸಾವಿರ ಕಜ್ಜಾಯ ಬಳಸಿ ದೇವರಿಗೆ ವಿಶೇಷ ಅಲಂಕಾರ ಮಾಡಿ, ದೇವಾಲಯದ ಮುಖ್ಯದ್ವಾರದಿಂದ ಗರ್ಭ ಗುಡಿವರೆಗೆ ವಿವಿಧ ಪುಷ್ಪಗಳು ಹಾಗೂ ಕಜ್ಜಾಯದಿಂದ ಅಲಂಕಾರಗೊಳಿಸಲಾ ಗಿತ್ತು. ಅಮವಾಸ್ಯೆ ಅಂಗವಾಗಿ ದೇಗುಲದಲ್ಲಿ ಪೂಜಾ ಕೈಂಕರ್ಯ ಅದ್ದೂರಿಯಾಗಿ ನೆರವೇರಿತು. ವಿಶೇಷ ಅಲಂಕಾರದಲ್ಲಿನ ದೇವರನ್ನು ಕಂಡು ಭಕ್ತರು ಕಣ್ತುಂಬಿಕೊಂಡರು.

ಚಾ.ನಗರದಲ್ಲಿ ಅರ್ಥಪೂರ್ಣ ಗಾಂಧಿ ಜಯಂತಿ



ಚಾಮರಾಜನಗರ ಹೊರವಲಯದ ಯಡಬೆಟ್ಟದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಗಾಂಧಿ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು.

ಚಾಮರಾಜನಗರ: ನಗರದ ಹೊರವಲಯದ ಯಡಬೆಟ್ಟದ (ಯಡಪುರ) ಗಾಂಧಿ ಭವನದಲ್ಲಿ ಬುಧವಾರ ರಾಷ್ಟ್ರಪಿತ ಮಹಾತ್ಮ ಗಾಂಧಿ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಆಸ್ಪತ್ರೆ ಪಕ್ಕದ ಗಾಂಧಿ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ ಗಾಂಧಿ ಜಯಂತಿ ಕಾರ್ಯಕ್ರಮದಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಗಾಂಧಿ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ನಂತರ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಗಾಂಧಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಭಾವಚಿತ್ರಗಳಿಗೆ ಪುಷ್ಪಾರ್ಚನೆ ನೆರವೇರಿಸಿದರು.

ಬಳಿಕ ಮಾತನಾಡಿದ ಶಾಸಕರು, ಮಹಾತ್ಮ ಗಾಂಧಿ ಶಾಂತಿಧೂತ. ಅವರು ಅಳವಡಿಸಿಕೊಂಡಿದ್ದ ಸತ್ಯ, ಅಹಿಂಸೆಯ ಅವಿರತ ಹೋರಾಟದ ಮೂಲಕ ನಮಗಿಂದು ಸ್ವಾತಂತ್ರ್ಯ ಲಭಿಸಿದೆ ಎಂದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಆಯೋಜಿಸಿದ್ದ ಜಿಲ್ಲಾ ಮಟ್ಟದ ಬಾಪೂಜಿ ಪ್ರಬಂಧ ಸ್ಪರ್ಧೆಯ ಪ್ರೌಢಶಾಲಾ ವಿಭಾಗದಲ್ಲಿ ನಂದನ ಪ್ರಥಮ, ಸಮೀಕ್ಷಾ ದ್ವಿತೀಯ, ಪಿ.ಐಶ್ವರ್ಯ ತೃತೀಯ ಹಾಗೂ ಪದವಿಪೂರ್ವ ಶಿಕ್ಷಣ ವಿಭಾಗದಲ್ಲಿ ಎಂ.ಶುಭ ಪ್ರಥಮ, ಪ್ರೀತಮ್ ವೈ.ಪೋಪತಾರ್ ದ್ವಿತೀಯ, ಎಂ.ರಂಜಿತಾ ತೃತೀಯ ಮತ್ತು ಪದವಿ, ಸ್ನಾತಕೋತ್ತರ ಪದವಿ ವಿಭಾಗದಲ್ಲಿ ಸಿಂಚನಾ ಪ್ರಥಮ, ಪಿ.ಜ್ಯೋತಿ ದ್ವಿತೀಯ, ಸಫೀನಾಜ್ ತೃತೀಯ ಬಹುಮಾನ ಪಡೆದರು. ನಂತರ ವಿಜೇತ ವಿದ್ಯಾರ್ಥಿಗಳಿಗೆ ನಗದು ಬಹುಮಾನ ಹಾಗೂ ಪ್ರಮಾಣ ಪತ್ರಗಳನ್ನು ಗಣ್ಯರು ವಿತರಿಸಿದರು.

ಗಾಂಧಿ ಜಯಂತಿ ಅಂಗವಾಗಿ ಗಾಂಧಿಯವರಿಗೆ ಪ್ರಿಯವಾಗಿದ್ದ ಭಜನೆಯನ್ನು ಯಳಂದೂರು ತಾಲೂಕಿನ ಮಾಂಬಳ್ಳಿ ಅರುಣ್ ಕುಮಾರ್ ಮತ್ತು ತಂಡದವರು ನಡೆಸಿಕೊಟ್ಟರು. ಇದೇ ವೇಳೆ ಪುಟಾಣಿಗಳಿಂದ ಗಾಂಧಿ, ಅಂಬೇಡ್ಕರ್ ಸೇರಿದಂತೆ ರಾಷ್ಟ್ರನಾಯಕರ ಹಾಗೂ ಸ್ವಾತಂತ್ರ್ಯ ಹೋರಾಟಗಾರರ ವೇಷಭೂಷಣ ಪ್ರದರ್ಶನ ಗಮನ ಸೆಳೆಯಿತು. ಕಾರ್ಯಕ್ರಮಕ್ಕೂ ಮೊದಲು ಗಾಂಧಿ ಭವನದ ಆವರಣ ಹಾಗೂ ವೈದ್ಯಕೀಯ ವಿಜ್ಞಾನ ಸಂಸ್ಥೆ ಆಸ್ಪತ್ರೆ ಆವರಣದಲ್ಲಿ ಗಣ್ಯರು ಹಾಗೂ ವಿದ್ಯಾರ್ಥಿಗಳು ಶ್ರಮದಾನ ನಡೆಸಿದರು. ಕಾರ್ಯಕ್ರಮದಲ್ಲಿ ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಮುಡಾ ಅಧ್ಯಕ್ಷ ಮಹಮದ್ ಅಸ್ಗರ್ ಮುನ್ನ, ನಗರಸಭೆ ಅಧ್ಯಕ್ಷ ಎಸ್.ಸುರೇಶ್, ಶಿವಪುರ ಗ್ರಾಪಂ ಅಧ್ಯಕ್ಷೆ ಮಹದೇವಮ್ಮ, ಜಿಲ್ಲಾಧಿಕಾರಿ ಶಿಲ್ಪನಾಗ್, ಜಿಪಂ ಸಿಇಓ ಮೋನಾ ರೋತ್, ಎಸ್‌ಪಿ ಡಾ.ಬಿ.ಟಿ.ಕವಿತಾ, ಎಡಿಸಿ ಗೀತಾ ಹುಡೇದ, ತಹಸೀಲ್ದಾರ್ ಗಿರಿಜಾ, ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.


ಮಹದೇಶ್ವರಬೆಟ್ಟದಲ್ಲಿ ಮಹಾಲಯ ಜಾತ್ರಾ ಮಹೋತ್ಸವ

ಸಾವಿರಾರು ಭಕ್ತರ ಸಮ್ಮುಖದಲ್ಲಿ ಅಮಾವಾಸ್ಯೆ ಪೂಜೆ, ವಿವಿಧ ಅಭಿಷೇಕ

ಹನೂರು, ಅ.2–ಶ್ರೀಕ್ಷೇತ್ರ ಮಲೆಮಹದೇಶ್ವರಬೆಟ್ಟದಲ್ಲಿ ಬುಧವಾರ ಮಹಾಲಯ ಅಮಾವಾಸ್ಯೆ ಜಾತ್ರಾ ಮಹೋತ್ಸವದ ವಿಶೇಷ ಪೂಜಾ ಕಾರ್ಯ ಸಾವಿರಾರು ಭಕ್ತರ ಸಮ್ಮುಖದಲ್ಲಿ ನೆರವೇರಿಸಲಾಯಿತು.

ಸಾಲೂರು ಬೃಹನ್ ಮಠದ ಶ್ರೀ ಶಾಂತ ಮಲ್ಲಿಕಾರ್ಜುನಸ್ವಾಮೀಜಿ ನೇತೃತ್ವದಲ್ಲಿ ಬೇಡಗಂಪಣ ಸರದಿ ಅರ್ಚಕರು ಪೂಜಾ ಕಾರ್ಯ ನೆರವೇರಿಸಿದರು. ದೇವರಿಗೆ ಮುಂಜಾನೆಯಿಂದಲೇ ಬಿಲ್ವಪತ್ರೆ, ಹಾಲು–ಮೊಸರು ಸೇರಿದಂತೆ ವಿವಿಧ ಅಭಿಷೇಕ, ವಿಶೇಷ ಪೂಜೆ, ಮಹಾಮಂಗಳಾರತಿ ಹಾಗೂ ಧೂಪದ ಸೇವೆ ಸಲ್ಲಿಸಲಾಯಿತು.

ಉತ್ಸವಗಳು: ಮಹಾಲಯ ಅಮಾವಾಸ್ಯೆ ಪ್ರಯುಕ್ತ ಬೆಟ್ಟದಲ್ಲಿ ಹರಕೆ ಹೊತ್ತ ಮಾದಪ್ಪನ ಭಕ್ತರು ಬೆಳಗ್ಗೆ 8 ಗಂಟೆಯಲ್ಲಿ ಬೆಳ್ಳಿ ರಥೋತ್ಸವ ಹಾಗೂ ಹುಲಿ ವಾಹನ, ರುದ್ರಾಕ್ಷಿ ಮಂಟಪೋತ್ಸವ, ಮಹದೇಶ್ವರ, ಬಸವ ಉತ್ಸವ, ಮುಡಿಸೇವೆ, ಧೂಪ, ಪಂಜಿನ ಸೇವೆ ಹಾಗೂ ಉರುಳು ಸೇವೆ ಸಲ್ಲಿಸಿ, ಉಘೇ ಮಾದಪ್ಪ ಉಘೇ...ಎಂದು ದೇವರ ಸ್ಮರಣೆ ಮಾಡಿದರು.



ಮಹದೇಶ್ವರಬೆಟ್ಟದಲ್ಲಿ ಮಹಾಲಯ ಅಮಾವಾಸ್ಯೆ ಪ್ರಯುಕ್ತ ನಡೆದ ವಿವಿಧ ಉತ್ಸವದಲ್ಲಿ ಭಕ್ತರು ಭಾಗವಹಿಸಿದ್ದರು.

ವಿಶೇಷ ಅಲಂಕಾರ: ದೇವಾಲಯ ಆವರಣ ಸುತ್ತ ವಿಶೇಷ ಹೂವಿನ ಅಲಂಕಾರ ಸೇರಿದಂತೆ ವಿವಿಧ ಫಲಪುಷ್ಪಗಳಿಂದ ಅಲಂಕರಿಸಲಾಗಿತ್ತು. ಮಹಾಲಯ ಅಮಾವಾಸ್ಯೆ ಪೂಜೆಗೆ ಆಗಮಿಸಿದ್ದ ಸಾವಿರಾರು ಭಕ್ತರಿಗೆ ಬೆಳಗಿನ ಉಪಾಹಾರ ಪೊಂಗಲ್, ತರಕಾರಿ ಬಾತ್, ಪುಳಿಯೊಗರೆ, ಮೊಸರನ್ನ, ಮಧ್ಯಾಹ್ನ ಅನ್ನ–ಸಾಂಬಾರು, ಮೊಸರು ಹುಳಿ, ರಸಂ, ತರಕಾರಿ ಪಲ್ಯವನ್ನು ಕ್ಷೇತ್ರಾಭಿವೃದ್ಧಿ ಪ್ರಾಧಿಕಾರ ವತಿಯಿಂದ ವಿಶೇಷ ದಾಸೋಹ ವ್ಯವಸ್ಥೆ ಕಲ್ಪಿಸಲಾಗಿತ್ತು.

ಭಕ್ತರ ದಂಡು: ರಾಜ್ಯದ ವಿವಿಧೆಡೆ ಹಾಗೂ ತಮಿಳುನಾಡಿನಿಂದ ಸಾವಿರಾರು ಭಕ್ತರು ಆಗಮಿಸುವ ಮೂಲಕ ಸರದಿ ಸಾಲಿನಲ್ಲಿ ದೇವರ ದರ್ಶನ ಪಡೆದರು. ಶ್ರೀಕ್ಷೇತ್ರದಲ್ಲಿ ಎತ್ತ ನೋಡಿದರೂ ಭಕ್ತರ ದಂಡೇ ನೆರೆದಿತ್ತು.

ಬೆಟ್ಟದಲ್ಲಿ ಮೂರು ದಿನಗಳಿಂದ ನಡೆಯುತ್ತಿರುವ ಮಹಾಲಯ ಜಾತ್ರಾ ಮಹೋತ್ಸವ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮ ವಹಿಸಲು ಮಹದೇಶ್ವರ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರ ಕಾರ್ಯದರ್ಶಿ ರಘು, ಸ್ಥಳದಲ್ಲೇ ಮೊಕ್ಕಾಂ ಹೂಡಿದ್ದರು. ಪ್ರತಿ ಗಂಟೆಗೊಮ್ಮೆ ರಾಜಗೋಪುರ, ಹಿರಿಯ ನಾಗರಿಕರ ವಿಶೇಷ ದರ್ಶನ, ಧರ್ಮ ದರ್ಶನ, ವಿಶೇಷ ಚೇತನರ ಲೈನ್‌ಗಳನ್ನು ಪರಿಶೀಲಿಸಿ, ನೂಕುನುಗ್ಗಲು ಉಂಟಾಗದಂತೆ ಕ್ರಮ ವಹಿಸಲು ಸಿಬ್ಬಂದಿಗೆ ಸೂಚನೆ ನೀಡಿದರು.

2.5 ಲಕ್ಷ ಲಾಡು ಮಾರಾಟ

ಮಹದೇಶ್ವರಬೆಟ್ಟದಲ್ಲಿ ಮಹಾಲಯ ಅಮಾವಾಸ್ಯೆ ಜಾತ್ರಾ ಮಹೋತ್ಸವ ಹಿನ್ನೆಲೆಯಲ್ಲಿ 2.5 ಲಕ್ಷ ಲಾಡು ಮಾರಾಟವಾಗಿದೆ. ಒಂದು ಲಕ್ಷಕ್ಕೂ ಹೆಚ್ಚು ಲಾಡು ಶೇಖರಿಸಲಾಗಿತ್ತು. ಇದರ ಜೊತೆಗೆ ಹೆಚ್ಚಿನ ಸಿಬ್ಬಂದಿಯೊಂದಿಗೆ ಮತ್ತೆ ಒಂದೂವರೆ ಲಕ್ಷ ಲಾಡು ತಯಾರಿಸಲಾಯಿತು. ಕೊಳ್ಳೇಗಾಲ ಉಪವಿಭಾಗದ ಡಿವೈಎಸ್‌ಪಿ ಧರ್ಮೇಂದ್ರ ನೇತೃತ್ವದಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು.

ಪೀಠೋಪಕರಣ, ಅಡುಗೆ ಪಾತ್ರೆ ವಿತರಣೆ...



ಚಾ.ನಗರ ನಗರಸಭೆಯಿಂದ 23ನೇ ವಾರ್ಡ್‌ನ ಮೇದರ್ ಸಮುದಾಯ ಭವನಕ್ಕೆ 2.23 ಲಕ್ಷ ರೂ. ಬೆಲೆಬಾಳುವ ಪೀಠೋಪಕರಣ, ಅಡುಗೆ ಪಾತ್ರೆ ನೀಡಲಾಯಿತು. ನಗರಸಭೆ ಅಧ್ಯಕ್ಷ ಎಸ್.ಸುರೇಶ್, ಸದಸ್ಯೆ ಗಾಯತ್ರಿ ಚಂದ್ರಶೇಖರ್, ಯೋಜನಾಧಿಕಾರಿ ವೆಂಕಟ್ ನಾಯಕ್, ಮುಖಂಡ ಎಂ.ಎಸ್.ಚಂದ್ರಶೇಖರ್, ಮೇದರ್ ಸಮುದಾಯ ಯಜಮಾನರಾದ ಮಹದೇವಶೆಟ್ಟಿ, ರಾಚಶೆಟ್ಟಿ, ವೆಂಕಟೇಶ್, ಕೃಷ್ಣಮೂರ್ತಿ ಇತರರಿದ್ದರು.

ಬೈಕ್‌ಗೆ ಕಾರು ಡಿಕ್ಕಿ: ಸವಾರ ಸಾವು



ಬೇಗೂರು: ಬೈಕ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಮೃತಪಟ್ಟ ಘಟನೆ ಗುಂಡ್ಲುಪೇಟೆ ತಾಲೂಕಿನ ಬೇಗೂರು ಸಮೀಪದ ಗರಗನಹಳ್ಳಿ ಗೇಟ್ ಬಳಿಯ ಹೆದ್ದಾರಿಯಲ್ಲಿ ಬುಧವಾರ ನಡೆದಿದೆ.

ಗುಂಡ್ಲುಪೇಟೆ ತಾಲೂಕಿನ ಸೋಮಹಳ್ಳಿ ಗ್ರಾಮದ ಮಹದೇವಸ್ವಾಮಿ(46) ಮೃತಪಟ್ಟಿದ್ದಾರೆ. ಈತ ಸಂಜೆ ಬೈಕ್‌ನಲ್ಲಿ ಗುಂಡ್ಲುಪೇಟೆ ಕಡೆಯಿಂದ ಸೋಮಹಳ್ಳಿ ಕಡೆಗೆ ಬರುತ್ತಿದ್ದರು. ಈ ವೇಳೆ ಗರಗನಹಳ್ಳಿ ಗೇಟ್ ಬಳಿ ಕಾರು ಡಿಕ್ಕಿ ಹೊಡೆದಿದೆ. ಪರಿಣಾಮ ಮಹದೇವಸ್ವಾಮಿ ತೀವ್ರ ಗಾಯಗೊಂಡಿದ್ದರು. ತಕ್ಷಣ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ರಾತ್ರಿ ಮೃತಪಟ್ಟಿದ್ದಾರೆ.

ಬಿಜೆಪಿ, ಜೆಡಿಎಸ್ ನಾಯಕರು ತಾವೂ ಅಕ್ರಮವಾಗಿ ಪಡೆದಿರುವ ನಿವೇಶನಗಳ ವಾರದಲ್ಲಿ ವಾಪಸ್ ಕೊಡಬೇಕು

● ಕೆಪಿಸಿಸಿ ವಕ್ತಾರ ಲಕ್ಷ್ಮಣ್ ಎಚ್ಚರಿಕೆ ● ತಪ್ಪಿದರೆ ಅವರವರ ಮನೆ ಮುಂದೆ ಧರಣಿ
● ಸ್ನೇಹಮಯಿ ಕೃಷ್ಣ ಪಾತ್ರಧಾರಿ; ಕುಮಾರಸ್ವಾಮಿ ಇತರರು ಸೂತ್ರಧಾರಿಗಳು


ಎಂ.ಲಕ್ಷ್ಮಣ

ಮೈಸೂರು, ಅ.2(ಬಿಎಲ್‌ಯು)– ಮುಡಾದಲ್ಲಿ ಶೇಕಡ 50:50 ಅನುಪಾತದಡಿ ತಮಗೆ ಮಂಜೂರಾದ 14 ನಿವೇಶನಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರು ವಾಪಸ್ ನೀಡಿದಂತೆ, ಬಿಜೆಪಿ ಹಾಗೂ ಜೆಡಿಎಸ್‌ನವರು ತಾವು ಪಡೆದಿರುವ ನಿವೇಶನಗಳನ್ನು ಒಂದು ವಾರದಲ್ಲಿ ವಾಪಸ್ ನೀಡದಿದ್ದರೆ ಅವರ ಮನೆ ಮುಂದೆ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಎಚ್ಚರಿಸಿದ್ದಾರೆ.

ನಗರದ ಇನ್ಸಿಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಡಾದಲ್ಲಿ ಎಂಟು ಸಾವಿರ ನಿವೇಶನಗಳನ್ನು ಅಕ್ರಮವಾಗಿ ಮಂಜೂರು ಮಾಡಲಾಗಿದೆ ಎಂದು ಬೊಬ್ಬೆ ಹೊಡೆಯುತ್ತಿದ್ದರು. ಈಗ ಪಾರ್ವತಿ ಅವರು ನಿವೇಶನ ವಾಪಸ್ ನೀಡಿದ್ದು, ಅದರಂತೆ ಬಿಜೆಪಿ ಹಾಗೂ ಜೆಡಿಎಸ್ ನಾಯಕರು ಹಿಂತಿರುಗಿಸಬೇಕು ಎಂದು ಆಗ್ರಹಿಸಿದರು.

ಮುಡಾ ಪ್ರಕರಣದ ಬಗ್ಗೆ ಲೋಕಾಯುಕ್ತದಲ್ಲಿ ಎಫ್‌ಐಆರ್ ದಾಖಲಾದ ನಂತರ ಇಡಿ ತನಿಖೆ ಮಾಡ ಬೇಕೆಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಆಗ್ರಹಿಸಿದರು. ಅದಾದ ಮಾರನೇ ದಿನವೇ ಸ್ನೇಹಮಯಿ ಕೃಷ್ಣ ಇಡಿಗೆ ದೂರು ನೀಡಿದರು. ಸಿದ್ದರಾಮಯ್ಯ ವಿರುದ್ಧ ಇಡಿಯಲ್ಲಿ ದೂರು ದಾಖಲಾಗುವುದಕ್ಕೆ ಕುಮಾರಸ್ವಾಮಿ ಅವರ ನೇರ ಕೈವಾಡ ಇರುವುದು ಇದರಿಂದ ಸ್ಪಷ್ಟವಾಗುತ್ತದೆ ಎಂದು ಲಕ್ಷ್ಮಣ್ ಅಭಿಪ್ರಾಯಪಟ್ಟರು. ಹಣಕಾಸಿನ ವ್ಯವಹಾರ ನಡೆದಿದ್ದರೆ ಇಡಿ ಪ್ರಕರಣ ದಾಖಲಿಸಿ ತನಿಖೆ ಮಾಡಬೇಕು. ಆದರೆ ಮುಡಾ ಪ್ರಕರಣದಲ್ಲಿ ಯಾವುದೇ ರೀತಿಯ ಹಣಕಾಸಿನ ವ್ಯವಹಾರ ನಡೆದಿಲ್ಲ. ಆದರೂ ಇಡಿ ಏಕೆ ಇಲ್ಲಿ ತಲೆ ಹಾಕುತ್ತಿದೆ ಎಂದು ಪ್ರಶ್ನಿಸಿದ ಲಕ್ಷ್ಮಣ್, ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಲು ಇಂತಹ ಷಡ್ಯಂತ್ರ ರೂಪಿಸಿದ್ದಾರೆ ಎಂದು ಆರೋಪಿಸಿದರು.

ಒಟ್ಟು 543 ಲೋಕಸಭಾ ಸದಸ್ಯರಲ್ಲಿ 257 ಸದಸ್ಯರ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಅಮಿತ್ ಶಾ, ಕುಮಾರಸ್ವಾಮಿ ಸೇರಿದಂತೆ ಹಲವು ವಿರುದ್ಧವೂ ಎಫ್‌ಐಆರ್ ದಾಖಲಾಗಿವೆ. ಹೀಗಿರುವಾಗ ಸಿದ್ದರಾಮಯ್ಯ ವಿರುದ್ಧ ದಾಖಲಾಗಿರುವ ಎಫ್‌ಐಆರ್ ಹಿನ್ನೆಲೆಯಲ್ಲಿ ಮಾತ್ರ ರಾಜೀನಾಮೆ ನೀಡಬೇಕೆಂದು ಒತ್ತಾಯ ಮಾಡುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು. ಸಿದ್ದರಾಮಯ್ಯ ಅವರನ್ನು ಬೈಯ್ಯುವುದೇ ಬಿಜೆಪಿ ಮತ್ತು ಜೆಡಿಎಸ್ ನಾಯಕರ ಪ್ರತಿದಿನದ ಕಾಯಕವಾಗಿದೆ. ಹೀಗೆ ಪ್ರತಿದಿನ ತೊಂದರೆ ಕೊಡುತ್ತಿದ್ದರೆ ರಾಜ್ಯದ ಜನರೇ ಅವರಿಗೆ ತಕ್ಕ ಪಾಠ ಕಲಿಸುತ್ತಾರೆ ಎಂದು ಎಚ್ಚರಿಕೆ ನೀಡಿದರು.

ಸ್ನೇಹಮಯಿ ಕೃಷ್ಣ ಪಾತ್ರಧಾರಿ...: ಇಡೀ ಪ್ರಕರಣದಲ್ಲಿ ಸ್ನೇಹಮಯಿ ಕೃಷ್ಣ ಕಲಾವಿದ ಅಷ್ಟೆ. ಆದರೆ ಈ ಸಿನಿಮಾದ ನಿಜವಾದ ನಿರ್ದೇಶಕ ಹಾಗೂ ನಿರ್ಮಾಪಕರು ಕುಮಾರಸ್ವಾಮಿ, ಪ್ರಹ್ಲಾದ್ ಜೋಷಿ ಹಾಗೂ ವಿಜಯೇಂದ್ರ. ಎರಡು ಪಕ್ಷದ ನಾಯಕರು ಹೇಳಿದಂತೆ ಕೇಳುತ್ತಿರುವ ಸ್ನೇಹಮಯಿ ಕೃಷ್ಣ ಪಾತ್ರಧಾರಿ ಅಷ್ಟೇ; ಕುಮಾರಸ್ವಾಮಿ ಇತರರು ಸೂತ್ರಧಾರಿಗಳು ಎಂದು ಆರೋಪಿಸಿದರು.

ಕುಮಾರಸ್ವಾಮಿ ಟಾರ್ಗೆಟ್: ಎಡಿಜಿಪಿ ಚಂದ್ರಶೇಖರ್ ಅವರನ್ನು ಕುಮಾರಸ್ವಾಮಿ ಸುಲಿಗೆಕೋರ ಎಂದು ಟೀಕಿಸಿದ್ದಾರೆ ಬರ್ನಾಡ್ ಶಾ ಹೇಳಿಕೆಯನ್ನು ಚಂದ್ರಶೇಖರ್ ಉಲ್ಲೇಖಿಸಿದ್ದಾರೆಯೇ ಹೊರತು, ಕುಮಾರಸ್ವಾಮಿ ಅವರನ್ನು ಹಂದಿ ಅಂತ ಕರೆದಿಲ್ಲ. ತಮ್ಮ ವಿರುದ್ಧ ತನಿಖೆ ಮಾಡುವ ಅಧಿಕಾರಿಗಳನ್ನು ಟಾರ್ಗೆಟ್ ಮಾಡುವುದು ಕುಮಾರಸ್ವಾಮಿ ಅವರ ನಡೆ ಎಂದು ಲಕ್ಷ್ಮಣ ಆಪಾದಿಸಿದರು. ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಅಸ್ತಿತ್ವದಲ್ಲಿದ್ದು, ಈಗ ದ್ವೇಷ ಸಾಧನೆ ಮಾಡುತ್ತಿದೆ. ಆದರೆ ಗಡಿಯಾರದ ಮುಳ್ಳು ಯಾವಾಗಲೂ ಮೇಲೆ ಇರುವುದಿಲ್ಲ. ನಾವು ಅಧಿಕಾರಕ್ಕೆ ಬಂದ ನಂತರ ಅವರದೇ ಧಾಟಿಯಲ್ಲಿ ನಾವು ಕೂಡ ಉತ್ತರ ನೀಡುತ್ತೇವೆ ಎಂದು ಎಚ್ಚರಿಸಿದರು. ಚುನಾವಣಾ ಬಾಂಡ್ ಮೂಲಕ ಬಿಜೆಪಿ ಸರ್ಕಾರ ಸಾವಿರಾರು ಕೋಟಿ ಹಣ ಸಂಗ್ರಹಿಸಿದೆ. ಐಟಿ, ಇಡಿ ಹಾಗೂ ಸಿಬಿಐ ದಾಳಿ ಮಾಡಿರುವ ಕಂಪನಿಗಳೇ ಹಣ ಕೊಟ್ಟಿವೆ ಎಂದು ದೂರಿದರು.

ಕರ್ನಾಟಕ ಸರ್ಕಾರ ಎಲ್ಲಾ ರೀತಿಯ ತೆರಿಗೆ ಮೂಲಕ ಕೇಂದ್ರಕ್ಕೆ 4.5 ಲಕ್ಷ ಕೋಟಿ ರೂಪಾಯಿ ನೀಡುತ್ತಿದೆ. ಆದರೆ ಕೇಂದ್ರ ಸರ್ಕಾರ ನಮ್ಮ ರಾಜ್ಯಕ್ಕೆ 50 ಸಾವಿರ ಕೋಟಿ ರೂಪಾಯಿ ಮಾತ್ರ ನೀಡುತ್ತಿದೆ ಎಂದು ಆಪಾದಿಸಿದರು.

ಒಂದನೇ ಪುಟದಿಂದ

ಮೈಸೂರು ದಸರಾ ಇಂದು ಆರಂಭ

ವಾದಕ ಪಂಡಿತ್ ಬಸವರಾಜ್ ಭಜಂತ್ರಿ ಅವರಿಗೆ ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ ನೀಡಿ ಗೌರವಿಸುವರು. ಅಕ್ಟೋಬರ್ 4ರಿಂದ 10ರವರೆಗೆ ಮಕ್ಕಳ ದಸರಾ, ಮಹಿಳಾ ದಸರಾ, ಯೋಗ ದಸರಾ, ರೈತ ದಸರಾ, ಕವಿಗೋಷ್ಠಿ, ಯುವ ದಸರಾ ಸೇರಿದಂತೆ ಹತ್ತು ಹಲವು ಕಾರ್ಯಕ್ರಮಗಳು ನಡೆಯಲಿದ್ದು, ಅಕ್ಟೋಬರ್ 12ರಂದು ವೈಭವದ ಜಂಬೂ ಸವಾರಿ ಮೆರವಣಿಗೆ ಹಾಗೂ ಪಂಜಿನ ಕವಾಯತು ಪ್ರದರ್ಶನದೊಂದಿಗೆ ನವರಾತ್ರಿ ಉತ್ಸವ ಅಂತ್ಯಗೊಳ್ಳಲಿದೆ. ಅರಮನೆ ಬಲರಾಮ ದ್ವಾರದ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಅಕ್ಟೋಬರ್ 12ರಂದು ಶನಿವಾರ ಮಧ್ಯಾಹ್ನ 1.41ರಿಂದ 2.10 ಗಂಟೆವರೆಗೆ ಸಲ್ಲುವ ಶುಭ ಮಕರ ಲಗ್ನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನಂದಿ ಧ್ವಜಕ್ಕೆ ಪೂಜೆ ಸಲ್ಲಿಸಲಿದ್ದು, ವಿಜಯದಶಮಿ ಮೆರವಣಿಗೆಗೆ ಚಾಲನೆ ನೀಡುವರು. ದಸರಾ ಉದ್ಘಾಟನೆಗೆ ಸಾಂಸ್ಕೃತಿಕ ನಗರಿ ಮೈಸೂರು ಸರ್ವ ರೀತಿಯಲ್ಲಿ ಸಜ್ಜುಗೊಂಡಿದ್ದು, ವಿದ್ಯುತ್ ದೀಪಾಲಂಕಾರಗಳಿಂದ ಬಿನ್ನಾಣಗಿತ್ತಿಯಂತೆ ಸಿಂಗಾರಗೊಂಡಿದೆ. ವಿವಿಧ ಸಿವಿಲ್ ಕಾಮಗಾರಿ, ಬಣ್ಣ ಬಳಿಯುವ, ಸ್ವಚ್ಛತಾ ಕಾರ್ಯ ಪೂರ್ಣಗೊಂಡಿದ್ದು ದೇಶ–ವಿದೇಶಗಳಿಂದ ಪ್ರವಾಸಿಗರನ್ನು ಮೈಸೂರಿನತ್ತ ಆಕರ್ಷಿಸುತ್ತಿದೆ. ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಪಾಲಿಕೆ, ಮುಡಾ, ಪ್ರವಾಸೋದ್ಯಮ ಇಲಾಖೆ, ಪಾರಂಪರಿಕ ಇಲಾಖೆ ಸಮನ್ವಯತೆಯೊಂದಿಗೆ ಜಿಲ್ಲಾ ಉಸ್ತುವಾರಿ ಸಚಿವರ ಮಾರ್ಗದರ್ಶನದಂತೆ ದಸರೆಗೆ ಸಕಲ ಸಿದ್ಧತೆ ನಡೆಸಿದ್ದು, ಪೊಲೀಸರು ನಾಡಹಬ್ಬಕ್ಕೆ ಇನ್ನಿಲ್ಲದ ಭದ್ರತೆ ಮಾಡಿಕೊಂಡಿದ್ದಾರೆ.

ನಿವೇಶನಗಳ ಕ್ರಯಪತ್ರ ನೋಂದಣಿ ರದ್ದು!

ನಾಳೆ (ಅ. 3) ಮುಡಾ ಆಯುಕ್ತರ ಆದೇಶದನ್ವಯ ಪಾರ್ವತಿ ಅವರ 14 ನಿವೇಶನಗಳ ಸೇಲ್ ಡೀಡ್ ಅನ್ನು ಉಪನೋಂದಣಾಧಿಕಾರಿಗಳು ರದ್ದುಪಡಿಸಿ ಅನುಪಾಲನಾ ವರದಿಯನ್ನು ಸಲ್ಲಿಸಬೇಕಾಗಿದೆ. ಒಂದು ವೇಳೆ ಸೇಲ್ ಡೀಡ್ ನೋಂದಣಿ ರದ್ದಾದಲ್ಲಿ ಆ 14 ನಿವೇಶನಗಳ ಮಾಲೀಕತ್ವ ಮರಳಿ ಮುಡಾಗೆ ಬರಲಿದ್ದು, ತದನಂತರ ಮುಡಾ ಹೊರಡಿಸಿದ್ದ ನಿವೇಶನ ಮಂಜೂರು ಅಧಿಕೃತ ಜ್ಞಾಪನ, ಹಂಚಿಕೆ ಪತ್ರ, ಸ್ವಾಧೀನಪತ್ರ, ಖಾತಾ–ಕಂದಾಯ ಪತ್ರಗಳ ಮೂಲ ಪ್ರತಿಗಳನ್ನು ಕಚೇರಿ ಕಡತದಲ್ಲಿ ರದ್ದುಪಡಿಸಿ ಪ್ರಕರಣ ಮುಕ್ತಾಯಗೊಳಿಸಬೇಕಾಗಿದೆ ಎಂದು ಮೂಲಗಳು ತಿಳಿಸಿವೆ.

ಈ ನಡುವೆ ನ್ಯಾಯಾಲಯಗಳ ಆದೇಶದಂತೆ ಮುಖ್ಯಮಂತ್ರಿ ಸಿದ್ದರಮಯ್ಯ ಹಾಗೂ ಕುಟುಂಬದವರ ವಿರುದ್ಧ ಪ್ರಕರಣ ದಾಖಲಿಸಿರುವ ಲೋಕಾಯುಕ್ತ ಪೊಲೀಸರು, ನಿವೇಶನಗಳ ಹಂಚಿಕೆ ಸಂಬಂಧ ಕಂದಾಯ ಇಲಾಖೆ, ಮುಡಾ ಕಚೇರಿಗಳಿಂದ ಅಗತ್ಯ ಪೂರಕ ದಾಖಲೆ ಕಲೆಹಾಕುತ್ತಿದ್ದು, ದೂರುದಾರ ಸ್ನೇಹಮಯಿ ಕೃಷ್ಣರಿಂದಲೂ ಮಾಹಿತಿ ಸಂಗ್ರಹಿಸುತ್ತಿದ್ದಾರೆ. ನಂತರ ಆರೋಪಿತರಿಗೆ ನೋಟಿಸ್ ಜಾರಿ ಮಾಡಿ ಕಚೇರಿಗೆ ಕರೆಸಿಕೊಂಡು ಹೇಳಿಕೆ ಪಡೆಯುವ ಸಾಧ್ಯತೆ ಇದ್ದು, ಈ ಸಂಬಂಧ ಲೋಕಾಯುಕ್ತ ಹಿರಿಯ ಪೊಲೀಸ್ ಅಧಿಕಾರಿಗಳ ಸಲಹೆ–ಮಾರ್ಗದರ್ಶನ ಪಡೆಯುತ್ತಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ತಕ್ಷಣ ಬೇಕಾಗಿದ್ದಾರೆ
ಜ್ಯೂಸ್, ಸ್ಯಾಂಡ್‌ವಿಚ್ ಮಾಡಲು ಹುಡುಗರು, ಹುಡುಗಿಯರು ಬೇಕಾಗಿದ್ದಾರೆ. ಸಂಪರ್ಕಿಸಿ:
8618862467, 9448054151
(ಕುವೆಂಪುನಗರ, ಜಯನಗರ, ಸುತ್ತಮುತ್ತ ಇರುವವರು ಕೆಲಸದ ಅವಶ್ಯಕತೆ ಇದ್ದರೆ ಬನ್ನಿ)

MUDA ALLOTTED SITE FOR SALE
ರಾಮಕೃಷ್ಣನಗರ "ಐ" ಬ್ಲಾಕಿನಲ್ಲಿ 30×45 ಅಳತೆ South Facing ಸೈಟ್
9886048471

ಬೇಕಾಗಿದ್ದಾರೆ
ಬಲ್ಲಾಳ ಸರ್ಕಲ್‌ನ ಹತ್ತಿರದ ರೆಸ್ಟೋರೆಂಟ್ ಒಂದಕ್ಕೆ ಕೌಂಟರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ:
9900661620

SOBHA DEVELOPERS SITE FOR SALE
ಬೋಗಾದಿ ಮುಖ್ಯ ರಸ್ತೆಯ "ಶೋಭ ರಿಟ್ರೀಟ್" ಲೇಔಟ್‌ನಲ್ಲಿ ಸೈಟುಗಳು ಲಭ್ಯ.
9886048471

ಬೇಕಾಗಿದ್ದಾರೆ
ಹೋಟೆಲ್ ಮತ್ತು ಕಬಾಬ್ ಅಂಗಡಿ ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ ಸ್ಥಳ: ಮಾತೃಮಂಡಳಿ ವೃತ್ತ, ಮೈಸೂರು
8618396601
7019905079

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8880558064

ಬೇಕಾಗಿದ್ದಾರೆ
ಸೇಲ್ಸ್ ಎಕ್ಸಿಕ್ಯೂಟಿವ್, ಅಕೌಂಟೆಂಟ್ (1ರಿಂದ 3 ವರ್ಷಗಳ ಅನುಭವವಿರಬೇಕು) ಪಾರ್ಟ್ಸ್ ಎಕ್ಸಿಕ್ಯೂಟಿವ್. ಸಂಪರ್ಕಿಸಿ
ನವೀನ್ ಮೋಟರ್ಸ್ ಹುಣಸೂರ್
9448425368
ಸ್ಥಳೀಯರಿಗೆ ಮೊದಲ ಆದ್ಯತೆ

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ವರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 BANGALORE 9343142258

ಪ್ರವಾಸ
12 ದಿನಗಳ ಗುಜರಾತ್ ಮತ್ತು ಮಧ್ಯ ಪ್ರದೇಶ 4 ಜ್ಯೋತಿರ್ಲಿಂಗಗಳೊಂದಿಗೆ ಅಹಮದಾಬಾದ್ ಭಾವನಗರ ದ್ವಾರಕ ಪ್ರವಾಸ 14–10–24.
7 ದಿನಗಳ ಕೇರಳ ಗುರುವಾಯೂರ್, ಮುನ್ನಾರ್, ಕಲಾಡಿ, ಕೊಚ್ಚಿನ್, ಆಲಪ್ಪಿ 13–10–24.
ಸುವರ್ಣ ಯಾತ್ರಾ
8660233673 / 9019462508

MUDA SITE FOR SALE
ಇನ್ಫೋಸಿಸ್ ಪಕ್ಕದ "ಕೆ.ಬಿ.ಎಲ್ ಸಿಲಿಕಾನ್ ಸಿಟಿ" ಲೇಔಟ್‌ನಲ್ಲಿ ಸೈಟುಗಳು ಲಭ್ಯ.
9886048471

ಬೇಕಾಗಿದ್ದಾರೆ
ಮೈಸೂರಿನ ಪ್ರಸಿದ್ಧ ಶೋರೂಮ್‌ಗಳಿಗೆ ಮತ್ತು ಕಂಪನಿ ಕೆಲಸಕ್ಕೆ, ಆಫೀಸ್ ಕೆಲಸಕ್ಕೆ ತಕ್ಷಣ ಯುವಕ, ಯುವತಿಯರು, ಬೇಕಾಗಿದ್ದಾರೆ, ಮೊದಲು ಬಂದವರಿಗೆ ಮೊದಲ ಆದ್ಯತೆ. ಯಾವುದೇ ಎಜುಕೇಶನ್ ಇರಬಹುದು, AGE ಲಿಮಿಟ್ 18 TO 55, SALARY 18000 TO 38000 ಇರುತ್ತದೆ, ಹೆಚ್ಚಿನ ಮಾಹಿತಿಗೆ ಇಂದೇ ಸಂಪರ್ಕಿಸಿ.
HR MADAM
9632831680, 7411273440

ತಕ್ಷಣ ಬೇಕಾಗಿದ್ದಾರೆ
ನೇರ ಆಯ್ಕೆ ಕಂಪನಿ ಮತ್ತು ಆಫೀಸ್‌ಗಳಿಗೆ ಆಫೀಸ್ ಕೆಲಸಗಳಿಗೆ 7ನೇ, 10ನೇ, ಪಿಯುಸಿ, ಐಟಿಐ ಡಿಗ್ರಿ ಪಾಸ್/ ಫೇಲ್ ಆದಂತಹ ನಗರ ಗ್ರಾಮೀಣ ಹಳ್ಳಿಯ ಯುವಕ ಯುವತಿಯರಿಗೆ ಊಟ ವಸತಿ ಯೊಂದಿಗೆ ಸಂಬಳ 18,000/- 35000/-. ಸಂಪರ್ಕಿಸಿ:
8884076664
8884075899

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ ಮಾಲ್) (ಕೆ.ಎಸ್.ಆರ್.ಟಿಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು-1

ತಕ್ಷಣ ಬೇಕಾಗಿದ್ದಾರೆ / Wanted
Sri Sapthagiri Builders & Developers
Telecallers - 3 Nos.
MUDA and DTCP site available starts from Sq. 2200 to 6000.
Mob: 9606977963, 9731667555, 9591828444

ಪ್ರಸಿದ್ಧ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಪಂ॥ ಕುಮಾರ್ ಪ್ರಸಾದ್ ಗುರೂಜಿ
Mob: 9731839596
ಸ್ತ್ರೀ–ಪುರುಷಪ್ರೇಮ, ಸಂತಾನ, ದಾಂಪತ್ಯ, ಸಮಸ್ಯೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ, ಅಷ್ಟಮಂಗಳ, ಪ್ರಶ್ನೆಯಿಂದ, ನೇರ ಉತ್ತರ ಹಾಗೂ ಶಾಶ್ವತ, ಪರಿಹಾರಕ್ಕಾಗಿ, ಚೋಟನಿಕರ, ಭಗವತಿ ತಾಯಿ, ರಾಜರಾಜೇಶ್ವರಿ, ಕುಟ್ಟಿಚೇತನ್, ಕೇರಳದ, ಮಾಂತ್ರಿಕ ಶಕ್ತಿಯಿಂದ, 2 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ಮನೆ ವಿಳಾಸ: ಲಕ್ಕಿ ನಿವಾಸ ನಂ.19/D2, ಬುದ್ಧ ಮಾರ್ಗ, ಹೋಟೆಲ್ ದೋಸೆ ಕಾರ್ನರ್ ಪಕ್ಕ, ಹೊಸ DC ಆಫೀಸ್ ಎದುರು, ಸಿದ್ಧಾರ್ಥ ಲೇಔಟ್, ಮೈಸೂರು

WANTED
Required Teachers for the reputed CBSE School in Mysuru City. Residential / Non-Residential for all the subjects & PE teacher.
8495983613, 7676522224

JOBNET
ಮೊಬೈಲ್‌ನಲ್ಲಿ ಕೆಲಸ
ಮನೆಯಲ್ಲೆ ಕುಳಿತು ಮೊಬೈಲ್ ಮೂಲಕ ಫಾರಂ ಫಿಲ್ಲಿಂಗ್ ಮಾಡಿ ಪ್ರತಿ ತಿಂಗಳಿಗೆ 10,000 ರಿಂದ 20,000 ಸಂಪಾದಿಸಿ
9731891409

ಬೇಕಾಗಿದ್ದಾರೆ
ಮೈಸೂರಿನ ಕಾಳಿದಾಸ ರಸ್ತೆ – ಜಯಲಕ್ಷ್ಮೀಪುರಂನಲ್ಲಿ ಇರುವ ಶುದ್ಧ ಸಸ್ಯಾಹಾರಿ ಹೋಟೆಲ್‌ಗೆ ಅನುಭವ ಇರುವ ದೋಸಾ ಚೆಫ್ (ಭಟ್ಟು) – 2
ಕೌಂಟರ್ (Parcel packing) – 2
ಸರ್ವಿಸ್ (Waiter - supplier) – 2
ಸೌತ್ ಕಿಚನ್ allrounder (South Assistant) – 1
ಚಾಟ್ ಮಾಸ್ಟರ್ (Chaats Master) - 1
ಕೆಲಸಕ್ಕೆ ಬೇಕಾಗಿದ್ದಾರೆ. ಉತ್ತಮ ಸಂಬಳ, ಊಟ ಮತ್ತು ವಸತಿ ಸೌಲಭ್ಯ ಇದೆ. ಸಂಪರ್ಕಿಸಿ:
7899028086

SITES FOR SALE
30x50 E/F
40x60 E/F
Suvarna Nagar, Bogadi Road.
Mob: 9880273834

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ವಧು–ವರರಿಗೆ ಸಂಪರ್ಕಿಸಿ

ಒಕ್ಕಲಿಗ, ಕುರುಬ, ನಾಯಕ ಲಿಂಗಾಯತ, ಹಾಗೂ ಎಲ್ಲಾ ಜಾತಿಯ ವಧು–ವರರು, ವಿಚ್ಛೇಧಿತರು, ವಿಧುರ– ವಿಧವೆಯರು
9980273659
9731066259

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI / PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ + ಓಟಿ, 15200 – 86,000.
7411565140, 7892046990

REQUIRED
1) Sales Executive with sales experience in imitation jewellery.
2) Photo shooter for imitation jewellery.
3) Computer Operator with Tally experience.
Mob: 98807 77006

Houses & Office Space for Rent
@ Saraswathipuram, Kuvempunagar & surroundings.
S.S. Property Services
(Opp. Kuvempu School)
S.S. Puram, Mysore.
9342125252, 9900954040

Sudarshan Saur
SOLAR WATER HEATER

ATTRACTIVE OFFER
ಸೇಲ್ಸ್ & ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಬೇಕಾಗಿದ್ದಾರೆ
ಮೈಸೂರು ಮತ್ತು ಹಾಸನಕ್ಕೆ ಗನ್‌ಮ್ಯಾನ್ ಬೇಕಾಗಿದ್ದಾರೆ
8151961944
9611786862

FOR RENT
2BHK, 16 HOUSES SUITABLE FOR P.G HOSTEL ETC. Housing Board, Hootagalli, Mysore
9980685348
8970326846

ಬಾಡಿಗೆಗೆ
ಅಂಗಡಿ/ಗೋಡೌನ್ ಮಳಿಗೆ 9x40 ಅಡಿ ವಿಸ್ತಾರವುಳ್ಳ ಅರಸು ರಸ್ತೆ ಶಿವರಾಮಪೇಟೆ ಮಧ್ಯಭಾಗದಲ್ಲಿರುವುದು ಸಂಪರ್ಕಮಾಡಲು
9972259460
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)

ಮನೆ ಮಾರಾಟಕ್ಕಿದೆ
40x60 ವಿಜಯನಗರ 2ನೇ ಹಂತ, ವಾಟರ್ ಟ್ಯಾಂಕ್ ಹತ್ತಿರ, ಮೈಸೂರು
9482138912
7026887031

LAND FOR SALE
19 Acre Gundlupet Price 25 Lak From Mysore 59 Km Brokers Excuse
7892161615

Wanted For Ready Mix Concrete plant
1. Quality checking engineer 1nos
2. TM Vehicle drivers 5nos
3. Marketing Engineer 3nos
4. Accountant 1nos
5. Site supervisor (civil engineering) Must Experience in Layout development 1nos
9845995584

ಬೇಕಾಗಿದ್ದಾರೆ
(ಕನ್ಸಲ್ಟೆನ್ಸಿ ಅಲ್ಲ) ಮೈಸೂರಿನಲ್ಲಿರುವ AWG ಕಂಪನಿಗೆ SSLC, PUC, ITI, Diploma, Any Degree ಆದಂತಹ ಗ್ರಾಮೀಣ + ನಗರದ 146 ಅಭ್ಯರ್ಥಿಗಳು ಬೇಕಾಗಿದ್ದಾರೆ. Freshers ಗಳಿಗೆ ಹೆಚ್ಚಿನ ಆದ್ಯತೆ ತಿಂಗಳಿಗೆ–21500–26500 ವಯೋಮಿತಿ – 18 to 35 Years (ಉಚಿತ ಊಟ+ವಸತಿ ಸೌಲಭ್ಯವಿದೆ)
7349699460

ತಕ್ಷಣ ಬೇಕಾಗಿದ್ದಾರೆ
1) ಹೌಸ್ ಕೀಪರ್ (ಪುರುಷರು) ರಾತ್ರಿ ಪಾಳಿಗೆ ಕಾರ್ಯನಿರ್ವಹಿಸಲು
2) ಸೆಕ್ಯೂರಿಟಿ ಗಾರ್ಡುಗಳು
ಉಚಿತ ವಸತಿ / ಊಟ/ ESI/PF ಸೌಲಭ್ಯವಿದೆ
9242406261
9686422400

ಅರ್ಚಕರು ಬೇಕಾಗಿದ್ದಾರೆ
1) ಅನುಭವವುಳ್ಳ ಇಬ್ಬರು ಅರ್ಚಕರು ಬೇಕಾಗಿದ್ದಾರೆ.
2) ದೇವಸ್ಥಾನದ ಕಛೇರಿ ಕೆಲಸಕ್ಕೆ ಅನುಭವವುಳ್ಳ ಒಬ್ಬರೂ ಗುಮಾಸ್ತರು ಬೇಕಾಗಿದ್ದಾರೆ.
ಸಂಪರ್ಕಿಸಬೇಕಾದ ವಿಳಾಸ
ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಸ್ಥಾನ
ಚಾಮುಂಡಿಪುರಂ, ವಿದ್ಯಾರಣ್ಯಪುರಂ, ಮೈಸೂರು–8
9448053321

SITE FOR SALE
East facing 30x40 Site for Sale MMG Grand City Muda Approved Mysore
8884721121

ಜಮೀನು ಬೇಕಾಗಿದೆ
100x100 ಅಳತೆಯ ಜಮೀನು ಬಾಡಿಗೆಗೆ ಲೀಸ್‌ಗೆ ಮೈಸೂರು ರಿಂಗ್ ರೋಡ್ ಟಚ್, ಹಿನಕಲ್ ಬ್ರಿಡ್ಜ್ ಇಂದ ಬೋಗಾದಿ ಸಿಗ್ನಲ್ ವರೆಗೆ
9988484229

30x40 Sites Sale
Per Sqft Rs.3400/-
1) Rera Approved
2) BMICA Approved
3) 100% Bank Loan
4) Society Layout
5) Old Kesare Road
6) Near Manipal Hospital
8088006558

JOIN US TODAY
Age (18-24) 10th, PUC, BBM ಯಾದ Project Trainee ಗಳಾಗಿ ಮೈಸೂರಿನಲ್ಲಿ Earn (10,400/- ರಿಂದ 18,500/-) pm
Only Fresher No Fee
Meet Us (9am to 3.30pm
9342827788

ಫಂಕ್ಷನ್ ಹಾಲ್ ತಿಂಗಳಿಗೆ ಬಾಡಿಗೆಗೆ / ಭೋಗ್ಯಕ್ಕೆ

ಸರ್ಕಾರಿ ಆಸ್ಪತ್ರೆ ಮುಖ್ಯ ರಸ್ತೆ, ತಿ.ನರಸೀಪುರ
9448390643

ಬೇಕಾಗಿದ್ದಾರೆ
ಮೈಸೂರಿನ ಲಕ್ಷ್ಮಿಸುಧಾ ಪ್ರೊಡಕ್ಷನ್ಸ್ ಅರ್ಪಿಸುವ 'ಸಮಯ ಸಾಕ್ಷಿ'ಎಂಬ ಹೊಸ ಚಲನಚಿತ್ರಕ್ಕೆ ನಟ–ನಟಿಯರು ಸಹ ಕಲಾವಿದರು ಬಾಲ ಕಲಾವಿದರು ಛಾಯಾ ಚಿತ್ರಕಾರರು, ಸಹನಿರ್ದೇಶಕರು ಹಾಗೂ ನಿರ್ದೇಶಕರು ಬೇಕಾಗಿದ್ದಾರೆ.
8553936528

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರಿನ ಹೆಸರಾಂತ MNC ಕಂಪನಿಗಳಿಗೆ 7th, 10th, PUC, Diploma, Any Degree MA, MBA, ಆದ ಅವರು QC Production Machine Operator, Packing, Helper, Housekeeping, Security, Driver, Accounts, Front Office, Data Entry, Telecalling, HR ಬೇಕಾಗಿದ್ದಾರೆ. ESI & PF ನೊಂದಿಗೆ 18000/– ದಿಂದ 40000/–
9916641959
9901816285

ಹೊಸ ಮನೆ ಮಾರಾಟಕ್ಕಿದೆ
3BHK 30X40
Built up Area 1500 SF
ಮುಡಾ ಅಪ್ರೂವ್ ಸೆಂಟ್ ಜೋಸೆಫ್ ಶಾಲೆಯ ಹತ್ತಿರ ಹುಯಿಲಾಳು ಮೈಸೂರು
8217851695

ನಿವೇಶನ ಮಾರಾಟಕ್ಕಿದೆ
30x40, E/F ಭೀಮ ಮೃಗಶಿರ ಬಡಾವಣೆ ಮುಡಾ ಖಾತೆ ವಿಮಾನ ನಿಲ್ದಾಣದ ಹತ್ತಿರ 28 ಲಕ್ಷ (Nego)
9945562267

ರೈಟರ್ ಬೇಕಾಗಿದ್ದಾರೆ
ದಕ್ಷಿಣ ಕೊಡಗಿನ ಪೊನ್ನಂಪೇಟೆ ಕುಟ್ಟ ರಸ್ತೆಯಲ್ಲಿ ಇರುವ ತೋಟವೊಂದಕ್ಕೆ ಕೆಲಸ ನೋಡಿಕೊಳ್ಳಲು ಸಂಸಾರಸ್ಥ ರೈಟರ್ ಬೇಕಾಗಿದ್ದಾರೆ.
9901519181
8105258709

ಹೋಟೆಲ್‌ಗೆ ಕೆಲಸಕ್ಕೆ ಬೇಕಾಗಿದ್ದಾರೆ
ಕ್ಯಾಶಿಯರ್, ಕೌಂಟರ್ ಬಾಯ್, ಕಾಫೀ ಭಟ್ರು
9663284544

ಮನೆಗೆ ಅಡುಗೆಯವರು ಬೇಕಾಗಿದ್ದಾರೆ
ಸಂಪೂರ್ಣ ಕಾಲದ ಉದ್ಯೋಗ ಅಥವಾ ಬೆಳಿಗ್ಗೆ 7:00 ರಿಂದ ಸಂಜೆ 8:00 ರವರೆಗೆ ದಟ್ಟಗಳ್ಳಿ ಮೈಸೂರು ವೇತನ: 18000/– ಸಸ್ಯಾಹಾರ ಮತ್ತು ಮಾಂಸಾಹಾರ.
9663570750

ಸೈಟ್ ಫಾರ್ ಸೇಲ್
ಈಸ್ಟ್ ಫೇಸಿಂಗ್ ಕಾರ್ನರ್ ಸೈಟ್ 28.5x40 ಮುಡಾ ಖಾತೆ, 36 ಲಕ್ಷ, ಡೈರೆಕ್ಟ್ ಓನರ್
9342123373

FOR RENT REQUIRED
ACCOMODATION SINGLE B/H/K Gr. FLR WITH ALL FACILITIES NEAR ST. PHILOMENAS CHURCH
9449923880

SITE FOR SALE
30x50 S/F Brahmananda Sagara Phase 1
8050821108

ಸೇಲ್ ಹುಡುಗಿಯರು ಬೇಕಾಗಿದ್ದಾರೆ
ಬಟ್ಟೆ ಅಂಗಡಿಗಾಗಿ ವಿವೇಕಾನಂದ ಸರ್ಕಲ್
Sales Girls Required for Cloth Shop Near Vivekananda Circle
7411118570
Minimum Experience 2 Years

ಮನೆ ಮಾರಾಟಕ್ಕಿದೆ
20x30 ಪೂರ್ವ ದಿಕ್ಕಿನ ಎರಡು ಅಂತಸ್ತಿನ ಮನೆ # 10938 ವಿಜಯನಗರ 4ನೇ ಹಂತ 2ನೇ ಫೇಸ್ ಮರಿಮಲ್ಲಪ್ಪ ಕಾಂಪೌಂಡ್ ಹತ್ತಿರ
8660726140

ಮನೆಯ ಕೆಲಸಕ್ಕೆ ಬೇಕಾಗಿದ್ದಾರೆ
ಅಡುಗೆ ಕೆಲಸ ಮತ್ತು 2.5 ವರುಷದ ಹೆಣ್ಣು ಮಗು ನೋಡಿಕೊಳ್ಳಲು 40 ವರ್ಷ ಒಳಗಿರುವ ಲೇಡಿಸ್ ಬೇಕಾಗಿದ್ದಾರೆ ಸಮಯ 12pm ರಿಂದ 8pm ರವರೆಗೆ ಸ್ಪೋರ್ಟ್ ಕ್ಲಬ್ ವಿಜಯನಗರ 1st stage
8310098788

100% TEAK WOOD
FACTORY FINISH DOORS & FRAMES
@ FACTORY DEPOT RATES

10 YEARS WARRANTY*
9901291267
9731591267

ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ
ಸಂಬಳ: 10,000
ಸ್ಥಳ: ಚಾಮುಂಡಿಪುರಂ ಮತ್ತು ಎನ್.ಆರ್.ಮೊಹಲ್ಲಾ,
Field Executive ಬೇಕಾಗಿದ್ದಾರೆ
Collection Field (ಸಂಬಳ–15000)
8150005111
Team Manager ಬೇಕಾಗಿದ್ದಾರೆ (ಸಂಬಳ–20000)

JOB VACANCY
AYAH & ASSISTANT M/F REQUIRED ACCOMODATION SHALL BE PROVIDED
9449923880

ಕೇರಳ ಕೊಳ್ಳೇಗಾಲದ ಶ್ರೀ ಭದ್ರಕಾಳಿ ಶ್ರೀ ಭಗವತಿ ಜ್ಯೋತಿಷ್ಯರು
ಪಂಡಿತ॥ ಕುಮಾರ್ ಗುರುನಂದನ್
9972290933
ಇವರು ಕೇರಳದ ಮಹಾಯಾಜ್ಞ ಶ್ರೀರಾಜರಾಜೇಶ್ವರಿ ಭದ್ರಕಾಳಿ ಶ್ರೀ ಭಗವತಿ, ಶಕ್ತಿಯಿಂದ, ಅಕಪೂಜಾ, ಗುರುಸಿ ಕರಿಂಕಳಸ, ತವಸಲಿದೀಪ, ರಕ್ತಪುಷ್ಪಾಂಜಲಿ ಮತ್ತು ಕೊಳ್ಳೇಗಾಲದ ಚೌಡಿ, ಭೂತರಾಯ, ಅಘೋರ, ಕಾಟೇರಿ, ಪ್ರಯೋಗದಿಂದ, ಸ್ತ್ರೀ ಪುರುಷ, ಪ್ರೇಮ ದಾಂಪತ್ಯ ಸಮಸ್ಯೆ, ವ್ಯಾಪಾರ, ಸಂತಾನ, ಮದುವೆ, ಸಾಲ ಬಾಧೆ, ಶತ್ರುಸಂಹಾರ, ವಿದೇಶ ಪ್ರಯಾಣ, ರಾಜಕೀಯ, ತನ್ನವರ ಕಡೆಗೆ ಶತ್ರು, ಪ್ರೇತಬಾಧೆ, ಅನ್ಯಾ ಯಾವುದೇ ಗುಪ್ತಸಮಸ್ಯೆ, ಸಮಸ್ಯೆಗಳಿಗೆ ಮೇಲಿನ ಪೂಜಾ ಶಕ್ತಿಯಿಂದ 2 ದಿನದಲ್ಲಿ ಪರಿಹಾರ ಶತಃಸಿದ್ಧ
ವಿಳಾಸ ನಂ.19, ಶಿವಕಾಂಪ್ಲೆಕ್ಸ್, ಅಂಬಾರಿ ಹೋಟೆಲ್ ಪಕ್ಕ, ದೇವೇಗೌಡ ಸರ್ಕಲ್, ಮೈಸೂರು

2 BHK HOME INTERIORS @ ₹ 2.5 Lacs*
Home Space Mart
An ISO 9001-2015 Certified Company
TALK TO OUR DESIGN EXPERT
91089 23123

ಮೈಸೂರು ಲ್ಯಾಂಡ್ ಮಾರ್ಟ್
ಬನ್ನೂರು ರಸ್ತೆ, ಹಂಚ್ಯಾ ಸಾತಗಳ್ಳಿ ಹಾಗೂ ಟಿ.ನರಸೀಪುರ ರಸ್ತೆಗಳಲ್ಲಿ ಮುಡಾ ಹಾಗೂ ಮುಡಾ ಅನುಮೋದಿತ ಬಡಾವಣೆಯಲ್ಲಿ ಎಲ್ಲಾ ಅಳತೆಯ ನಿವೇಶನಗಳು ಲಭ್ಯವಿದೆ.
9448447035

ಬಾದಾಮಿ, ಗೋಡಂಬಿ, ಪಿಸ್ತಾ, ಒಣದ್ರಾಕ್ಷಿ, ಖರ್ಜೂರ, ಅಂಜೂರ ಡ್ರೈಫ್ರೂಟ್ಸ್ ಗಿಫ್ಟ್ ಬಾಕ್ಸ್ ದೊರೆಯುತ್ತದೆ.
(5 ಕಿ.ಮೀ ವರೆಗೂ ಉಚಿತ ಡೆಲಿವರಿ) ಸಂಪರ್ಕಿಸಿ:
ರಾಜ್ ಗುರು ಡ್ರೈಫ್ರೂಟ್, ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು
7022293342
9845460211

ಬೇಕಾಗಿದ್ದಾರೆ
ರೈಸನ್ ನ್ಯೂಟ್ರಿಷನ್ ಕೋಳಿ ಫಾರಂನಲ್ಲಿ
1. ಹ್ಯಾಚಾರಿ ಕೆಲಸಕ್ಕಾಗಿ ಪುರುಷರು ಬೇಕಾಗಿದ್ದಾರೆ. ವಿದ್ಯಾರ್ಹತೆ ಪಿಯುಸಿ ವಯಸ್ಸು 20 ರಿಂದ 35 ಮತ್ತು
2. ಫಾರಂ ಕೆಲಸಕ್ಕೆ ಕುಟುಂಬಸ್ಥರು ಬೇಕಾಗಿದ್ದಾರೆ. ಉಚಿತ ವಸತಿ ESI/PF ಸೌಲಭ್ಯವಿರುತ್ತದೆ.
ಬೆಣಗಾಲು, ಪಿರಿಯಾಪಟ್ಟಣ ತಾ. ಮೈಸೂರು ಜಿಲ್ಲೆ ಆಸಕ್ತರು ಸಂಪರ್ಕಿಸಿ:
9480055297
9480055298

ಮೈಸೂರು ಮಿತ್ರ 45 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಿತ್ರ

ಗಾಂಧಿ, ಲಾಲ್ ಬಹದ್ದೂರ್ ಶಾಸ್ತ್ರಿ ಸ್ಮರಣೆ



ಕಾರ್ಯಕ್ರಮದಲ್ಲಿ ಗಾಂಧೀಜಿ, ಶಾಸ್ತ್ರಿ ಭಾವಚಿತ್ರಕ್ಕೆ ಗಣ್ಯರು ಪುಷ್ಪಾರ್ಚನೆ ಮಾಡಿದರು.

ತಿ.ನರಸೀಪುರ, ಅ.2– ಮಹಾತ್ಮ ಗಾಂಧೀಜಿಯವರ ಅಹಿಂಸಾ ಮಾರ್ಗ ಹಾಗೂ ಜೀವನ ಶೈಲಿ ನಮಗೆಲ್ಲರಿಗೂ ಸ್ಫೂರ್ತಿಯಾಗಿದ್ದು, ನಾವೆಲ್ಲರೂ ಗಾಂಧೀಜಿಯವರ ಅಹಿಂಸಾ ತತ್ವಗಳನ್ನು ಪಾಲಿಸೋಣ ಎಂದು ಪುರಸಭಾಧ್ಯಕ್ಷೆ ವಸಂತ ಬಿ.ಶ್ರೀಕಂಠು ತಿಳಿಸಿದರು.

ಪಟ್ಟಣದ ಪುರಸಭೆ ಆವರಣದಲ್ಲಿ ಬುಧವಾರ ನಡೆದ ಮಹಾತ್ಮಾ ಗಾಂಧೀಜಿ ಹಾಗೂ ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರೀ ಜಯಂತಿಯಲ್ಲಿ ಶಾಸ್ತ್ರಿ ಹಾಗೂ ಗಾಂಧೀಜಿಯವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಗೌರವ ಸಲ್ಲಿಸಿ ಅವರು ಮಾತನಾಡಿದರು.

ನನ್ನ ಜೀವನವೇ ನನ್ನ ಸಂದೇಶ ಎಂದು ಜಗತ್ತಿಗೆ ಸಾರಿದ ಗಾಂಧೀಜಿಯವರು ತಮ್ಮ ಸರಳ ಜೀವನ ಹಾಗೂ ಆದರ್ಶಗಳ ಮೂಲಕ ಗುರುತಿಸಲ್ಪಡುತ್ತಾರೆ. ಅಹಿಂಸಾ ಹೋರಾಟದ ಮೂಲಕ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಅವರು ಇತರೆ ದೇಶಗಳ ಸ್ವಾತಂತ್ರ್ಯ ಹೋರಾಟಕ್ಕೂ ಸ್ಫೂರ್ತಿಯಾಗಿದ್ದರು. ಅದೇ ರೀತಿ ಸರಳ ಮತ್ತು ಸೌಜನ್ಯಯುತ ನಡವಳಿಕೆ ಹೊಂದಿದ್ದ ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿಯವರು ಕೂಡ ದೇಶದ ಪ್ರಗತಿಗೆ ಶ್ರಮಿಸಿದರು ಎಂದು ಸ್ಮರಿಸಿದರು.

ಪುರಸಭೆ ಮುಖ್ಯಾಧಿಕಾರಿ ಬಿ.ಕೆ.ವಸಂತಕುಮಾರಿ ಮಾತನಾಡಿ, ಗಾಂಧೀಜಿ ಅವರು ದೇಶಾದ್ಯಂತ ಸಂಚರಿಸಿ ಭಾರತೀಯರನ್ನು ಒಗ್ಗೂಡಿಸಿ, ಸರಳ ಹಾಗೂ ಶಾಂತಿ ಮಾರ್ಗದ ಮೂಲಕ ಬ್ರಿಟಿಷರ ವಿರುದ್ಧ ಹೋರಾಡಿ ಸತ್ಯ, ಶಾಂತಿ ಹಾಗೂ ಅಹಿಂಸೆ ಅಸ್ತ್ರಗಳನ್ನು ಬಳಸಿಕೊಂಡು ಭಾರತಕ್ಕೆ ಸ್ವಾತಂತ್ರ್ಯ ತಂದುಕೊಟ್ಟರು. ನಾವೆಲ್ಲರೂ ಇಂತಹ ಮಹಾನ್ ನಾಯಕರ ತ್ಯಾಗ, ಬಲಿದಾನ ತಿಳಿದುಕೊಳ್ಳಬೇಕು ಎಂದರು.

ಪುರಸಭೆ ಮಾಜಿ ಅಧ್ಯಕ್ಷ ಟಿ.ಎಂ.ನಂಜುಂಡಸ್ವಾಮಿ ಮಾತನಾಡಿ, ಇಂದು ದೇಶಾದ್ಯಂತ ಇಬ್ಬರು ಮಹಾತ್ಮರ ಜನ್ಮದಿನ ಆಚರಿಸುತ್ತಿದ್ದೇವೆ. ಮಹಾತ್ಮ ಗಾಂಧೀಜಿ ಅವರು ಅನೇಕ ಕಷ್ಟಗಳನ್ನು ಸಹಿಸಿಕೊಂಡು, ಬೇರೆ ರಾಷ್ಟ್ರಗಳಲ್ಲಿ ಆದ ಅನುಭವಗಳ ಆಧಾರದ ಮೇಲೆ ರಾಷ್ಟ್ರವನ್ನು ಕಟ್ಟುವ ಅಪೂರ್ವ ಕೆಲಸ ಮಾಡಿದ್ದಾರೆ. ಲಾಲ್ ಬಹದ್ದೂರ್ ಶಾಸ್ತ್ರಿಯವರು ರಾಷ್ಟ್ರದ ಅಭಿವೃದ್ಧಿಯ ಕುರಿತಾಗಿ ದಿಟ್ಟ ನಿರ್ಧಾರ ತೆಗೆದುಕೊಂಡಿದ್ದಾರೆ ಎಂದರು.

ಈ ವೇಳೆ ಪುರಸಭೆ ಸದಸ್ಯರಾದ ಬಾದಾಮಿ ಮಂಜು, ಸಿಸ್ಟಮ್ ಸಿದ್ದು, ರೂಪಶ್ರೀ, ತೇಜಸ್ವಿನಿ, ಮುಖಂಡರಾದ ಶ್ರೀಕಂಠ, ಮಾದೇಶ್, ಕಿರಿಯ ಆರೋಗ್ಯ ನಿರೀಕ್ಷಕ, ಮಧು, ಸಮುದಾಯ ಸಂಘಟಕರು, ಮಹದೇವ, ದ್ವಿತೀಯ ದರ್ಜೆ ಸಹಾಯಕ ರಾಜೇಂದ್ರ, ಕಿರಿಯ ಅಭಿಯಂತರ ಸಿದ್ದಪ್ಪ ಕಚೇರಿ ವ್ಯವಸ್ಥಾಪಕ ಮಹೇಂದ್ರ, ಪ್ರಥಮ ದರ್ಜೆ ಸಹಾಯಕ ತ್ರಿವೇಣಿ, ಜೂನಿಯರ್ ಪ್ರೋಗ್ರಾಮರ್ ಹರೀಶ್, ಪೌರ ಕಾರ್ಮಿಕರು ಹಾಗೂ ಸಿಬ್ಬಂದಿಗಳು ಹಾಜರಿದ್ದರು.

ಗಾಂಧೀಜಿಯವರ ತತ್ವಾದರ್ಶಗಳು ಸರ್ವಕಾಲಕ್ಕೂ ಪ್ರಸ್ತುತವಾಗಿವೆ. ವಿದೇಶಿಗರು ನಮ್ಮನ್ನು ಗಾಂಧಿ ನಾಡಿನವರು ಎಂದು ಗುರುತಿಸುವುದು ನಮಗೆಲ್ಲ ಹೆಮ್ಮೆಯ ವಿಷಯವಾಗಿದೆ. ಅಹಿಂಸಾ ಚಳುವಳಿಯಿಂದ ಗಾಂಧೀಜಿ ಅವರು ಮಹಾತ್ಮ ಎಂದು ಕರೆಸಿಕೊಂಡರು. ಅವರ ಅಹಿಂಸಾ ತತ್ವದಿಂದ ಪ್ರಭಾವಿತಗೊಂಡ ವಿಶ್ವಸಂಸ್ಥೆಯು ಅ.2 ಅನ್ನು ವಿಶ್ವ ಅಹಿಂಸಾ ದಿನ ಎಂದು ಘೋಷಣೆ ಮಾಡಿತು. ಅಸ್ಪೃಶ್ಯತೆ ವಿರುದ್ಧ ಹೋರಾಡಿದ ಅವರು ಮಹಿಳೆಯರಿಗೆ ಸಾಮಾಜಿಕ ನ್ಯಾಯ ದೊರಕಿಸಿಕೊಟ್ಟರು.

– ಸಿ.ಪ್ರಕಾಶ್, ಪುರಸಭಾ ಸದಸ್ಯ

ಗಾಂಧಿ ಜಯಂತಿ ಪ್ರಯುಕ್ತ



ಖಾದಿ ಗ್ರಾಮೋದ್ಯೋಗ ಕೇಂದ್ರಕ್ಕೆ ಪಾದಯಾತ್ರೆ

ನಂಜನಗೂಡು, ಅ.2– ಮಹಾತ್ಮ ಗಾಂಧೀಜಿ ಅವರು ತಾಲೂಕಿನ ಬದನವಾಳು ಹಾಗೂ ತಗಡೂರು ಗ್ರಾಮಗಳಿಗೆ ಭೇಟಿ ನೀಡಿ ಖಾದಿ ಗ್ರಾಮೋದ್ಯೋಗ ಕೇಂದ್ರ ಆರಂಭಿಸಿ ಇತಿಹಾಸ ನಿರ್ಮಿಸಿದ್ದಾರೆ ಎಂದು ಶಾಸಕ ದರ್ಶನ್ ತಿಳಿಸಿದರು.

ತಾಲೂಕಿನ ಬದನವಾಳು ಖಾದಿ ಗ್ರಾಮೋದ್ಯೋಗ ಕೇಂದ್ರದಲ್ಲಿ ಬುಧವಾರ ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ಆಯೋಜಿಸಿದ್ದ ಮಹಾತ್ಮ ಗಾಂಧಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿಯವರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಗಾಂಧೀಜಿಯವರು ಭೇಟಿ ನೀಡಿದ ಸಂದರ್ಭದ ಕುರುಹುಗಳು ಇನ್ನು ಗ್ರಾಮೋದ್ಯೋಗ ಕೇಂದ್ರದಲ್ಲಿ ಜೀವಂತವಾಗಿವೆ. ಅಂದಿನಿಂದ ಇಂದಿನವರೆಗೂ ಖಾದಿ ಗ್ರಾಮೋದ್ಯೋಗ ಕೇಂದ್ರದಲ್ಲಿ ಮಹಿಳೆಯರು ಚರಕಗಳ ಮೂಲಕ ನೂಲನ್ನು ನೇಯ್ದು ಖಾದಿ ಬಟ್ಟೆ ತಯಾರಿಸುತ್ತಿದ್ದಾರೆ. ಕೇಂದ್ರವನ್ನು ಅಭಿವೃದ್ಧಿಪಡಿಸುವ ಸಲುವಾಗಿ ನಮ್ಮ ತಂದೆ ಆರ್.ಧ್ರುವನಾರಾಯಣ ಹಗಲಿರುಳು ಶ್ರಮಿಸಿದ್ದರು. ನೂರಾರು ಮಂದಿಗೆ ಖಾಯಂ ಉದ್ಯೋಗ ನೀಡುವ ಕನಸು ಹೊತ್ತಿದ್ದರು. ಭಾರತ್ ಜೋಡೋ ಯಾತ್ರೆ ಸಂದರ್ಭ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸೇರಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಮುಂತಾದ ನಾಯಕರು ಖಾದಿ ಗ್ರಾಮೋದ್ಯೋಗ ಕೇಂದ್ರಕ್ಕೆ ಭೇಟಿ ನೀಡಿ ಅಭಿವೃದ್ಧಿಪಡಿಸಲು ಸಲಹೆ ನೀಡಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಕೇಂದ್ರವನ್ನು ಅಭಿವೃದ್ಧಿಪಡಿಸಲು ಬಜೆಟ್‌ನಲ್ಲಿ ಅನುದಾನ ಘೋಷಿಸಿದ್ದಾರೆ. 2027ಕ್ಕೆ ಖಾದಿ ಗ್ರಾಮೋದ್ಯೋಗ ಕೇಂದ್ರಕ್ಕೆ 100 ವರ್ಷಗಳು ತುಂಬಲಿವೆ. ಅಂದು ರಾಹುಲ್ ಗಾಂಧಿ ಅವರನ್ನು ಕರೆಸಿ ಅದ್ಧೂರಿ ಕಾರ್ಯಕ್ರಮ ನಡೆಸಲಾಗುವುದು ಎಂದರು.



ಗಾಂಧಿ ಜಯಂತಿ ಅಂಗವಾಗಿ ಶಾಸಕ ದರ್ಶನ್ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪಾದಯಾತ್ರೆ ನಡೆಸಿದರು.

ಕಾರ್ಯಕ್ರಮದ ಅಂಗವಾಗಿ ನಗರದ ನಾಗಮ್ಮ ಶಾಲೆ ಆವರಣದಿಂದ ಬದನವಾಳು ಕೇಂದ್ರದವರೆಗೆ ಶಾಸಕ ದರ್ಶನ್ ನೇತೃತ್ವದಲ್ಲಿ ನೂರಾರು ಕಾರ್ಯಕರ್ತರು ಪಾದಯಾತ್ರೆ ನಡೆಸಿ, ಕೇಂದ್ರದ ಮಹಾತ್ಮ ಗಾಂಧೀಜಿಯವರ ಪುತ್ಥಳಿಗೆ ಮಾಲಾರ್ಪಣೆ ಮಾಡಿದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಕೇಶವ ಮೂರ್ತಿ, ನಗರಸಭೆ ಅಧ್ಯಕ್ಷ ಶ್ರೀಕಂಠಸ್ವಾಮಿ, ಉಪಾಧ್ಯಕ್ಷೆ ರೆಹನಾ ಭಾನು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಹುಲ್ಲಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠನಾಯಕ, ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿಎಂ ಶಂಕರ್, ಜಿಪಂ ಮಾಜಿ ಸದಸ್ಯರಾದ ಕೆ.ಮಾರುತಿ, ಪುಷ್ಪ, ತಾಪಂ ಮಾಜಿ ಅಧ್ಯಕ್ಷ ನಾಗೇಶರಾಜ್, ಕಾಂಗ್ರೆಸ್ ಉಸ್ತುವಾರಿ ಸೋಮೇಶ್, ನಗರಸಭಾ ಸದಸ್ಯರಾದ ಎಸ್. ಪಿ.ಮಹೇಶ್, ಗಂಗಾಧರ್, ವಿಜಯಲಕ್ಷ್ಮಿ, ಗಾಯತ್ರಿ, ಮುಖಂಡರಾದ ದೊರೆಸ್ವಾಮಿ ನಾಯಕ, ರವಿಪ್ರಕಾಶ್, ರಾಜೇಶ್, ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು, ಡಿವೈಎಸ್ಪಿ ರಘು, ತಾಪಂ ಇಓ ಜೆರಾಲ್ಡ್ ರಾಜೇಶ್ ಸೇರಿದಂತೆ ನೂರಾರು ಕಾಂಗ್ರೆಸ್ ಕಾರ್ಯಕರ್ತರು ಉಪಸ್ಥಿತರಿದ್ದರು.

ಇಂದಿನಿಂದ ನವರಾತ್ರಿ ಪೂಜೆ ಆರಂಭ



ನವರಾತ್ರಿ ಪೂಜೆ ಕಾರ್ಯಕ್ರಮದ ಪೋಸ್ಟರ್ ಬಿಡುಗಡೆ ಮಾಡಲಾಯಿತು.

ಹುಣಸೂರು, ಅ.2– ನಗರದ ಗ್ರಾಮ ದೇವತೆ ಶ್ರೀಮುತ್ತು ಮಾರಮ್ಮ ದೇವಸ್ಥಾನದಲ್ಲಿ ಅ.3ರಿಂದ ಅ.11ರವರೆಗೆ ನವರಾತ್ರಿ ಉತ್ಸವದ ಪೂಜೆ ಆರಂಭವಾಗಲಿದೆ ಎಂದು ದೇವಾಲಯ ಆಡಳಿತ ಮಂಡಳಿ ಅಧ್ಯಕ್ಷ ಹೆಚ್.ವೈ.ಮಹಾದೇವ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನವರಾತ್ರಿ ಉತ್ಸವದ ಅಂಗವಾಗಿ ನಿತ್ಯ ಸಂಜೆ 6ರಿಂದ 7.30ರವರೆಗೆ ದೇವಿಗೆ ಸರ್ವ ಅಲಂಕಾರ ಮಹಾಪೂಜೆ ನಡೆಯಲಿವೆ. ಅಲ್ಲದೇ ನಿತ್ಯ ಸಂಜೆ 6 ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ ಎಂದರು.

ಅ.3 ರಂದು ಪೇಟೆ ಬೀದಿಯ ಕಸ್ತೂರಿ ತಿಲಕ ಭಜನಾ ಮಂಡಳಿ, ಅರ್ಚನ ತಂಡದವರಿಂದ ಭಕ್ತಿಗೀತೆಗಳು. ಅ.4 ರಂದು ಶ್ರೀನಿವಾಸ ಚಿಕ್ಕ ವೆಂಕಟೇಗೌಡ ಹಾಗೂ ಸೋಮು ತಂಡದವರಿಂದ ಭಕ್ತಿಗೀತೆ. ಅ.5ರಂದು ಕೌಸ್ತಭ ಭಜನಾ ಮಂಡಳಿ, ಸಿಂಚನ ತಂಡದವರಿಂದ ಭಕ್ತಿಗೀತೆ ಹಾಗೂ ಇಂಚರಪ್ರಿಯ ಅವರಿಂದ ಭರತನಾಟ್ಯ. ಅ.6ರಂದು ರವಿ ಮೆಲೋಡಿಸ್ ಅವರಿಂದ ಭಕ್ತಿಗೀತೆ, ರಂಗ ಅಯ್ಯಪ್ಪನವರಿಂದ ಭರತನಾಟ್ಯ. ಅ.7ರಿಂದ ಪೃಥ್ವಿಕ್ ತಂಡದವರಿಂದ ಭಕ್ತಿಗೀತೆ, ವಾಸವಿ ಮಹಿಳಾ ಸಂಘದಿಂದ ಸಂಗೀತ ಕಾರ್ಯಕ್ರಮ, ಇಂಚರ ಪ್ರಿಯ ಅವರಿಂದ ಭರತನಾಟ್ಯ. ಅ.8ರಂದು ಮಹೇಂದ್ರ, ಯು.ಸಿ.ತಂಡದವರಿಂದ ಭಕ್ತಿಗೀತೆ, ತನ್ಮಿತ ಮನೋಹರ್ ಅವರಿಂದ ಭರತನಾಟ್ಯ. ಅ.9 ಅರ್ಚನಾ ತಂಡದಿಂದ ಭಕ್ತಿಗೀತೆ, ಇಂಚರ ಪ್ರಿಯರವರಿಂದ ಭರತನಾಟ್ಯ. ಅ.10ರಂದು ಗಾನ, ಕಿರಿಜಾಜಿ ಗಜೇಂದ್ರ ತಂಡದವರಿಂದ ಭಕ್ತಿಗೀತೆ, ತನ್ಮಿತ್ ಮನೋಹರ್ ಅವರಿಂದ ಭರತನಾಟ್ಯ. ಅ.11ರಂದು ಶ್ರೀನಿವಾಸ್ ತಂಡದವರಿಂದ ಭಕ್ತಿಗೀತೆ, ಇಂಚರ ಪ್ರಿಯ ಅವರಿಂದ ಭರತನಾಟ್ಯ ಏರ್ಪಡಿಸಲಾಗಿದ್ದು, ನಿತ್ಯ ರಾತ್ರಿ 7.30ಕ್ಕೆ ಮಹಾ ಮಂಗಳಾರತಿ ಮತ್ತು ಪ್ರಸಾದ ವಿನಿಯೋಗ ಮಾಡಲಾಗುವುದು ಎಂದರು.

ಅ.12ರಂದು ಅಮ್ಮನವರ ಉತ್ಸವ ನಡೆಯಲಿದ್ದು, ಮಧ್ಯಾಹ್ನ 12.30 ರಿಂದ ಪ್ರಮುಖ ಬೀದಿಗಳಲ್ಲಿ ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಉತ್ಸವ ನಡೆಯಲಿದೆ. ಮಂಜುನಾಥ ದೇವಾಲಯದ ಬಳಿ ಬನ್ನಿ ಮರಕ್ಕೆ ಪೂಜೆ ಮಾಡಿ ಬಾಳೆ ಗಿಡ ಕಡಿದು ಮತ್ತೆ ಉತ್ಸವ ಮೂರ್ತಿಯನ್ನು ದೇವಾಲಯಕ್ಕೆ ತರಲಾಗುವುದು ಎಂದರು.

ವಿಶೇಷ ಕಾರ್ಯಕ್ರಮ: ಅ.5ರಂದು ಮಧ್ಯಾಹ್ನ 3 ರಿಂದ 5 ಗಂಟೆವರೆಗೆ ಮಹಿಳೆಯರಿಗಾಗಿ ಮ್ಯೂಸಿಕಲ್ ಚೇರ್, ಫ್ಯಾನ್ಸಿ ಡ್ರೆಸ್ ಸ್ಪರ್ಧೆ, ಅ.7ರಂದು ರಂಗೋಲಿ ಸ್ಪರ್ಧೆ, ಲೆಮನ್ ಸ್ಪೂನ್ ಸ್ಪರ್ಧೆ ನಡೆಯಲಿದೆ. ಅ.9 ರಂದು ಪುರುಷರಿಗೆ ಮ್ಯೂಸಿಕಲ್ ಚೇರ್ ಕಾರ್ಯ ಏರ್ಪಡಿಸಲಾಗಿದೆ. ಶ್ರೀ ಸಂಗೊಳ್ಳಿ ರಾಯಣ್ಣ ಕ್ಷೇಮಾಭಿವೃದ್ಧಿ ಸಂಘದಿಂದ ವಿಜೇತರಿಗೆ ಬಹುಮಾನ ವಿತರಿಸಲಾಗುವುದು ಎಂದರು.

ಗೋಷ್ಠಿಯಲ್ಲಿ ಉಪಾಧ್ಯಕ್ಷ ಹೆಚ್.ಎಸ್.ಶಿವಯ್ಯ, ಪ್ರಧಾನ ಕಾರ್ಯದರ್ಶಿ ಹೆಚ್.ಎಂ.ಈಶ್ವರಯ್ಯ, ಜಂಟಿ ಕಾರ್ಯದರ್ಶಿ ಅಶೋಕ್ ರಾಜಲಿಂಗಯ್ಯ, ಪುರುಷೋತ್ತಮ್ ಗುಂಡುಮಣಿ ಹಾಜರಿದ್ದರು.

ಪ್ರಗತಿ ವಿದ್ಯಾಸಂಸ್ಥೆಯಲ್ಲಿ ಗಾಂಧಿ ಜಯಂತಿ



ಸಗೂರಿನ ಪ್ರಗತಿ ಶಾಲೆಯಲ್ಲಿ ಗಾಂಧಿ ಜಯಂತಿ ನಡೆಯಿತು.

ಸರಗೂರು, ಅ.2– ಪ್ರತಿಯೊಬ್ಬರೂ ಮಹಾತ್ಮ ಗಾಂಧೀಜಿ, ಲಾಲ್ ಬಹದ್ದೂರ್ ಶಾಸ್ತ್ರಿ ಅವರ ತತ್ವಾದರ್ಶಗಳನ್ನು ಪ್ರತಿಯೊಬ್ಬರೂ ಅನುಸರಿಸಬೇಕು ಎಂದು ಪ್ರಗತಿ ವಿದ್ಯಾಸಂಸ್ಥೆ ಆಡಳಿತಾಧಿಕಾರಿ ಗುರುದತ್ ತಿಳಿಸಿದರು.

ಪಟ್ಟಣದ ಪ್ರಗತಿ ವಿದ್ಯಾಸಂಸ್ಥೆ ಆವರಣದಲ್ಲಿ ಬುಧವಾರ ನಡೆದ ಗಾಂಧಿ, ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿಯಲ್ಲಿ ಮಾತನಾಡಿದ ಅವರು, ಅಹಿಂಸಾ ಮಾರ್ಗದ ಮೂಲಕ ಬ್ರಿಟಿಷರ ಕಪಿಮುಷ್ಟಿಯಿಂದ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಮಹಾತ್ಮ ಗಾಂಧೀಜಿ. ಇಂತಹ ಮಹಾತ್ಮರನ್ನು ಕೇವಲ ಒಂದೇ ದಿನಕ್ಕೆ ಸೀಮಿತಗೊಳಿಸದೆ ನಿತ್ಯ ನೆನೆಯಬೇಕು ಎಂದರು.

ಕಾಸಪ ಅಧ್ಯಕ್ಷ ಎಂ.ಕೆಂಡಗಣ್ಣಸ್ವಾಮಿ ಮಾತನಾಡಿದರು. ಶಾಲಾ ಮುಖ್ಯಶಿಕ್ಷಕ ಹೆಚ್.ಎಸ್.ಸತೀಶ್ ಮಾತನಾಡಿ, ಗಾಂಧೀಜಿ ಅವರು ಅಹಿಂಸಾ ಮಾರ್ಗದಿಂದ ಸ್ವಾತಂತ್ರ್ಯ ತಂದುಕೊಟ್ಟ ಮಹಾತ್ಮ. ಇಂಥವರನ್ನು ನೆನೆದುಕೊಳ್ಳುತ್ತಾ ಜೀವನದಲ್ಲಿ ಶಿಸ್ತು ಅಳವಡಿಸಿಕೊಳ್ಳಬೇಕು. ಜೀವನದಲ್ಲಿ ಉತ್ತಮ ಗುರಿ ತಲುಪಬೇಕು ಎಂದು ತಿಳಿಸಿದರು.

ಇದಕ್ಕೂ ಮುನ್ನ ಗಾಂಧೀಜಿ, ಲಾಲ್ ಬಹದ್ದೂರ್ ಶಾಸ್ತ್ರಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಕ ವೃಂದ, ಮಕ್ಕಳು ಇನ್ನಿತರರಿದ್ದರು.

ಬೆಟ್ಟದಪುರದಲ್ಲಿ ಗಾಂಧಿ ಜಯಂತಿ



ಬೆಟ್ಟದಪುರದಲ್ಲಿ ಗಾಂಧಿ ಜಯಂತಿ ನಡೆಯಿತು.

ಬೆಟ್ಟದಪುರ, ಅ.2– ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರೌಢ ಶಾಲಾ ವಿಭಾಗದಲ್ಲಿ ಮಹಾತ್ಮ ಗಾಂಧೀಜಿ ಅವರ 155ನೇ ಜನ್ಮದಿನಾಚರಣೆಯನ್ನು ಸರಳವಾಗಿ ಆಚರಿಸಲಾಯಿತು.

ಉಪ ಪ್ರಾಂಶುಪಾಲ ಮಂಜೇಗೌಡ ಅವರು ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ಈ ವೇಳೆ ಸಹ ಶಿಕ್ಷಕರಾದ ನಿಂಗರಾಜ್, ಕೆಂಪರಾಜು, ಜಗದೀಶ್, ಮೋಹನ್‌ಕುಮಾರ್, ಜ್ಯೋತಿ, ಅಮಿತಾ, ಮಮತಾ ನಾಯಕ್, ನಿವೃತ್ತ ದೈಹಿಕ ಶಿಕ್ಷಣ ಶಿಕ್ಷಕ ನಾರಾಯಣಗೌಡ, ವಿದ್ಯಾರ್ಥಿಗಳು ಹಾಜರಿದ್ದರು.

ಶಿಕ್ಷಣ ಕ್ಷೇತ್ರಕ್ಕೆ ರಾಜೇಂದ್ರಶ್ರೀಗಳ ಕೊಡುಗೆ ಅಪಾರ

ತಿ.ನರಸೀಪುರ, ಅ.2– ತಾಲೂಕಿನ ವಾಟಾಳು ಮಠದಲ್ಲಿ ಡಾ.ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ 109ನೇ ಜಯಂತಿ ಆಚರಿಸಲಾಯಿತು.

ರಾಜೇಂದ್ರಶ್ರೀಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಹೊಸಮಠದ ಶ್ರೀಚಿದಾನಂದ ಸ್ವಾಮೀಜಿ, ರಾಜೇಂದ್ರಶ್ರೀಗಳು ಸುತ್ತೂರು ಮಠ ಬೆಳೆಸಿ, ಬಡಮಕ್ಕಳಿಗೆ ಶಿಕ್ಷಣ ನೀಡಿದ ಮಾತೃ ಹೃದಯವುಳ್ಳವರಾಗಿದ್ದರು. ಶಿಕ್ಷಣ ಕ್ಷೇತ್ರಕ್ಕೆ ಅವರ ಕೊಡುಗೆ ಅಪಾರ ಎಂದು ಬಣ್ಣಿಸಿದರು.



ಕಾರ್ಯಕ್ರಮದಲ್ಲಿ ಡಾ.ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಮಾತನಾಡಿದರು.

ವಾಟಾಳು ಪೀಠಾಧ್ಯಕ್ಷ ಡಾ.ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಡಾ.ಶ್ರೀಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರು, ಗ್ರಾಮೀಣ ಮಕ್ಕಳ ವಿದ್ಯಾಭ್ಯಾಸದ ಸಮಸ್ಯೆ ಅರಿತು, ಅವರ ವಿದ್ಯಾಭ್ಯಾಸಕ್ಕೆ ಒತ್ತು ನೀಡಿ, ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸುವ ಮೂಲಕ ಹಸಿದ ಮಕ್ಕಳ ಹಸಿವು ನೀಗಿಸಿ ಅವರ ಭವಿಷ್ಯದ ದಾರಿದೀಪವಾಗಿದ್ದರು ಎಂದರು.

ಮಾಡ್ರಳ್ಳಿ ಮಠದ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಅಧ್ಯಕ್ಷ ಎಸ್ಎಂಆರ್ ಪ್ರಕಾಶ್, ನಿಕಟಪೂರ್ವ ಅಧ್ಯಕ್ಷ ತೊಟ್ಟವಾಡಿ ಮಹದೇವಸ್ವಾಮಿ, ಡೇರಿ ಅಧ್ಯಕ್ಷ ಡಿ.ಎಲ್.ಮಹದೇವಪ್ಪ, ತಾಪಂ ಮಾಜಿ ಸದಸ್ಯ ಚಂದ್ರಶೇಖರ್ ಮಾತನಾಡಿದರು.

ಈ ವೇಳೆ ಸಹಜಾನಂದ ಶ್ರೀಗಳು, ಗುರುಸ್ವಾಮೀಜಿ, ರಾಜಶೇಖರ ಸ್ವಾಮೀಜಿ, ವೀರಶೈವ ಲಿಂಗಾಯತ ಮಹಾಸಭಾ ನಿರ್ದೇಶಕರಾದ ನಂಜುಂಡಸ್ವಾಮಿ, ಸುಗಂಧರಾಜು, ಓಂಕಾರಸ್ವಾಮಿ, ಶಿವಕುಮಾರಸ್ವಾಮಿ, ತೋಂಟೇಶ್, ಬಿಜೆಪಿ ಕ್ಷೇತ್ರಾಧ್ಯಕ್ಷ ಶಿವಕುಮಾರ್, ಮುಖಂಡರಾದ ಕುಮಾರ್, ಪ್ರಭು, ಮಹೇಶಣ್ಣ ಬಸಪ್ಪ, ವಕೀಲ ಜ್ಞಾನೇಂದ್ರಮೂರ್ತಿ, ಮಹೇಶ್, ಜಗದೀಶ್, ಶೇಖರ್, ಮಹದೇವಸ್ವಾಮಿ, ನಿಲಸೋಗೆ ಶೇಖರಪ್ಪ, ಮಹದೇವಪ್ಪ, ಬಿ.ಎಂ.ಶಿವಮಲ್ಲಪ್ಪ, ಪಟೇಲ್ ಪರಮೇಶ್, ಸೋಮಶೇಖರ್, ಶಂಭಪ್ರ, ಅಂಗಡಿ ನಾಗೇಶ್, ಸುರೇಶ, ಕುಮಾರ್, ಪ್ರಕಾಶ್, ಮಂಜು, ರವಿ, ಮೂಗೂರು ಕುಮಾರಸ್ವಾಮಿ, ರಾಜು, ಕುಮಾರ್, ನಾಗೇಶ್ ಮತ್ತಿತರರಿದ್ದರು.

ಮೊಟ್ಟೆ ವಿತರಣೆ ಕಾರ್ಯಕ್ರಮಕ್ಕೆ ಚಾಲನೆ

ಅಜೀಂ ಪ್ರೇಮ್ ಜಿ. ಫೌಂಡೇಶನ್ ಕಾರ್ಯ ಶ್ಲಾಘನೀಯ: ಶಾಸಕ ಅನಿಲ್



ಕಾರ್ಯಕ್ರಮದಲ್ಲಿ ಶಾಸಕ ಅನಿಲ್ ಬಾಲಕಿಗೆ ಮೊಟ್ಟೆ ತಿನಿಸಿದರು.

ಹೆಚ್.ಡಿ.ಕೋಟೆ, ಅ.2– ಶಾಲಾ ಮಕ್ಕಳು ಅಪೌಷ್ಟಿಕತೆಗೆ ಒಳಗಾಗದೇ, ಆರೋಗ್ಯದಿಂದ ಇರಲು ಹೆಚ್ಚುವರಿ ನಾಲ್ಕು ದಿನಗಳು ಮೊಟ್ಟೆಗಳನ್ನು ನೀಡಲು ಮುಂದಾಗಿರುವ ಅಜೀಂ ಪ್ರೇಮ್ ಜಿ. ಫೌಂಡೇಶನ್ ಕಾರ್ಯ ಶ್ಲಾಘನೀಯ ಎಂದು ಶಾಸಕ ಅನಿಲ್ ಮೆಚ್ಚುಗೆ ವ್ಯಕ್ತಪಡಿಸಿದರು.

ಪಟ್ಟಣದ ಸರ್ಕಾರಿ ಬಾಲಕಿಯರ ಪ್ರೌಢಶಾಲಾ ಸಭಾಂಗಣದಲ್ಲಿ ಆಯೋಜಿಸಿದ್ದ ಮಕ್ಕಳಿಗೆ ಮೊಟ್ಟೆ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಸರ್ಕಾರ ಯಾವ ಮಗುವೂ ಹಸಿವಿನಿಂದ, ಅಪೌಷ್ಟಿಕತೆ ಅಥವಾ ಊಟದ ಸಮಸ್ಯೆಯಿಂದ ಶಾಲೆಯಿಂದ ಹೊರಗುಳಿಯಬಾರದು ಎಂದು ಪ್ರತಿ ಶಾಲೆಯಲ್ಲೂ ಮಧ್ಯಾಹ್ನದ ಊಟದ ಜೊತೆಗೆ ವಾರದಲ್ಲಿ ಎರಡು ದಿನ ಮೊಟ್ಟೆ ನೀಡುವ ಯೋಜನೆ ಜಾರಿಗೆ ತಂದಿದ್ದು, ಮಕ್ಕಳಿಗೆ 6 ದಿನ ಮೊಟ್ಟೆ ಸಿಗುವ ನಿಟ್ಟಿನಲ್ಲಿ ಹೆಚ್ಚುವರಿ ನಾಲ್ಕು ದಿನ ಮೊಟ್ಟೆ ವಿತರಣೆಗೆ ಮುಂದಾಗಿರುವ ಅಜೀಂ ಪ್ರೇಮ್ ಜಿ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಮೊಟ್ಟೆ ತಿನ್ನದೆ ಇರುವ ಮಕ್ಕಳಿಗೆ ಬಾಳೆಹಣ್ಣು, ಚಿಕ್ಕಿ ಮಿಠಾಯಿಗಳನ್ನು ವಿತರಿಸಲಾಗುವುದು. ಮಕ್ಕಳು ಇದನ್ನು ಸದುಪಯೋಗಪಡಿಸಿಕೊಂಡು ಶೈಕ್ಷಣಿಕ ಸಾಧನೆ ಮಾಡಬೇಕು ಎಂದರು.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಶ್ರೀನಿವಾಸ್, ಬಿಇಓ ಕಾಂತರಾಜು, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ರಾಜು, ಬಿಆರ್‌ಸಿ ಕೃಷ್ಣಯ್ಯ, ನೌಕರ ಸಂಘದ ತಾಲೂಕು ಅಧ್ಯಕ್ಷ ಮಹದೇವ, ಪುರಸಭೆ ಸದಸ್ಯ ಮಧುಕುಮಾರ್, ಡಿಸಿಸಿ ಸದಸ್ಯ ಪರಶಿವಮೂರ್ತಿ, ಅನಿಲ್, ಸಿಆರ್‌ಪಿ ದೀಪಾ, ಶಿಕ್ಷಕರಾದ ಚಂದ್ರಕುಮಾರ್, ರಾಜೇಶ್ವರಿ, ಶಿವನಂದ ರಾಠೋಡ್, ಭೀಮಪ್ಪ, ಪ್ರಕಾಶ್, ಪುರುಷೋತ್ತಮ, ಭೋಗ ನಂಜಯ್ಯ, ಬಸವರಾಜ್ ಇತರರಿದ್ದರು.

ಕಾಂಗ್ರೆಸ್ ಕಚೇರಿಯಲ್ಲಿ ಗಾಂಧಿ ಜಯಂತಿ



ಕಾಂಗ್ರೆಸ್ ಕಚೇರಿಯಲ್ಲಿ ಗಾಂಧಿ ಜಯಂತಿ ಆಚರಿಸಯಿತು.

ಹುಣಸೂರು, ಅ.2– ನಗರದ ಕಾಂಗ್ರೆಸ್ ಕಚೇರಿಯಲ್ಲಿ ಗಾಂಧಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜಯಂತಿ ಆಚರಿಸಲಾಯಿತು.

ಮಹನೀಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್, ಗಾಂಧೀಜಿಯವರು ಸತ್ಯ ಮತ್ತು ಅಹಿಂಸಾ ಮಾರ್ಗವನ್ನು ಜೀವನದುದ್ದಕ್ಕೂ ಪಾಲಿಸಿದರು. ಅವರ ಮುಂದಾಳತ್ವದಲ್ಲಿ ಅನೇಕ ಸತ್ಯಾಗ್ರಹಗಳು ನಡೆದು ಅಂತಿಮವಾಗಿ ಭಾರತ ಬ್ರಿಟಿಷರ ದಾಸ್ಯದಿಂದ ಮುಕ್ತಿ ಹೊಂದಲು ಸಾಧ್ಯವಾಯಿತು. ಇನ್ನು ಲಾಲ್ ಬಹದ್ದೂರ್ ಶಾಸ್ತ್ರಿ ಅವರು ಗಾಂಧೀಜಿಯವರ ಆದರ್ಶಗಳನ್ನು ಪಾಲಿಸುತ್ತಾ, ದೇಶ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಜೈ ಜವಾನ್ ಜೈ ಕಿಸಾನ್ ಎಂಬ ಧ್ಯೇಯವಾಕ್ಯ ಪ್ರತಿಪಾದಿಸಿದ ಮಹಾನ್ ವ್ಯಕ್ತಿ. ಈ ಮಹಾನ್ ನಾಯಕರ ಆದರ್ಶಗಳನ್ನು ನಾವೆಲ್ಲರು ಅಳವಡಿಸಿಕೊಂಡು ಅವರ ಮಾರ್ಗದರ್ಶನದಲ್ಲಿ ನಡೆಯೋಣ ಎಂದರು.

ಹುಣಸೂರು ನಗರಾಭಿವೃದ್ಧಿ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಹೆಚ್.ಪಿ.ಅಮರನಾಥ್ ಮಾತನಾಡಿ, ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಇವರಿಬ್ಬರೂ ಭಾರತದ ಭವ್ಯ ಚರಿತ್ರೆಯಲ್ಲಿ ವಿಶೇಷ ಸ್ಥಾನ ಗಳಿಸಿಕೊಂಡ ಮಹಾನ್ ಚೇತನಗಳು. ಇವರುಗಳ ಆದರ್ಶವನ್ನು ಇಂದಿನ ಯುವಜನತೆ ಪಾಲಿಸುವಂತೆ ಕಿವಿಮಾತು ಹೇಳಿದರು. ಕಾರ್ಯಕ್ರಮದಲ್ಲಿ ಮುಖಂಡರಾದ ಎಸ್.ಜಯರಾಮ್, ಅಫ್ರೋಜ್ ಅಹಮದ್, ಕುಮಾರ್, ಸಂತೋಷ್, ನಾಗರಾಜ್, ರಾಘು, ಶಾಂತ, ನೇತ್ರಾವತಿ, ಸಂಜು, ಮಂಜು ಸೇರಿದಂತೆ ಇತರರಿದ್ದರು.

ಕಂಪಲಾಪುರ ಗ್ರಾಪಂನಲ್ಲಿ ಗಾಂಧಿ ಜಯಂತಿ



ಕಂಪಲಾಪುರ ಗ್ರಾಪಂ ಕಚೇರಿಯಲ್ಲಿ ಗಾಂಧಿ ಜಯಂತಿ ಆಚರಿಸಲಾಯಿತು. ಅಧ್ಯಕ್ಷೆ ಜಾನಕಿ, ಉಪಾಧ್ಯಕ್ಷೆ ಸುಮಾ, ಪಿಡಿಓ ಪರಮೇಶ್, ಕಾರ್ಯದರ್ಶಿ ಸುಷ್ಮಾ, ಸುಮಿತ್ರಾ, ಮುಖಂಡ ಪ್ರಕಾಶ್‌ಗೌಡ, ಮಂಜು, ಸದಸ್ಯರಾದ ರಾಣಿ, ಶೀಲಾ, ಕವಿತಾ, ಪ್ರತಿಭಾ, ನಾಗರಾಜ್ ಸಣ್ಣತಮ್ಮಯ್ಯ ಹಾಗೂ ಸಿಬ್ಬಂದಿ ಹಾಜರಿದ್ದರು.

ಗಾಂಧೀಜಿಯವರ ತತ್ವಾದರ್ಶ ಅಳವಡಿಸಿಕೊಳ್ಳಿ

ಶಾಸಕ ಡಿ.ರವಿಶಂಕರ್



ಗಾಂಧೀ ಜಯಂತಿ ಕಾರ್ಯಕ್ರಮದಲ್ಲಿ ಪೌರಕಾರ್ಮಿಕರನ್ನು ಸನ್ಮಾನಿಸಲಾಯಿತು.

ಕೆ.ಆರ್.ನಗರ, ಅ.2– ಗಾಂಧೀಜಿಯವರ ಹೋರಾಟದಿಂದಾಗಿ ಇಂದು ನಾವು ಸ್ವಾತಂತ್ರ್ಯ ಪಡೆದು ನೆಮ್ಮದಿ ಜೀವನ ನಡೆಸುತ್ತಿದ್ದೇವೆ ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು. ಪಟ್ಟಣದ ತಾಲೂಕು ಕಚೇರಿ ಆವರಣ ದಲ್ಲಿ ನಡೆದ ಗಾಂಧಿ ಜಯಂತಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಗಾಂಧಿ ಇಡೀ ಜಗತ್ತಿನ ನಾಯಕ ಎಂಬ ಗೌರವ ದೊರೆತಿರುವುದು ಭಾರತೀಯರಿಗೆ ಸಿಕ್ಕ ಹೆಗ್ಗಳಿಕೆ ಎಂದರು.

ಜಯಂತಿ ಆಚರಣೆ ಮತ್ತು ಭಾಷಣಗಳಿಂದ ಗಾಂಧೀಜಿಯವರ ಆಶಯಗಳು ಈಡೇರುವುದಿಲ್ಲ. ಗಾಂಧೀಜಿಯವರ ಬದುಕಿನ ಮೌಲ್ಯ ಮತ್ತು ಸಂದೇಶಗಳನ್ನು ಎಲ್ಲರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಆಗ ಮಾತ್ರ ಜಯಂತಿ ಆಚರಣೆಗೆ ಅರ್ಥ ಬರಲಿದೆ ಎಂದು ತಿಳಿಸಿದರು.

ಗಾಂಧೀಜಿಯವರು ದೇಶಿಯ ಉತ್ಪನ್ನಗಳನ್ನು ಬಳಸುವಂತೆ ಮತ್ತು ಸರಳತೆಯ ಜೀವನ ನಡೆಸಲು ಕರೆ ನೀಡಿದ್ದರು. ಇದರಿಂದ ಪ್ರೇರಣೆಗೊಂಡು ಇಂದಿಗೂ ಹಲವರು ಸರಳ ಜೀವನ ನಡೆಸುತ್ತಿರುವುದನ್ನು ಕಾಣುತ್ತಿದ್ದೇವೆ. ಹೀಗಾಗಿ ಯುವ ಜನತೆ ಸರಳತೆಗೆ ಹೆಚ್ಚು ಒತ್ತು ನೀಡಬೇಕು ಎಂದು ಕೋರಿದರು.

ಲಾಲ್ ಬಹುದ್ದೂರ್ ಶಾಸ್ತ್ರೀಯವರು ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದಲ್ಲದೆ ಪ್ರಧಾನಿಯಾದ ವೇಳೆ 'ಜೈ ಜವಾನ್ ಜೈ ಕಿಸಾನ್' ಎಂಬ ಘೋಷವಾಕ್ಯದೊಂದಿಗೆ ರೈತರಿಗೆ ಸಾಕಷ್ಟು ಅನುಕೂಲವಾಗುವಂತಹ ಯೋಜನೆಗಳನ್ನು ಜಾರಿಗೆ ತಂದಿದ್ದರು. ಇಂತಹ ಮಹಾತ್ಮರ ಜಯಂತಿಯನ್ನು ಮುಂದಿನ ವರ್ಷ ವಿನೂತನವಾಗಿ ಆಚರಿಸಲು ಕ್ರಮ ವಹಿಸುವುದಾಗಿ ಹೇಳಿದರು.

ಎಂಎಲ್‌ಸಿ ಹೆಚ್.ವಿಶ್ವನಾಥ್ ಮಾತನಾಡಿ, ಜಯಂತಿಗಳನ್ನು ಆಚರಣೆ ಮಾಡುತ್ತಿರುವುದರಿಂದ ಸರ್ಕಾರಕ್ಕೆ ಆರ್ಥಿಕ ಹೊರೆಯಾಗಲಿದೆ. ಆದ್ದರಿಂದ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟ ಗಾಂಧೀಜಿ, ಸಂವಿಧಾನ ರಚಿಸಿದ ಡಾ.ಬಿ.ಆರ್.ಅಂಬೇಡ್ಕರ್ ಈ ಇಬ್ಬರ ಜಯಂತಿಗಳನ್ನು ಹೊರತುಪಡಿಸಿ ಉಳಿದವನ್ನು ರದ್ದು ಪಡಿಸಬೇಕೆಂದು ಒತ್ತಾಯಿಸಿದರು.

ಈ ವೇಳೆ ಐವರು ಪೌರ ಕಾರ್ಮಿಕರನ್ನು ಸನ್ಮಾನಿಸಲಾಯಿತು. ಶಿಕ್ಷಕಿ ವಿಜಯಲಕ್ಷ್ಮಿ, ತಹಸೀಲ್ದಾರ್ ಜಿ.ಸುರೇಂದ್ರಮೂರ್ತಿ ಮಾತನಾಡಿದರು. ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಕೆ.ಎಸ್.ಮಹೇಶ್, ಪುರಸಭೆ ಸದಸ್ಯ ಪ್ರಕಾಶ್, ಮಾಜಿ ಅಧ್ಯಕ್ಷ ನರಸಿಂಹರಾಜು, ಮಾಜಿ ಸದಸ್ಯ ಸೈಯದ್ ಅಸ್ಲಾಂ, ಇಓ ಕುಲ್‌ದೀಪ್, ಬಿಇಓ ಆರ್.ಕೃಷ್ಣಪ್ಪ, ಸಿಡಿಪಿಓ ಸಿ.ಎಂ. ಅಣ್ಣಯ್ಯ, ಟಿಹೆಚ್‌ಓ ಡಾ.ಡಿ.ನಟರಾಜ್, ಪುರಸಭೆ ಮುಖ್ಯಾಧಿಕಾರಿ ಬಿ.ವಿ.ವೆಂಕಟೇಶ್, ನೀರಾವರಿ ಇಲಾಖೆ ಎಇಇ ಅಯಾಜ್ ಪಾಷ, ಅರಣ್ಯ ಇಲಾಖೆ ಹರಿಪ್ರಸಾದ್, ಲೋಕೋಪಯೋಗಿ ಇಲಾಖೆ ಎಇಇ ಸುಮಿತ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎಂ.ಎಸ್.ಮಹದೇವ್, ಉದಯಶಂಕರ್, ಮುಖಂಡರಾದ ತಿಮ್ಮಶೆಟ್ಟಿ, ಕೆ.ಪಿ.ಜಗದೀಶ್, ಬಿ.ಹೆಚ್.ಕುಮಾರ್, ಚಂದ್ರು, ಸುರೇಶ್, ರಾಮಾಚಾರಿ, ಎಂ.ಲೋಕೇಶ್, ಮಹದೇವ್ ಮತ್ತಿತರರಿದ್ದರು.

ನಿಧನ

ಪ್ರದೀಪ್ ಕುಮಾರ್



ಸರಗೂರು, ಅ.2– ಪಟ್ಟಣದ 7ನೇ ವಾರ್ಡ್ ನಿವಾಸಿ ಪ್ರದೀಪ್ ಕುಮಾರ್ (55) ಬುಧವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಸಂಜೆ ಪಟ್ಟಣದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪುಟ್ಟನರಸಮ್ಮ



ಹೆಚ್.ಡಿ.ಕೋಟೆ, ಅ.2– ತಾಲೂಕಿನ ಗಂಗಡಹೊಸಳ್ಳಿ ಗ್ರಾಮದ ನಿವಾಸಿ ಲೇ.ಮರಿಜವರನಾಯಕರ ಪತ್ನಿ ಪುಟ್ಟನರಸಮ್ಮ (80) ಬುಧವಾರ ನಿಧನರಾದರು. ಮೃತರು ಇಬ್ಬರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಬೆಳಗ್ಗೆ 11 ಗಂಟೆಗೆ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಅದ್ಧೂರಿ ದಸರಾ ಗುಂಗಲ್ಲಿ ಪರಂಪರೆಯ ಬಗೆಗಿನ ಪ್ರಜ್ಞಾಶೂನ್ಯ ಸ್ಥಿತಿಯಲ್ಲಿ ಸ್ಥಳೀಯ ಆಡಳಿತ!?

ದುಸ್ಥಿತಿಯಲ್ಲಿ ಮೈಸೂರಿನ ಪಾರಂಪರಿಕ ನಿರ್ಮಾಣಗಳು!

● ನಿರಂತರ ನಿರ್ಲಕ್ಷ್ಯ ನಡುವೆ ದಸರಾಗಾದರೂ ಇವುಗಳ ನೆನಪಾಗಬಾರದೇ? ● ಜಿಲ್ಲಾಡಳಿತ, ಮೈಸೂರು ಮಹಾನಗರ ಪಾಲಿಕೆ ಆಡಳಿತಕ್ಕೆ ಇವುಗಳೇಕೆ ಕಾಣಿಸುತ್ತಿಲ್ಲ ● ಮೈಸೂರಿನ ಪರಂಪರೆಯ ಅರಿವು ಜನಪ್ರತಿನಿಧಿಗಳು, ಅಧಿಕಾರಿಗಳಿಗಿಲ್ಲ ಎಂಬುದಕ್ಕೆ ಇದೇ ಸಾಕ್ಷಿಯಲ್ಲವೇ?


ಮೈಸೂರು, ಅ.2(ಪಿಎಂ)– ದಸರಾ ಮಹೋತ್ಸವ ಹಿನ್ನೆಲೆಯಲ್ಲಿ ನಗರ ನಿರ್ಮಾಣಗಳು ಸುಣ್ಣ–ಬಣ್ಣಗಳಿಂದ ಕಂಗೊಳಿಸುತ್ತಿದ್ದು, ನಗರದ ರಸ್ತೆ–ವೃತ್ತಗಳು ವಿದ್ಯುತ್ ದೀಪಾಲಂಕಾರದಿಂದ ಜಗಮಗಿಸುತ್ತಿವೆ. ಆದರೆ ಈ ನಡುವೆ ಪಾರಂಪರಿಕ ಮಹತ್ವ ಹೊಂದಿರುವ 'ಸ್ವಾಗತ ಕಮಾನುಗಳು' ಯಾವುದೇ ಬಣ್ಣದ ಲೇಪನವಿಲ್ಲದೇ, ದುರಸ್ತಿ ಭಾಗ್ಯವನ್ನೂ ಕಾಣದೇ ನಿರ್ಲಕ್ಷ್ಯಕ್ಕೆ ಒಳಗಾಗಿವೆ.

ನಗರದ ನಜರ್‌ಬಾದಿನ ಸರ್ಕಾರಿ ಅತಿಥಿ ಗೃಹದ ಎದುರಿನ ಸ್ವಾಗತ ಕಮಾನು (ಹೆರಿಟೇಜ್ ಆರ್ಚ್) ಸೇರಿದಂತೆ ಮೈಸೂರು ನಗರದ ಎಲ್ಲಾ ಸ್ವಾಗತ ಕಮಾನುಗಳು ಸೂಕ್ತ ನಿರ್ವಹಣೆ ಇಲ್ಲದೇ ಪಾಳು ಬಿದ್ದಂತೆ ಕಂಡು ಬರುತ್ತಿವೆ. ಹೀಗಾಗಿ ಪರಂ ಪರೆಯ ಬಗೆಗಿನ ಪ್ರಜ್ಞಾಶೂನ್ಯ ಸ್ಥಿತಿಗೆ ಮೈಸೂರು ಸ್ಥಳೀಯ ಆಡಳಿತ ತಲುಪಿದೆಯೇ? ಎಂಬ ಪ್ರಶ್ನೆ ಉದ್ಭವಿಸಿದೆ.

ಮೈಸೂರು 'ಪಾರಂಪರಿಕ ನಗರ' ಎಂದೂ ಖ್ಯಾತಿಗೊಂಡಿದೆ. ಸಾಕಷ್ಟು ಪಾರಂಪರಿಕ ಕಟ್ಟಡಗಳು ನಗರದಲ್ಲಿ ಇರುವ ಕಾರಣಕ್ಕೆ ಮೈಸೂರು ಈ ಹಿರಿಮೆಯನ್ನು ಗಳಿಸಿಕೊಂಡಿದೆ. ಇದು ಮೈಸೂರಿಗರ ಹೆಮ್ಮೆಯೂ ಹೌದು. ಆದರೆ ಸ್ಥಳೀಯ ಆಡಳಿತ ಮಾತ್ರ ನಗರದ ಪಾರಂಪರಿಕ ನಿರ್ಮಾಣಗಳ ಸಂರಕ್ಷಣೆಗೆ ಗಮನ ನೀಡದೇ ಪಾರಂಪರಿಕ ಪ್ರಜ್ಞೆ ಮರೆತಿದೆ. ಈ ಬಾರಿ ಅದ್ಧೂರಿ ದಸರಾ ಆಚರಿಸಲಾಗುತ್ತಿದೆ. ಆದರೆ ಈ ಅದ್ಧೂರಿತನದಲ್ಲಿ ಅದೇಕೋ ಪಾರಂಪರಿಕ ಕಮಾನುಗಳಿಗೆ ಸ್ಥಾನವನ್ನೇ ಕಲ್ಪಿಸಿಲ್ಲ. ಅರ್ಥಾತ್ ಅವುಗಳನ್ನು ಕಡೆಗಣಿಸಲಾಗಿದೆ.

ನಗರದ ಹೃದಯಭಾಗದಲ್ಲಿ ಇರುವ ಸರ್ಕಾರಿ ಅತಿಥಿ ಗೃಹದ ಎದುರಿನ ಸ್ವಾಗತ ಕಮಾನು ದುಸ್ಥಿತಿಗೆ ತಲುಪಿದ್ದು, ಕಲಾಕೃತಿಗಳನ್ನೂ ಒಳಗೊಂಡಂತೆ ಅತ್ಯಂತ ಸುಂದರವಾಗಿ ಇದನ್ನು ಮೈಸೂರು ಮಹಾರಾಜರು ನಿರ್ಮಾಣ ಮಾಡಿದ್ದಾರೆ. ಸಮೀಪದಲ್ಲಿ ನೋಡಿದರೆ ಅದರಲ್ಲಿನ ಪುಷ್ಪ ಕಲಾಕೃತಿ ಸೇರಿದಂತೆ ವಿವಿಧ ರೀತಿಯ ಕಲಾತ್ಮಕ ಚಿತ್ತಾರವೂ ಉಬ್ಬು ಚಿತ್ರ ಮಾದರಿಯಲ್ಲಿ ಮೂಡಿಸಿರುವುದು ಕಂಡು ಬರಲಿದ್ದು, ಅವುಗಳನ್ನು ನೋಡುವುದೇ ಒಂದು ಸೊಗಸು. ಆದರೆ ಈ ನಿರ್ಮಾಣಕ್ಕೆ ಬಣ್ಣ ಬಳಿದು ಎಷ್ಟೋ ದಿನಗಳೇ ಆಗಿದ್ದು, ಇದರ ಮೇಲ್ಭಾಗ ಸೇರಿದಂತೆ ಅಂಚುಗಳಲ್ಲಿ ಶ್ವೇತವರ್ಣದ ಲೇಪನ ಮಾಡಿರುವುದು ಈಗ ಕಪ್ಪು ಬಣ್ಣಕ್ಕೆ ತಿರುಗಿ ಅಂದಗೆಟ್ಟಿದೆ.

ಈ ಪಾರಂಪರಿಕ ಕಮಾನು ಬಲಿಷ್ಠ ಮತ್ತು ಸದೃಢ ಎಂಬುದಕ್ಕೆ ನಿರ್ಲಕ್ಷ್ಯತೆ ನಡುವೆಯೂ ಇದು ಭದ್ರವಾಗಿ ನಿಂತಿರುವುದೇ ಸಾಕ್ಷಿ. ಹೀಗಿರುವಾಗ ನಿರಂತರವಾಗಿ ಸೂಕ್ತ ನಿರ್ವಹಣೆ ಮಾಡಿದರೆ ಮುಂದಿನ ಪೀಳಿಗೆಗೆ ಸುಸ್ಥಿತಿಯಲ್ಲಿ ಇದನ್ನು ಕೊಡಲು ಸಾಧ್ಯವಿದೆ. ಆ ಮೂಲಕ ನಮ್ಮ ಪರಂಪರೆಯ ವೈಭವವನ್ನು ಅವರಿಗೆ ಕಟ್ಟಿ ಕೊಡಲು ಸಹಕಾರಿಯಾಗಲಿದೆ. ಆದರೆ ಆ ಬದ್ಧತೆ ನಮ್ಮ ಆಡಳಿತ ವರ್ಗಕ್ಕೆ ಇದ್ದಂತೆ





ಮೈಸೂರಿನ ನಜರ್‌ಬಾದಿನ ಸರ್ಕಾರಿ ಅತಿಥಿ ಗೃಹದ ಎದುರಿನ ಸ್ವಾಗತ ಕಮಾನು ದುಸ್ಥಿತಿಯಲ್ಲಿರುವುದು.

ಕಾಣುತ್ತಿಲ್ಲ. ಈ ಕಮಾನಿನ ಅಲ್ಲಲ್ಲಿ ಗಿಡಗಂಟಿಗಳು ಬೆಳೆದಿದ್ದು, ಬಳ್ಳಿಗಳೂ ಹಬ್ಬಿವೆ. ಸುಣ್ಣದ ಗಾರೆಯು ಅಲ್ಲಲ್ಲಿ ಕಿತ್ತು ಬಂದಿದ್ದು, ಒಳಗಿನ ಇಟ್ಟಿಗೆಗಳಿಗೂ ಹಾನಿ ಆಗುತ್ತಿದೆ.

ಭೂಮಿ ಮೇಲೆ ಬೆಳೆಯಬೇಕಿದ್ದ ಗಿಡಗಂಟಿಗಳು ಈ ನಿರ್ಮಾಣದಲ್ಲಿ ಬೆಳೆಯುವ ಮೂಲಕ ಅದಕ್ಕೆ ಹಾನಿಯುಂಟು ಮಾಡುವಂತಾಗಿದೆ. ದಸರಾ ಹಿನ್ನೆಲೆಯಲ್ಲಿ ಊರಿಗೆಲ್ಲಾ ದೀಪಾಲಂಕಾರ ಮಾಡಲಾಗಿದೆ. ಆದರೆ ಇದರಲ್ಲಿನ ಕೆಟ್ಟಿರುವ ಬಲ್ಬ್‌ಗಳನ್ನಾದರೂ ಬದಲಿಸದೇ ಇರುವುದು ದುರಂತವೇ ಸರಿ. ಈ ನಿರ್ಮಾಣದ ಕೆಳಗೆ ಪಾರ್ಥೇನಿಯಂ ಗಿಡಗಳು ಸೇರಿದಂತೆ ಬೇಡದ ಕಳೆ ಬೆಳೆದು ನಿಂತಿದೆ. ಬೆಂಗಳೂರಿನಿಂದ ಆಗಮಿಸುವವರಿಗೆ ಮೊಟ್ಟ ಮೊದಲು ಕಾಣಸಿಗುವ ಈ ಪಾರಂಪರಿಕ ನಿರ್ಮಾಣಕ್ಕೆ ಸೌಂದರ್ಯೀಕರಣ ಮಾಡುವುದು ಸೂಕ್ತವಿತ್ತು. ಆದರೆ ಅದರಲ್ಲಿ ಕೆಲ ಭಾಗದಲ್ಲಿ ಸುಣ್ಣದ ಗಾರೆ ಉದುರಿ ಅಸ್ಥಿಪಂಜರದಂತೆ ಗೋಡೆ ಒಳಗಿನ ಇಟ್ಟಿಗೆಗಳು ಗೋಚರಿಸುತ್ತಿದ್ದರೂ ದುರಸ್ತಿ ಮಾಡಬೇಕೆನ್ನುವ ಗೋಜಿಗೆ ಆಡಳಿತ ವರ್ಗ ಹೋಗಿಲ್ಲ. ಇದರ ಕಬ್ಬಿಣ ಗೇಟ್‌ಗಳಿಗೂ ಹಾನಿಯುಂಟಾಗಿದೆ. ಚೌಕಾಕಾರದಲ್ಲಿ ಕಂಬಗಳನ್ನು ಒಳಗೊಂಡಂತೆ ಗೋಡೆ ಮಾದರಿಯಲ್ಲಿ ಕಟ್ಟಿರುವ ಈ ಪಾರಂಪರಿಕ ನಿರ್ಮಾಣ ನಿಜಕ್ಕೂ ವಿಶೇಷ.

ಇನ್ನು ಕೃಷ್ಣರಾಜ–ಬುಲೇವಾರ್ಡ್ ರಸ್ತೆ ಹಾಗೂ ಹುಣಸೂರು ರಸ್ತೆ ಜಂಕ್ಷನ್‌ನಲ್ಲಿ ಹಳೇ ಜಿಲ್ಲಾಧಿಕಾರಿ ಕಚೇರಿ ಸಮೀಪವಿರುವ ಕಮಾನು ದ್ವಾರದ ಪರಿಸ್ಥಿತಿ ಇದಕ್ಕಿಂತ ಭಿನ್ನವಿಲ್ಲ. ಸೂಕ್ತ ನಿರ್ವಹಣೆ ಇಲ್ಲದೇ ಇದೂ ಸೊರಗುತ್ತಿದೆ. ಈ ಕಮಾನಿಗೆ ಸಮೀಪದಲ್ಲಿರುವ ಸರ್ಕಾರಿ ಕಟ್ಟಡಗಳು ವಿದ್ಯುತ್ ದೀಪಗಳಿಂದ ಶೃಂಗಾರಗೊಂಡಿದ್ದು, ಇದರ ನಡುವೆ ಈ ಕಮಾನು, ಸುಣ್ಣ ಬಣ್ಣವಿಲ್ಲದೆ ನಿಂತಿದೆ. ಈ ರಸ್ತೆಯಲ್ಲಿ ದೀಪಾಲಂಕಾರ ಮಾಡಿರುವ ಹಿನ್ನೆಲೆಯಲ್ಲಿಯೇನೋ ಗೊತ್ತಿಲ್ಲ, ಈ ಕಮಾನಿಗೂ ಒಂದಿಷ್ಟು ದೀಪಾಲಂಕಾರ ಮಾಡಲಾಗಿದೆ. ಆದರೆ ಅದಕ್ಕೆ ಒಂದಿಷ್ಟು ಬಣ್ಣವನ್ನೂ ಕಾಣಿಸಿಲ್ಲ ನಮ್ಮ ಅಧಿಕಾರಿಗಳು. ಜೊತೆಗೆ ಗಿಡಗಂಟಿ ಬೆಳೆದಿದ್ದು, ಅವುಗಳನ್ನು ತೆರವು ಸಹ ಮಾಡಿಲ್ಲ. ಹಾನಿಯಾದ ಭಾಗಕ್ಕೆ ಕಾಂಕ್ರೀಟ್ ಸಹ ಮಾಡಿಲ್ಲ. ಇದು ಈ ಬಾರಿಯ ಅದ್ಧೂರಿ ದಸರಾದ ಪರಿ.

ಮತ್ತೊಂದು ಕಮಾನು ದ್ವಾರದ ಸ್ಥಿತಿ ಹೇಳತೀರದು. ಅದೇ ಮೈಸೂರಿನ ತಿ.ನರಸೀಪುರ ರಸ್ತೆಯಲ್ಲಿರುವ (ಲಲಿತ ಮಹಲ್ ರಸ್ತೆ) ಪಾರಂಪರಿಕ 'ಸ್ವಾಗತ ಕಮಾನು'. ಇದು ಎಷ್ಟೋ ವರ್ಷಗಳಿಂದ ಸೂಕ್ತ ನಿರ್ವಹಣೆ ಇಲ್ಲದೇ ಸೊರಗುತ್ತಿದೆ. ಇದರ ಎರಡು ಪ್ರಧಾನ ಕಂಬಗಳಲ್ಲಿ ತಲಾ ಒಂದು ಗಂಡಭೇರುಂಡಗಳನ್ನು ಉಬ್ಬು ಚಿತ್ರ ಮಾದರಿಯಲ್ಲಿ ಮೂಡಿಸಲಾಗಿದೆ. ಆದರೆ ನಿರ್ವಹಣೆ ಕೊರತೆಯಿಂದ ಅವುಗಳ ಅಂದವೂ ಕುಂದಿ ಹೋಗಿದೆ. ಈ ಪಾರಂಪರಿಕ ನಿರ್ಮಾಣ ಸಂರಕ್ಷಣೆಗೆ ಕಾಳಜಿ ವಹಿಸಿ, ಸುತ್ತಲು ಉದ್ಯಾನವನ ಮತ್ತು ಕಾರಂಜಿ ಹೊಮ್ಮಿಸಿದ್ದರೆ, ಅದರ ಅಂದ ಇಮ್ಮಡಿಗೊಳ್ಳುತ್ತಿತ್ತು. ದುರದೃಷ್ಟವಶಾತ್ ಆ ಬಗ್ಗೆ ಸಂಬಂಧಿಸಿದವರು ತಲೆಕೆಡಿಸಿಕೊಂಡಿಲ್ಲ.

ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ಆವರಣದಲ್ಲಿ ಇದ್ದೂ ಇಲ್ಲದಂತಾಗಿರುವ ಸ್ವಾಗತ ಕಮಾನಿನ ಪರಿಸ್ಥಿತಿ ಏನಾಗಿದೆಯೂ ಗೊತ್ತಿಲ್ಲ. ಇಲ್ಲಿನ ಬಸ್ ತಂಗುದಾಣದ ಮರೆಯಲ್ಲಿ ಅದು ಸೊರಗುವಂತಾಗಿದೆ. ಇನ್ನು ಸಬ್‌ಅರ್ಬನ್ ಬಸ್ ನಿಲ್ದಾಣದ ಸಮೀಪ ಇರ್ವಿನ್ ರಸ್ತೆ ಹಾಗೂ ಬೆಂಗಳೂರು–ನೀಲಗಿರಿ ರಸ್ತೆಯ ಜಂಕ್ಷನ್‌ನಲ್ಲಿರುವ ಕಮಾನು ಗೇಟ್ ಕಥೆಯೂ ಇದಕ್ಕಿಂತ ಭಿನ್ನವಾಗಿಲ್ಲ. ಅದರ ಸೂಕ್ತ ನಿರ್ವಹಣೆ–ಸಂರಕ್ಷಣೆಗೆ ನಿಗಾವಹಿಸುವವರೇ ಇಲ್ಲ. ಇದರ ಸುತ್ತಲು ಬ್ಯಾರಿಕೇಡ್‌ಗಳ ಬಂಧನ ವಿಧಿಸಿದ್ದು, ಇದರ ಸಂರಕ್ಷಣೆ– ಸೌಂದರ್ಯೀಕರಣಕ್ಕೆ ಮುಂದಾಗಿದ್ದರೆ, ಬಸ್ ನಿಲ್ದಾಣದಲ್ಲಿ ಬಂದಿಳಿಯುವ ಪ್ರವಾಸಿಗರಿಗೆ ನೋಡಲು ಅಂದವಾಗಿರುತ್ತಿತ್ತು. ಆದರೆ ಆ ನಿಟ್ಟಿನಲ್ಲಿ ಆಡಳಿತ ನಡೆಸುವವರು ಮಾತ್ರ ಯೋಚಿಸುತ್ತಲೇ ಇಲ್ಲ.



ಮೈಸೂರಿನ ಕೃಷ್ಣರಾಜ–ಬುಲೇವಾರ್ಡ್ ರಸ್ತೆಯಲ್ಲಿ ಹಳೇ ಜಿಲ್ಲಾಧಿಕಾರಿ ಕಚೇರಿ ಸಮೀಪದ ಕಮಾನು ದ್ವಾರಕ್ಕೂ ಬಣ್ಣ–ದುರಸ್ತಿ ಭಾಗ್ಯ ಕಲ್ಪಿಸದೇ ಇರುವುದನ್ನು ಕಾಣಬಹುದು.



ಮೈಸೂರಿನ ತಿ.ನರಸೀಪುರ ರಸ್ತೆಯಲ್ಲಿರುವ (ಲಲಿತ ಮಹಲ್ ರಸ್ತೆ) ಪಾರಂಪರಿಕ ಸ್ವಾಗತ ಕಮಾನು ಸಹ ಹಲವು ವರ್ಷಗಳಿಂದ ನಿರ್ಲಕ್ಷ್ಯಕ್ಕೆ ಒಳಗಾಗಿ ದುರವಸ್ಥೆಗೆ ತಲುಪಿರುವುದನ್ನು ಕಾಣಬಹುದು.

ಮೈಸೂರಲ್ಲಿ ಮುಖ್ಯಮಂತ್ರಿ; ದಸರಾ ಉದ್ಘಾಟನೆಯಲ್ಲಿ ಉಪಸ್ಥಿತಿ



ಮೈಸೂರು, ಅ.2(ಎಂಕೆ)– ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ ಮಹೋತ್ಸವ ಹಿನ್ನೆಲೆಯಲ್ಲಿ ವಿಶೇಷ ವಿಮಾನದಲ್ಲಿ ಸಿಎಂ ಸಿದ್ದರಾಮಯ್ಯ ಬುಧವಾರ ರಾತ್ರಿ ಮೈಸೂರಿಗೆ ಆಗಮಿಸಿದರು.

ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ರಾತ್ರಿ 9 ಗಂಟೆಗೆ ನಿರ್ಗಮಿಸಿದ ಅವರು ರಾತ್ರಿ 9.30ಕ್ಕೆ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಿದ್ದು, ನಾಳೆ(ಅ.3) ಬೆಳಗ್ಗೆ 9.15ಕ್ಕೆ ಚಾಮುಂಡಿಬೆಟ್ಟದಲ್ಲಿ ನಾಡದೇವಿ ಶ್ರೀ ಚಾಮುಂಡೇಶ್ವರಿಗೆ ಅಗ್ರಪೂಜೆಯೊಂದಿಗೆ 2024ರ ದಸರಾ ಮಹೋತ್ಸವ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ನಂತರ ದಸರಾ ಚಲನಚಿತ್ರೋತ್ಸವ, ದಸರಾ ಫಲಪುಷ್ಪ ಪ್ರದರ್ಶನ, ದಸರಾ ಕುಸ್ತಿ ಪಂದ್ಯಾವಳಿ, ದಸರಾ ಕ್ರೀಡಾಕೂಟ, ದಸರಾ ಸಾಂಸ್ಕೃತಿಕ ವೇದಿಕೆ ಕಾರ್ಯಕ್ರಮ ಹಾಗೂ ದಸರಾ ವಸ್ತುಪ್ರದರ್ಶನವನ್ನು ಉದ್ಘಾಟಿಸಲಿದ್ದಾರೆ.

ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಕಂಗೊಳಿಸುತ್ತಿದೆ ಫಲಪುಷ್ಪ ಕಾಶಿ!



ಕುಕ್ಕರಹಳ್ಳಿ ಕೆರೆಯ ಪೂರ್ವ ಮತ್ತು ಪಶ್ಚಿಮ ದಂಡೆ ಹಾಗೂ ಕುವೆಂಪು ವನದಲ್ಲಿ ವಿವಿಧ ಬಗೆಯ ಅಲಂಕಾರಿಕ ಗಿಡಗಳು, ಬಣ್ಣ ಬಣ್ಣದ ಪುಷ್ಪಗಳು, ತರಕಾರಿ ಹಾಗೂ ವಿವಿಧ ಬಗೆಯ ಸೊಪ್ಪಿನ ಗಿಡಗಳ '19ನೇ ವರ್ಷದ ದಸರಾ ಫಲಪುಷ್ಪ ಪ್ರದರ್ಶನ' ವಾಯುವಿಹಾರಿಗಳ ಮನಸ್ಸಿಗೆ ಮುದ ನೀಡುತ್ತಿವೆ.

ಚಾಮುಂಡೇಶ್ವರಿ ಆಶೀರ್ವಾದದಿಂದ ದಸರಾ ಯಶಸ್ವಿಯಾಗಿ ನೆರವೇರಲಿದೆ

ದಸರಾ ಉತ್ಸವ ವಿಶೇಷಾಧಿಕಾರಿಗಳೂ ಆದ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ್ ರೆಡ್ಡಿ ವಿಶ್ವಾಸ



ಮೈಸೂರು, ಅ.2(ಎಂಕೆ)– ದಸರಾ ಮಹೋತ್ಸವಕ್ಕೆ ಜಿಲ್ಲಾಡಳಿತ ಸಕಲ ಸಿದ್ಧತೆ ಮಾಡಿಕೊಂಡಿದೆ. ನಾಡದೇವಿ ಚಾಮುಂಡೇಶ್ವರಿಯ ಆಶೀರ್ವಾದದೊಂದಿಗೆ ದಸರಾ ಯಶಸ್ವಿಯಾಗಿ ನಡೆಯಲಿದೆ ಎಂದು ಮೈಸೂರು ಜಿಲ್ಲಾಧಿಕಾರಿಗಳೂ ಆದ ದಸರಾ ವಿಶೇಷಾಧಿಕಾರಿ ಜಿ.ಲಕ್ಷ್ಮೀಕಾಂತ್ ರೆಡ್ಡಿ ವಿಶ್ವಾಸ ವ್ಯಕ್ತಪಡಿಸಿದರು.

ಚಾಮುಂಡಿ ಬೆಟ್ಟದಲ್ಲಿ ನಾಳೆ(ಅ.3) ಬೆಳಗ್ಗೆ 9.15 ರಿಂದ 9.45 ರ ಶುಭ ವೃಶ್ಚಿಕ ಲಗ್ನದಲ್ಲಿ ಗಣ್ಯರು ನಾಡ ಅಧಿದೇವತೆ ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ಮಾಡುವ ಮೂಲಕ ನಾಡಹಬ್ಬ ದಸರಾಗೆ ಚಾಲನೆ ದೊರೆಯಲಿದೆ. 10 ದಿನಗಳ ಕಾಲ ನಡೆಯಲಿರುವ ದಸರಾ ಮಹೋತ್ಸವಕ್ಕೆ ಜಿಲ್ಲಾಡಳಿತ ಸಕಲ ಸಿದ್ಧತೆ ಮಾಡಿಕೊಂಡಿದೆ ಎಂದರು.

19 ಉಪ ಸಮಿತಿಗಳನ್ನು ರಚಿಸಿದ್ದು, ಎಲ್ಲಾ ಕಾರ್ಯಕ್ರಮಗಳ ಉಸ್ತುವಾರಿ ಜವಾಬ್ದಾರಿ ನೀಡಲಾಗಿದೆ. ದಸರಾದ ವೇಳೆ ಅರಮನೆ ಮುಂಭಾಗ ಸಾಂಸ್ಕೃತಿಕ ಕಾರ್ಯಕ್ರಮಗಳು, ದಸರಾ ಕುಸ್ತಿ, ಚಲನಚಿತ್ರೋತ್ಸವ, ವಸ್ತುಪ್ರದರ್ಶನ ಉದ್ಘಾಟನೆಯಾಗಲಿವೆ. ಯುವ ದಸರಾಕ್ಕೆ ಪ್ರಸಿದ್ಧ ಕಲಾವಿದರು ಆಗಮಿಸಲಿದ್ದಾರೆ ಎಂದರು.

ಈ ಬಾರಿ ದಸರಾ ನಡೆಸಲು ನನಗೆ ಸಂತಸವಾಗಿದ್ದು, ನಮ್ಮ ತಂಡ ಕಳೆದ ಒಂದು ತಿಂಗಳಿನಿಂದ ದಸರಾ ಸಿದ್ಧತೆಯಲ್ಲಿ ತೊಡಗಿದೆ. ತಾಯಿಯ ಆಶೀರ್ವಾದದೊಂದಿಗೆ ದಸರಾ ಯಾವುದೇ ತೊಂದರೆಯಿಲ್ಲದೇ ನಡೆಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ನಿಖಿಲ್ ಕುಮಾರಸ್ವಾಮಿಗೆ ಸನ್ಮಾನ



ಮಹಾಲಯ ಅಮಾವಾಸ್ಯೆ ಹಾಗೂ ಗಣಪತಿ ವಿಸರ್ಜನೆ ಪ್ರಯುಕ್ತ ಹುಣಸೂರು ತಾಲೂಕಿನ ತೆಂಕಲಕೊಪ್ಪಲು ಗುರುಮಠ ಆವರಣದಲ್ಲಿ ಆಯೋಜಿಸಿದ್ದ ರಸಮಂಜರಿ ಕಾರ್ಯಕ್ರಮದಲ್ಲಿ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಶಾಸಕ ಜಿ.ಡಿ.ಹರೀಶ್ ಗೌಡ, ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು, ಮಾಜಿ ಅಧ್ಯಕ್ಷ ಪಿ.ಎಂ.ಪ್ರಸನ್ನ ಸೇರಿದಂತೆ ಇನ್ನಿತರರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಪೆಟ್ಟಾರಾಪ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕೃಷ್ಣಂ ಪ್ರಣಯ ಸಖಿ (ಕ) ದೇವರ (ಕ)	2+2 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ದೇವರ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಉಪೇಂದ್ರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ದೇವರ (ತೆ)	4 ಪ್ರದರ್ಶನಗಳು
ರಾಜಕಮಲ್	
ಜೋಕರ್ ಪೋಲಿಕಾ ಡ್ಯೂಕ್ಸ್ (ಇಂ)	4 ಪ್ರದರ್ಶನಗಳು
ಸಂಗಂ	
ಭೈರಾದೇವಿ (ಕ)	4 ಪ್ರದರ್ಶನಗಳು
ಲಿಡೋ	
ಹಗ್ಗ (ಕ)	2 ಪ್ರದರ್ಶನಗಳು
ಉಪೇಂದ್ರ (ಕ)	2 ಪ್ರದರ್ಶನಗಳು
ತಿಬ್ಬಾದೇವಿ	
ಪೆಟ್ಟಾರಾಪ್ (ತ)	4 ಪ್ರದರ್ಶನಗಳು
ಪ್ರಭಾ	
ಸಂಜು (ಕ)	2 ಪ್ರದರ್ಶನಗಳು
ನೈಟ್ ರೋಡ್ (ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಲುಕ್ ಬ್ಯಾಕ್ ಬಿಯಾಂಡ್ ದಿ ಬ್ಲೇಡ್ಸ್ (ಇಂ): ಬೆ.10.20ಕ್ಕೆ, ಮೆಯ್ಯಝಗನ್ (ತ): ಮ.12.45ಕ್ಕೆ, ಸಂ.4.15ಕ್ಕೆ, ದೇವರ 1 (ತೆ): ರಾ.7.45ಕ್ಕೆ.
ಸ್ಕ್ರೀನ್ 2	ಸ್ತ್ರೀ 2 (ಹಿಂ): ಬೆ.10.10ಕ್ಕೆ, ಪೆಟ್ಟಾರಾಪ್ (ತ): ಮ.1.15ಕ್ಕೆ, ಹಿಟ್ಲರ್ (ತ): ಸಂ.4.15ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ರಾ.7ಕ್ಕೆ, ಮೆಯ್ಯಝಗನ್ (ತ): ರಾ.10.05ಕ್ಕೆ.
ಸ್ಕ್ರೀನ್ 3	ಕೇದಾರ್‌ನಾಥ್ ಕುರಿ ಫಾರಂ (ಕ): ಬೆ.10.40ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.1.10ಕ್ಕೆ, ಸಂಜು (ಕ): ಸಂ.4.25ಕ್ಕೆ, ಅನ್ನ (ಕ): ರಾ.7ಕ್ಕೆ, ಕೃಷಂ ಪ್ರಣಯ ಸಖಿ (ಕ): ರಾ.9.40ಕ್ಕೆ.
ಸ್ಕ್ರೀನ್ 4	ದೇವರ 1 (ತೆ): ಬೆ.8ಕ್ಕೆ, ಬೆ.11.45ಕ್ಕೆ, ಮ.3.15ಕ್ಕೆ, ಸಂ.6.45ಕ್ಕೆ, ರಾ.10.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಕೃಷ್ಣಂ ಪ್ರಣಯ ಸಖಿ (ಕ): ಮ.1.15ಕ್ಕೆ, ದಿ ಗ್ರೇಟೆಸ್ಟ್ ಆಫ್ ಆಲ್ ಟೈಂ (ತ): ಸಂ.6.25ಕ್ಕೆ, ಹಿಟ್ಲರ್ (ತ): ರಾ.9.45ಕ್ಕೆ.
ಸ್ಕ್ರೀನ್ 2	ದೇವರ 1 (ತೆ): ಬೆ.8ಕ್ಕೆ, ಬೆ.11.20ಕ್ಕೆ, ಮ.2.40ಕ್ಕೆ, ಸಂ.6.05ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ದೇವರ 1 (ಕ): ಬೆ.10ಕ್ಕೆ, ಮ.1.20ಕ್ಕೆ, ಸಂ.4.40ಕ್ಕೆ, ದೇವರ 1 (ತೆ): ರಾ.8ಕ್ಕೆ.
ಸ್ಕ್ರೀನ್ 4	ಇಬ್ಬನಿ ತಬ್ಬಿದ ಇಳೆಯಲಿ (ಕ): ಬೆ.10.30ಕ್ಕೆ, ಮ.1.30ಕ್ಕೆ, ಹಿಟ್ಲರ್ (ತ): ಸಂ.4.35ಕ್ಕೆ, ದೇವರ 1 (ತೆ): ರಾ.7.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಏಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ರೇಸ್

9ನೇ ದಿನ, ಗುರುವಾರ, 3–10–2024

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ

I. ಸಿಕಂದ್ರಬಾದ್ ಪ್ಲೇಟ್ ಡಿII–1100 ಮೀ. ರೇಟೆಡ್ 20 ರಿಂದ 45. (ಮೈಸೂರು ಬೇಸ್ಡ್ ಹಾರ್ಸ್). ಮಧ್ಯಾಹ್ನ 2.00ಕ್ಕೆ
1. ವಾಯು 2. ಮಿಸ್ಟಿಕಲ್ ಮರ್ಲಿನ್ 3. ನಾಟಿ ಮೆಥೆಡ್

II. ಹೋಟೆಲ್ RRR ಟ್ರೋಫಿ ಡಿII–1400 ಮೀ. ರೇಟೆಡ್ 40 ರಿಂದ 65. (ಮೈಸೂರು ಬೇಸ್ಡ್ ಹಾರ್ಸ್). ಮ.2.30ಕ್ಕೆ
1. ಡೈನಾಮಿಕ್ ಫೋರ್ಸ್ 2. ಸಾಕ್ರೆಟೀಸ್ 3. ಆ್ಯಬ್‌ಸೆಲ್ಯೂಟ್ ಕಾನ್‌ಕರರ್

III. ಸಿಕಂದ್ರಬಾದ್ ಪ್ಲೇಟ್ ಡಿI–1100 ಮೀ. ರೇಟೆಡ್ 20 ರಿಂದ 45. (ಮೈಸೂರು ಬೇಸ್ಡ್ ಹಾರ್ಸ್). ಮಧ್ಯಾಹ್ನ 3.00ಕ್ಕೆ
1. ಆ್ಯಬ್‌ಸೆಲ್ಯೂಟ್ ಕೇಸರಿ 2. N.R.I. ಏಸ್ 3. ರೆವೆಲಾಟರ್

IV. ಹೋಟೆಲ್ RRR ಟ್ರೋಫಿ ಡಿI–1400 ಮೀ. ರೇಟೆಡ್ 40 ರಿಂದ 65. (ಮೈಸೂರು ಬೇಸ್ಡ್ ಹಾರ್ಸ್). ಮ.3.30ಕ್ಕೆ
1. ಮೂನ್‌ಲೈಟ್ ಕ್ವೀನ್ 2. ಬ್ರೈಟ್ ಸ್ಟಾರ್ 3. ಹೀರೊಯಿಸಮ್

V. ರಾಜಕುಮಾರಿ ಲೀಲಾವತಿ ದೇವಿ ಮೆಮೋರಿಯಲ್ ಟ್ರೋಫಿ –1600 ಮೀ. ರೇಟೆಡ್ 80 ಮತ್ತು ಮೇಲ್ವರ್ಗ. ಸಂ.4.00ಕ್ಕೆ
1. ಕಾಲಮಿಸ್ಟಿ 2. ಗೋಲ್ಡನ್ ಫೀಕ್ಸ್ 3. ಸೆರೆಗಾ

VI. ಮೀರತ್ ಪ್ಲೇಟ್ –1100 ಮೀ. ರೇಟೆಡ್ 40 ರಿಂದ 65. ಸಂ.4.30ಕ್ಕೆ
1. ಮಾಕ್ರಾನ್ 2. ಇಂಡಿಯನ್ ಬ್ಲೂಸ್ 3. ರಾಪಿಡಸ್

VII. ಜಗನ್ಮೋಹನ ಪ್ಯಾಲೇಸ್–1400 ಮೀ. ರೇಟೆಡ್ 20 ರಿಂದ 45. ಸಂ.5.00ಕ್ಕೆ
1. ಏನ್‌ಶಿಯಂಟ್ ಹಿಸ್ಟರಿ 2. ರಿಂಗ್ ಮಾಸ್ಟರ್ 3. ಮೆಗಾ ಸಕ್ಸಸ್

ದಿನದ ಅತ್ಯುತ್ತಮ	ಮಕ್ರಾನ್
ಡಬ್ಬಲ್	ವಾಯು, ಕಾಲಮಿಸ್ಟಿ
ಜಾಕ್‌ಪಾಟ್	3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್	4, 5, 6 ಮತ್ತು 7
I ಟ್ರಿಬಲ್	2, 3 ಮತ್ತು 4
II ಟ್ರಿಬಲ್	5, 6 ಮತ್ತು 7
ಎಕ್ಸ್‌ಆಕ್ಟ್	1 ರಿಂದ 7

ಟಿಪ್‌ಸ್ಟರ್ ಪಿಜೆಸಿ



ವಿಶ್ವವಿಖ್ಯಾತ ನಾಡಹಬ್ಬ ದಸರಾ ಉದ್ಘಾಟನಾ ಸಮಾರಂಭಕ್ಕೆ
ಆಗಮಿಸುತ್ತಿರುವ ನಾಡಿನ ಜನಪ್ರಿಯ
ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ,
ಉಪಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷರಾದ
ಡಿ.ಕೆ.ಶಿವಕುಮಾರ್
ಹಾಗೂ ಎಲ್ಲಾ ಗಣ್ಯರಿಗೆ ಸ್ವಾಗತ
ಹಬ್ಬವು ನಾಡಿನ ಜನತೆಗೆ
ಸುಖ ಸಮೃದ್ಧಿಯನ್ನು ತರಲಿ ಎಂದು ಆಶಿಸುವ
ಕೆ.ಮರೀಗೌಡ
ಅಧ್ಯಕ್ಷರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ,
ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷರು
ಹಾಗೂ ಕೆ.ಪಿ.ಸಿ.ಸಿ ಸದಸ್ಯರು, ಮೈಸೂರು